
ವೈದ್ಯ ಬರಹಗಾರರ ಸಮಿತಿ ಸಾರಥ್ಯದಲ್ಲಿ


# ವೈದ್ಯ ಸಂಪದ


ಕನ್ನಡ ಬಳಸಿ ವೈದ್ಯ ಸಾಹಿತ್ಯ ಬೆಳೆಸಿ


ಸಂಪುಟ: 2 ಸಂಚಿಕೆ: 1 ದ್ವೈಮಾಸಿಕ ಜನವರಿ–ಫೆಬ್ರವರಿ 2023 ಪುಟಗಳು: 52


ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆಯ ಸದಸ್ಯರ ಆಂತರಿಕ ವಿತರಣೆಗಾಗಿ ಮಾತ್ರ





## ಪ್ರಥಮ ವಾರ್ಷಿಕೋತ್ಸವ

# ಹೊಸ ವರ್ಷದ ಶುಭಾಶಯಗಳು

## ಸಂಪದದೊಳಗೆ...


ಸಂಪಾದಕೀಯ – ಡಾ ಸುರೇಶ ಸಗರದ ಪುಟ 3

ರಾಜ್ಯಾಧ್ಯಕ್ಷರ ನುಡಿ – ಡಾ ಎಸ್ ಬಿ ಲಕ್ಕೋಳ್ ಪುಟ 4

ಸಮಿತಿಯ ಅಧ್ಯಕ್ಷರ ನುಡಿ – ಡಾ ಶಿವಾನಂದ ಕುಬಸದ ಪುಟ 5

ಕಣ್ಣಿನೊಳಗೇ ಇಂಜೆಕ್ಷನ್ – ಅಕ್ಷಿಪಟಲ ಚಿಕಿತ್ಸೆಗೆ ವರದಾನ (ಪ್ರಚಲಿತ) – ಡಾ ತನುಶ್ರೀ ಹೆಗಡೆ ಪುಟ 6

ವೈದ್ಯಕೀಯ ರಂಗದ ಮಹಿಳೆಯರು (ಪ್ರಚಲಿತ) – ಡಾ ಅಶ್ವಿನಿ ರಾಮಸ್ವಾಮಿ ಪುಟ 8

ರಕ್ತ ಹೆಪ್ಪುಗಟ್ಟಿದಾಗ (ಕಥೆ) – ಡಾ ಮಹೇಶ ಕೋರೇಗೋಳ ಪುಟ 10

ಬಸವ ಮತ್ತು – ಸರಜೂ ಕಾಟ್ಕರ್ (ಕೃತಿ ಪರಿಚಯ) – ಡಾ ಅರವಿಂದ ಎಸ್ ಟಿ ಪುಟ 12

ಏಡ್ಸ್ ನಿರ್ಮೂಲನೆ ಮಾಡೋಣ (ಕಾಯಿಲೆ) – ಡಾ ದಿನೇಶ ಗುಡಿ ಪುಟ 14

ರಕ್ತದಾನ ಅನುಭವ ಕಥನ (ವೈದ್ಯೇತರ) – ಡಾ ರಕ್ಷಾ ರಾವ್ ಪುಟ 17

ಪ್ರಾರ್ಥನೆ (ವೈದ್ಯೇತರ) – ಡಾ ಶ್ರೀನಿವಾಸ ಹರಪನಹಳ್ಳಿ ಪುಟ 19

ಡಾ ಚಿತ್ಪಾಡಿ ರಾಮಕೃಷ್ಣ ಬಲ್ಲಾಳ (ಸಂದರ್ಶನ) – ಡಾ ಅಣ್ಣಯ್ಯ ಕುಲಾಲ್ ಉಳ್ತೂರು ಪುಟ 21

ಕೀರ್ತಿಘೋಷಗಳು – ಕಥೆ (ವಿದ್ಯಾರ್ಥಿ ಲೋಕ) – ರಘು ಪುಟ 24

ಬದಲಾದ ಬಾಲ್ಯದ ದಿನಗಳು – ಕವನ / ವಿಮರ್ಶೆ (ವಿದ್ಯಾರ್ಥಿ ಲೋಕ) – ದೀಪಿಕಾ ಎಚ್ ಎಸ್ / ಡಾ ಆರ್.ಕೆ. ಸರೋಜ ಪುಟ 26

ಇನ್ಸುಲಿನ್ ನೂರು ವರುಷಗಳ ಪಯಣ (ಅನಿವಾಸಿ ಲೋಕ) – ಡಾ ಮುರಳಿ ಹತ್ವಾರ ಪುಟ 28

ಅರಿವಿನ ಆರೋಹಣ (ಅಧ್ಯಾತ್ಮ ಮತ್ತು ಆರೋಗ್ಯ) – ಡಾ ಜೇ ಎನ್ ಭಟ್ ಪುಟ 30

ವೈದ್ಯಕೀಯ ಗರ್ಭಪಾತ ಮಸೂದೆ 2021 (ವೈದ್ಯಕೀಯ ಮತ್ತು ಕಾನೂನು) – ಡಾ ಶಿವರಾಜ ಕೆ ಪುಟ 32

ವೈದ್ಯ ಲೋಕದ ವಿಸ್ಮಯ – ಡಾ ನಾ ಸೋಮೇಶ್ವರ ಪುಟ 35

ಸಮಿತಿಯ ಮತ್ತು ಶಾಖೆಗಳ ಕನ್ನಡ ಕಾರ್ಯಕ್ರಮಗಳ ವರದಿ – ಡಾ ವೀಣಾ ಎಸ್ ಭಟ್ ಪುಟ 38

ಕಾವ್ಯ ಸಂಪದ – ಡಾ ಮೃದುಲ ಬಸವರಾಜ / ಡಾ ಶ್ರೀನಿವಾಸ ಹರಪನಹಳ್ಳಿ ಪುಟ 45

ಕಾವ್ಯ ಸಂಪದ – ಡಾ ಸುನೀಲ ಚಂದ್ರ ಅವರಾದಿ / ಡಾ ಶ್ರೀಶೈಲ ಮಾದಣ್ಣವರ ಪುಟ 46

ಕಾವ್ಯ ಸಂಪದ / ನಗೆ ಹನಿ – ಡಾ ಸೌಮ್ಯ ಕೆ ವಿ / ಡಾ ಕವಿತಾ ಸದಾಶಿವ ಪುಟ 47

ಪದಬಂಧ – ಡಾ ರಮೇಶ ಬಾಬು ಕೆ ಪುಟ 48

ಹನಿಗವನ – ಡಾ ಇಂದಿರಾ ದೊಡ್ಡಬಳ್ಳಾಪುರ / ಡಾ ಚಂದ್ರಕಲಾ ಸಿ ಪುಟ 49

ಚಿತ್ರ ಸಂಪದ –ಡಾ. ಅರವಿಂದ ಪಟೇಲ್ / ಡಾ ಪ್ರಿಯಾ ಭಾಲ್ಕಿ ಪುಟ 50


**ಲೇಖಕರಿಗೆ ಮಾಹಿತಿ:**

ಲೇಖನಗಳನ್ನು ವಿಭಾಗೀಯ ಸಂಪಾದಕರಿಗೆ ಮೇಲ್ ಮೂಲಕ ಕಳುಹಿಸಬೇಕು

ಲೇಖನಗಳನ್ನು ವರ್ಡ್ ಫೈಲ್ ನಲ್ಲಿ ನುಡಿ ಫಾಂಟ್‌ಗಳನ್ನು ಬಳಸಿ ಬರೆಯಬೇಕು

ಲೇಖನ ಕಳುಹಿಸಿದ ನಂತರ ವಿಭಾಗೀಯ ಸಂಪಾದಕರಿಗೆ ಸಂದೇಶ ಅಥವಾ ವಾಟ್ಸಾಪ್ ಮೂಲಕ ತಿಳಿಸಿ

ಪ್ರಕಟಿಸಿದ ಲೇಖನಗಳಿಗೆ ಲೇಖಕರೇ ಹೊಣೆ

ಡಾ ಎಸ್ ಬಿ ಲಕ್ಕೋಳ್
ರಾಜ್ಯಾಧ್ಯಕ್ಷರು
ಡಾ ಶ್ರೀನಿವಾಸ್ ಎಸ್
ನಿಯೋಜಿತ ಅಧ್ಯಕ್ಷರು
ಡಾ ಬಿ ಪಿ ಕರುಣಾಕರ್
ಕಾರ್ಯದರ್ಶಿ
ಡಾ ಶಿವಾನಂದ ಕುಬಸದ
ಅಧ್ಯಕ್ಷರು, ಕನ್ನಡ ವೈದ್ಯ ಬರಹಗಾರರ ಸಮಿತಿ
drsmkubsad@gmail.com | +919448012767

ಪ್ರಧಾನ ಸಂಪಾದಕರು: ಡಾ ಸುರೇಶ ಸಗರದ
drssagarad@hotmail.com | 9448139339
ವಿಭಾಗೀಯ ಸಂಪಾದಕರು
ಪ್ರಚಲಿತ:
ಡಾ ಎಚ್ ಎಸ್ ಮೋಹನ್
drhsmohan@gmail.com | +919448173670
ಕಥೆ:
ಡಾ ದಿವ್ಯಾ ಕೆ ಎನ್
divyaural@yahoo.co.in | +919886157094
ಕೃತಿ ಪರಿಚಯ:
ಡಾ ಅಣ್ಣಯ್ಯ ಕುಲಾಲ್ ಉಳ್ತೂರು
drkulalannayya@gmail.com | +919448012028
ಕಾಯಿಲೆ / ಚಿಕಿತ್ಸೆ:
ಡಾ ಉಮಾ ಮಹೇಶ್ವರಿ ಎಸ್
uma_sura@ yahoo.in | +918277070611
ವೈದ್ಯೇತರ:
ಡಾ ವಿನಯ ಶ್ರೀನಿವಾಸ್
vinaya_s@rocketmail.com | +919844083284
ವ್ಯಕ್ತಿ ವಿಷಯ / ಸಂದರ್ಶನ:
ಡಾ ಅರವಿಂದ ಪಟೇಲ್
aravindculture@gmail.com | +919448918764
ವೈದ್ಯ ಲೋಕದ ವಿಸ್ಮಯ:
ಡಾ ನಾ ಸೋಮೇಶ್ವರ
naasomeswara@gmail.com | +919880465661
ವಿದ್ಯಾರ್ಥಿ ಲೋಕ:
ಡಾ ಶುಭ್ರತ ಕೆ ಎಸ್
shubrataks@gmail.com | +919448149927
ಅನಿವಾಸಿ ಲೋಕ:
ಡಾ ಶಿವಶಂಕರ್ ಎನ್ ಮೇಟಿ
drmeti123@gmail.com | +447894354400
ನಾಲ್ಕನೇಯ ಆಯಾಮ (ಅಧ್ಯಾತ್ಮಿಕ ಮತ್ತು ಆರೋಗ್ಯ):
ಡಾ ವೀಣಾ ಎನ್ ಸುಳ್ಯ
drnveena@gmail.com | +919448215940
ಭಾರತೀಯ ವೈದ್ಯಕೀಯ ಸಂಘದ ಕನ್ನಡ ಕಾರ್ಯಕ್ರಮಗಳು
ಡಾ ವೀಣಾ ಎಸ್ ಭಟ್
veenaseetharambhat@gmail.com | +919480353878
ಪದಬಂಧ/ ಪದಕೋಶ/ಚಿಣ್ಣರ ಲೋಕ/ಹನಿಗವನ:
ಡಾ ಕವಿತಾ ಸದಾಶಿವ
kavitha.sadashiv@gmail.com | +919480329699
ಆರೋಗ್ಯ ದಿನಾಚರಣೆ:
ಡಾ ರಶ್ಮಿ ಕುಂದಾಪುರ
dr.rashmi.kundapur@gmail.com |+919880496567
ಸಂಘಟನೆ:
ಡಾ ಮಧುಸೂದನ ಕಾರಿಗನೂರು
madhusudhanva@gmail.com | +919448237145
ಕಾನೂನು ಮತ್ತು ವೈದ್ಯಕೀಯ:
ಡಾ ಶಿವರಾಜ್ ಕೆ
sahanachildrenhospital729@gmail.com | +919535830729
ಕಾವ್ಯ ಸಂಪದ / ವಿಮರ್ಶೆ:
ಡಾ ಗೋವಿಂದ ಹೆಗಡೆ
hegadegs@gmail.com | ±919353118024
ಚಿತ್ರ ಸಂಪದ:
ಡಾ ಪ್ರಿಯಾ ಭಾಲ್ಕಿ / ಡಾ ಅರವಿಂದ ಪಟೇಲ್
drpriyabhalki@gmail.com |+919980888922
ವಿಳಾಸ:
ವೈದ್ಯ ಸಂಪದ
ಐ ಎಮ್ ಎ ಹೌಸ್, ಐ ಎಮ್ ಎ ವೃತ್ತ,
ಆಲೂರು ವೆಂಕಟರಾವ್ ರಸ್ತೆ, ಬೆಂಗಳೂರು 560018
ದೂರವಾಣಿ: 080 26703255, vaidyasampadaeditor@gmail.com

# ಸಂಪಾದಕೀಯ...



ಡಾ. ಸುರೇಶ ಸಗರದ

**ಆತ್ಮೀಯ ಓದುಗರೇ,**

## ಹೊಸ ವರುಷದ ಹಾರ್ದಿಕ ಶುಭಾಶಯಗಳು

ವೈದ್ಯ ಸಂಪದಕ್ಕೆ ಪ್ರಥಮ ವಾರ್ಷಿಕೋತ್ಸವದ ಸಡಗರ. ಕಳೆದ ಜನವರಿಯಲ್ಲಿ ನಾಡೋಜ ಮಹೇಶ ಜೋಷಿ ಅವರಿಂದ ಬಿಡುಗಡೆಯಾದ ವೈದ್ಯ ಸಂಪದ ಯಶಸ್ವಿ ಒಂದು ವರುಷವನ್ನು ಪೂರೈಸಿದೆ. ಕಳೆದ ಆರು ಸಂಚಿಕೆಗಳ ವಿಷಯ ಮತ್ತು ವಿನ್ಯಾಸ ಕುರಿತು ಉತ್ತಮ ಅಭಿಪ್ರಾಯ ವ್ಯಕ್ತವಾಗಿದೆ. 22 ರ ಸಂಪಾದಕ ಮಂಡಳಿಯ ಕಾರ್ಯ ಶ್ಲಾಘನೀಯ.

23 ರ ಆವೃತ್ತಿಗಾಗಿ ನೂತನ ಸಂಪಾದಕ ಮಂಡಳಿ ಉತ್ಸುಕವಾಗಿದೆ. ಅಧ್ಯಾತ್ಮ ಮತ್ತು ಆರೋಗ್ಯ ಹಾಗೂ ವೈದ್ಯಕೀಯ ಮತ್ತು ಕಾನೂನು ಎಂಬ ಎರಡು ಹೊಸ ವಿಭಾಗಗಳನ್ನು ಈ ಬಾರಿ ಆರಂಭಿಸಲಾಗಿದೆ.




ಪಿಡಿಎಫ್ ಆವೃತ್ತಿಯಲ್ಲಿ ಉಚಿತವಾಗಿ ದೊರೆಯುತ್ತಿರುವುದರಿಂದ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಕನ್ನಡ ಓದುಗರನ್ನು ತಲುಪಲು ಸಾಧ್ಯವಾಗಿದೆ. ಮುದ್ರಣ ಆವೃತ್ತಿಯನ್ನು ತರಲು ಚಿಂತನೆ ನಡೆದಿದೆ. ಎಲ್ಲರನ್ನೂ ತಲುಪುವ ದೃಷ್ಟಿಯಿಂದ ಪಿಡಿಎಫ್ ಉಚಿತ ಆವೃತ್ತಿಯನ್ನು ಮುಂದುವರೆಸುವುದು ಅವಶ್ಯಕ.

ವೈದ್ಯ ಸಂಪದದ ವಾರ್ಷಿಕೋತ್ಸವವನ್ನು ಜನವರಿ 8 ರಂದು ಬೆಂಗಳೂರಿನಲ್ಲಿ ಸಿರಿಂಜ್ ಹಿಡಿವ ಕೈ ಪೆನ್ನು ಹಿಡಿದಾಗ ಲೇಖಕರ ಸಮಾವೇಶದೊಂದಿಗೆ ಆಯೋಜಿಸಲಾಗಿದೆ. ಭಾರತೀಯ ಸಂಘದ ನೇತೃತ್ವದಲ್ಲಿ ಪ್ರಕಾಶನ ಮತ್ತು ಮುದ್ರಣದ ಕುರಿತು ಚರ್ಚೆಯಾಗಲಿದೆ.

ಭಾರತೀಯ ವೈದ್ಯಕೀಯ ಸಂಘ, ಭದ್ರಾವತಿ ಶಾಖೆಯ ಅಧ್ಯಕ್ಷರು

41ನೇ ಪುಟಕ್ಕೆ



**ಡಾ॥ ಶಿವಕುಮಾರ ಬಿ. ಲಕ್ಕೋಳ**
ಅಧ್ಯಕ್ಷರು (2022–23)
ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು

# ಹೊಸ ವರ್ಷದ ಶುಭಾಶಯಗಳು

**ಪ್ರೀತಿಯ ಸಹೃದಯಿ ವೈದ್ಯ ಸಂಪದ ಓದುಗ ಮಿತ್ರರೇ,**

2023 ರ ಹಾರ್ದಿಕ ಶುಭಾಶಯಗಳು. ಹೊಸ ವರುಷವನ್ನು ವೈದ್ಯ ಸಂಪದದ ಬಳಗ ವಾರ್ಷಿಕೋತ್ಸವದ ಮೂಲಕ ಆಚರಿಸುತ್ತಿದ್ದಾರೆ. ಉತ್ತಮವಾಗಿ ಪ್ರಥಮ ವರುಷ ಪೂರೈಸಿದ್ದಕ್ಕಾಗಿ ಸಂಪಾದಕ ಮಂಡಳಿಗೆ ಹಾರ್ದಿಕ ಅಭಿನಂದನೆಗಳು. ವೈದ್ಯ ಸಂಪದದ ಬೆಳವಣಿಗೆಗೆ ಅವಶ್ಯವಿರುವ ಎಲ್ಲಾ ಸಹಕಾರವನ್ನು ರಾಜ್ಯ ಸಮಿತಿ ನೀಡಲಿದೆ. ಕನ್ನಡ ವೈದ್ಯ ಬರಹಗಾರರ ಸಮಿತಿ ಡಾ ಶಿವಾನಂದ ಕುಬಸದ ಅವರ ನೇತೃತ್ವದಲ್ಲಿ ಹೊಸ ಹೆಜ್ಜೆಗಳನ್ನು ಇಡಲಿದೆ.

ಬೆಳಗಾವಿಯಲ್ಲಿ ನಡೆದ ವಿಧಾನಸಭೆಯ ಕಲಾಪದ ಸಂದರ್ಭದಲ್ಲಿ ರಾಜ್ಯ ಸಮಿತಿ ಮಾನ್ಯ ಮುಖ್ಯ ಮಂತ್ರಿಗಳನ್ನು, ಆರೋಗ್ಯ ಸಚಿವರನ್ನು ಇತರೆ ಮಂತ್ರಿಗಳನ್ನು ಮತ್ತು ವಿರೋಧ ಪಕ್ಷದ ನಾಯಕರನ್ನು ಭೇಟಿಯಾಗಿ ಪ್ರಸ್ತುತ ವಿದ್ಯಮಾನಗಳ ಕುರಿತು ಚರ್ಚೆ ನಡೆಸಿತು. ಕೊರೊನಾದ ಭಯದ ಹಿನ್ನಲೆಯಲ್ಲಿ ಭಾರತೀಯ ವೈದ್ಯಕೀಯ ಸಂಘ ಎಲ್ಲಾ ರೀತಿಯ ಸಹಕಾರ ಸರಕಾರಕ್ಕೆ ನೀಡುವುದಾಗಿ ಭರವಸೆ ನೀಡಲಾಯಿತು. ಯಶಸ್ವಿನಿ ಯೋಜನೆ ಮತ್ತು ಇತರೆ ಯೋಜನೆಗಳ ಕುರಿತು ಭಾರತೀಯ ವೈದ್ಯಕೀಯ ಸಂಘದ ಅಭಿಪ್ರಾಯವನ್ನು ತಿಳಿಸಿ ಸೂಕ್ತ ಮಾರ್ಪಾಡುಗಳನ್ನು ಮಾಡಲು ವಿನಂತಿಸಲಾಯಿತು. ಸರಕಾರದಿಂದ ನಮ್ಮ ಕ್ಲಿನಿಕ್ ಗಳನ್ನು ಆರಂಭಿಸದ್ದಕ್ಕಾಗಿ ಅಭಿನಂದನೆಗಳನ್ನು ಸೂಚಿಸಿ ಅವುಗಳಿಗೆ ಮೂಲಭೂತ ಸೌಕರ್ಯಗಳಲ್ಲಿ ಕೊರತೆಯಾಗದಂತೆ ಮುತುವರ್ಜಿ ವಹಿಸಲು ತಿಳಿಸಲಾಯಿತು. ಸುಮಾರು 8000 ಕ್ಕೂ ಅಧಿಕ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿವೆ. ಪ್ರತಿ ವರುಷ ಇವುಗಳಲ್ಲಿರುವ ಮೂಲಭೂತ ಸೌಕರ್ಯಗಳ ಲೆಕ್ಕ ಪರಿಶೋಧನೆಯಾಗಬೇಕು ಮತ್ತು ಅದರ ಆಧಾರದ ಮೇಲೆ ಕ್ರಮಗಳನ್ನು ಕೈಗೊಂಡು ವೈದ್ಯರ ಹಾಗೂ ಇತರೆ ಸಿಬ್ಬಂದಿಗಳ ಒತ್ತಡವನ್ನು ಕಡಿಮೆ ಮಾಡಿ ಮೌಲ್ಯಯುತ ಚಿಕಿತ್ಸೆ ಸಾರ್ವಜನಿಕರಿಗೆ ದೊರಕುವಂತೆ ಮಾಡಬೇಕು.

ರಾಜ್ಯ ಕಾರ್ಯಕಾರಿ ಸಮಿತಿ ಈಗಾಗಲೇ ಅನೇಕ ಶಾಖೆಗಳಿಗೆ ಭೇಟಿ ನೀಡಿ ಅಲ್ಲಿಯ ಸದಸ್ಯರು ಮತ್ತು ಪದಾಧಿಕಾರಿಗಳೊಂದಿಗೆ ಚರ್ಚೆ ಮಾಡಿದೆ. ಎಲ್ಲಾ ಶಾಖೆಗಳಲ್ಲಿ ಮತ್ತು ವೈದ್ಯಕೀಯ ವಿದ್ಯಾಲಯಗಳಲ್ಲಿ ಕನ್ನಡ ಸಮಿತಿ ಹಾಗೂ ಕನ್ನಡ ಸಂಘಗಳನ್ನು ಸ್ಥಾಪಿಸಲು ಮತ್ತು ಬಲಪಡಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು.

ಹಾವೇರಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಲಿದ್ದು ವೈದ್ಯರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಿ ಹಾಜರಾಗಬೇಕು.

ಹೊಸ ವರುಷದ ಶುಭಾಶಯಗಳೊಂದಿಗೆ

ಡಾ॥ ಶಿವಕುಮಾರ ಬಿ. ಲಕ್ಕೋಳ



**ಡಾ ಶಿವಾನಂದ ಕುಬಸದ**
ಅಧ್ಯಕ್ಷರು
ಕನ್ನಡ ವೈದ್ಯ ಬರಹಗಾರರ ಸಮಿತಿ

# ಹೊಸ ವರ್ಷದ ಶುಭಾಶಯಗಳು

**ಆತ್ಮೀಯ ಓದುಗರೇ**

ಕನ್ನಡ ವೈದ್ಯ ಬರಹಗಾರರ ಸಮಿತಿಗೆ ಈ ವರ್ಷ ಅಧ್ಯಕ್ಷನಾಗಿ ಆಯ್ಕೆಯಾಗಿದ್ದು ನನ್ನ ಬದುಕಿನ ಅತ್ಯಂತ ಹೆಮ್ಮೆಯ ಹಾಗೂ ಸಂತೋಷದ ವಿಷಯಗಳಲ್ಲೊಂದು. ಅದಕ್ಕೆ ಕಾರಣರಾದ ಎಲ್ಲರಿಗೂ ಮೊದಲಿಗೆ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ. ಈ ಸ್ಥಾನ ತುಂಬ ಘನತೆಯ ಹಾಗೂ ಮಹತ್ವದ ಸ್ಥಾನಗಳಲ್ಲೊಂದು. ಸಮಿತಿ ಪ್ರಾರಂಭವಾದಾಗಿನಿಂದ ನಿಶ್ಚಿತವಾದ ಹಾಗೂ ದೃಢವಾದ ಹೆಜ್ಜೆಗಳನ್ನು ಇಡುತ್ತಿದೆ. ಕರ್ನಾಟಕದಲ್ಲಿ ಕನ್ನಡಕ್ಕೆ ಸಾರ್ವಭೌಮತ್ವ ಸಲ್ಲಬೇಕು ಎನ್ನುವುದು ಸಮಿತಿಯ ಮೂಲ ಆಶಯ. ಆ ನಿಟ್ಟಿನಲ್ಲಿ ಪ್ರತಿ ವರ್ಷವೂ ಹೊಸ ಗುರಿಗಳನ್ನು ಇಟ್ಟುಕೊಂಡು ಅವುಗಳನ್ನು ತಲುಪುವಲ್ಲಿ ಸಮಿತಿಯು ಯಶಸ್ವಿಯಾಗುತ್ತಿದೆ, ಎನ್ನುವುದು ಗಮನಿಸಬೇಕಾದ ಅಂಶ. ಅದಕ್ಕೆ ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ರಾಜ್ಯ ಶಾಖೆಯ ಅಧ್ಯಕ್ಷರಾದ ಡಾ. ಶಿವಕುಮಾರ ಲಕ್ಕೋಳ, ಪದಾಧಿಕಾರಿಗಳು, ಸದಸ್ಯರು ಹಾಗೂ ಹಿತೈಷಿಗಳು ಕಾರಣ, ಎನ್ನುವುದನ್ನು ಪತ್ರೇಕವಾಗಿ ಹೇಳಬೇಕಿಲ್ಲ.

'ವೈದ್ಯಸಂಪದ'ವು ಸಮಿತಿಯ ವಿಶಿಷ್ಟ ಹಾಗೂ ಮಹತ್ವದ ಹೆಜ್ಜೆ. ಅದು ಪ್ರಾರಂಭವಾದಾಗಿನಿಂದ ಅದನ್ನು ತುಂಬ ಮುತುವರ್ಜಿಯಿಂದ ಮತ್ತು ಅಷ್ಟೇ ಸಮರ್ಥವಾಗಿ ನಿಭಾಯಿಸುವಲ್ಲಿ ಡಾ.ಸುರೇಶ ಸಗರದ ನೇತೃತ್ವದ ಸಂಪಾದಕ ಮಂಡಳಿ ಸಫಲವಾಗಿದೆ. ಪತ್ರಿಕೆಯ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೆ, ನಿಗದಿತ ದಿನದಂದು ತಪ್ಪದೆ ಪತ್ರಿಕೆ ಬಿಡುಗಡೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ಅಚ್ಚು ಹಾಕಿಸಿ ಸದಸ್ಯರಿಗೆ ಹಾಗೂ ಜನಸಾಮಾನ್ಯರಿಗೆ ಲಭ್ಯವಾಗುವಂತೆ ಮಾಡುವ ಗುರಿ ಇದೆ. ಡಾ. ವೀಣಾ ಎನ್. ಸುಳ್ಯರವರು ಪ್ರತಿ ರವಿವಾರ ನಡೆಸಿಕೊಡುವ 'ಸಾಹಿತಿಗಳೊಂದಿಗೆ ಒಂದು ಸಂಜೆ' ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆದಿದ್ದು ಅದಾಗಲೇ 76 ಕಂತುಗಳನ್ನು ಪೂರೈಸಿದೆ. ಜನರೆಡೆಗೆ ಭಾ. ವೈ.ಸಂಘವನ್ನು ತಲುಪಿಸುವ ಉದ್ದೇಶದಿಂದ ಪ್ರಾರಂಭಿಸಲಾದ 'ದತ್ತಿ ಉಪನ್ಯಾಸ'ದ ಮೊದಲ ಕಂತು, ಡಾ. ವಿನಯಾ ಶ್ರೀನಿವಾಸರವರಿಂದ ಅದಾಗಲೇ ಯಶಸ್ವಿಯಾಗಿದೆ. ಮುಂದಿನ ದಿನಗಳಲ್ಲಿ ನಿರಂತರ ಉಪನ್ಯಾಸಗಳನ್ನು ಯೋಜಿಸಲಾಗುವುದು. ಹಿರಿಯ ವೈದ್ಯರಿಂದ ರಚಿತವಾದ ಮಹತ್ವದ ಕೃತಿಗಳನ್ನು ಪರಿಚಯಿಸುವ ಉದ್ದೇಶದಿಂದ ಪ್ರಾರಂಭಿಸಲಾದ 'ಬದುಕು–ಬರೆಹ' ಎಂಬ ಯಶಸ್ವಿ ಆನ್ಲೈನ್ ಕಾರ್ಯಕ್ರಮದಲ್ಲಿ ನಮ್ಮ ಹೆಮ್ಮೆಯ ವೈದ್ಯ ಡಾ. ಸ.ಜ. ನಾಗಲೋಟಿಮಠರವರ 'ಬಿಚ್ಚಿದ ಜೋಳಿಗೆ' ಪುಸ್ತಕವನ್ನು ಧಾರವಾಡದ ಅಭ್ಯುದಯ ಪತ್ರಕರ್ತ ಶ್ರೀ ಹರ್ಷವರ್ಧನ ಶೀಲವಂತರವರು ಪರಿಚಯಿಸಿದ್ದು, ಡಾ. ಶುಭ್ರತಾರವರ ಉಸ್ತುವಾರಿಯಲ್ಲಿ. ಇವೆಲ್ಲವೂ ಹಿಂದಿನ ಸಮಿತಿಯ ಅಧ್ಯಕ್ಷ ಡಾ.ಅರವಿಂದ ಪಟೇಲರ ನೇತೃತ್ವದ ಸಮಿತಿಯ ಯೋಜನೆಗಳು. 2023, ಜನವರಿ 8 ರಂದು ಬೆಂಗಳೂರಿನ ಭಾ.ವೈ.ಸಂಘದ ಸಭಾಂಗಣದಲ್ಲಿ 'ವೈದ್ಯಸಂಪದ ವಾರ್ಷಿಕೋತ್ಸವ ಹಾಗೂ ಲೇಖಕರ ಸಮಾವೇಶ' ಹಮ್ಮಿಕೊಂಡದ್ದು ಒಂದು ಮೈಲಿಗಲ್ಲಾಗಲಿದೆ.

ವೈದ್ಯಕೀಯ ಶಿಕ್ಷಣವನ್ನು ಕನ್ನಡದಲ್ಲಿ ನೀಡುವಂತಾಗಬೇಕೆನ್ನುವುದು, ಸಮಿತಿಯ ಮಹತ್ವಾಕಾಂಕ್ಷಿ ಯೋಜನೆ. ರಾಷ್ಟ್ರೀಯ ಶಿಕ್ಷಣ ನೀತಿಯಡಿ ಪ್ರಾದೇಶಿಕ ಭಾಷೆಗಳಲ್ಲಿ ವೃತ್ತಿಪರ ಶಿಕ್ಷಣ ನೀಡಲು ಮುಂದಾಗಿದ್ದು ಒಂದು ಆಶಾದಾಯಕ ಸಂಗತಿ. ಇದರಡಿಯಲ್ಲಿ ತಾಂತ್ರಿಕ ಶಿಕ್ಷಣದ ಹಾಗೆ ವೈದ್ಯಕೀಯ ಶಿಕ್ಷಣವನ್ನೂ ಕೂಡ ಕನ್ನಡದಲ್ಲಿ ನೀಡುವಂತಾಗಬೇಕು. ಅದಕ್ಕಾಗಿ ಪ್ರಾಥಮಿಕ ಶಾಲಾ ಹಂತದಲ್ಲಿ ಕನ್ನಡವನ್ನು ಬಲಪಡಿಸುವ ಕಾರ್ಯವಾಗಬೇಕು. ಆ ನಿಟ್ಟಿನಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವಲ್ಲಿ ವಿದ್ಯಾರ್ಥಿಗಳು ಹಾಗೂ ಪಾಲಕರು ತೋರುತ್ತಿರುವ ಆತಂಕ, ಅಭದ್ರತೆಯನ್ನು ನಿವಾರಿಸುವಂಥ ಕಾರ್ಯಗಳಾಗಬೇಕಿದೆ. ಆ ದಿಸೆಯಲ್ಲಿ ನಾವೆಲ್ಲ ಕಾರ್ಯಪ್ರವೃತ್ತರಾಗೋಣ, ಎಂದು ಹಾರೈಸುತ್ತೇನೆ.

**–ಡಾ.ಶಿವಾನಂದ ಕುಬಸದ**
ಅಧ್ಯಕ್ಷರು



**ಡಾ. ತನುಶ್ರೀ ಹೆಗಡೆ**
ನೇತ್ರ ತಜ್ಞೆ,
ಗಣೇಶ ನೇತ್ರಾಲಯ, ಶಿರಸಿ

ಪ್ರಚಲಿತ...

# ಕಣ್ಣಿನೊಳಗೇ ಇಂಜೆಕ್ಷನ್ ಅಕ್ಷಿಪಟಲ ಚಿಕಿತ್ಸೆಗೆ ವರದಾನ



**ಡಾ ಎಚ್ ಎಸ್ ಮೋಹನ್**
ವಿಭಾಗೀಯ ಸಂಪಾದಕರು

ಇಂಟ್ರಾವಿಟ್ರಿಯಲ್ ಇಂಜೆಕ್ಷನ್‌ಗಳು (Intravitreal injections) ಅಕ್ಷಿಪಟಲದ ರೋಗಗಳ ಚಿಕಿತ್ಸೆಯಲ್ಲಿ ಇತ್ತೀಚಿಗಾದ ಒಂದು ಕ್ರಾಂತಿಕಾರಿ ಬೆಳವಣಿಗೆ .

"ಇಂಟ್ರಾವಿಟ್ರಿಯಲ್" ಅಕ್ಷರಶಃ "ಕಣ್ಣಿನ ಒಳಗೆ" ಎಂದರ್ಥ. ಕಣ್ಣಿನ ಗುಡ್ಡೆಯೊಳಗಿನ ಲೋಳೆಯಂತಹ ವಿಟ್ರಿಯಸ್ (vitreous) ಎಂಬ ದ್ರವದೊಳಗೆ ನೀಡುವ ಚುಚ್ಚುಮದ್ದುಗಳನ್ನು ಇಂಟ್ರಾವಿಟ್ರಿಯಲ್ ಇಂಜೆಕ್ಷನ್ ಎಂದು ಹೇಳುತ್ತಾರೆ. ಕಣ್ಣಿನ ಹಿಂಭಾಗದಲ್ಲಿರುವ ಅಕ್ಷಿಪಟಲಕ್ಕೆ ಔಷಧಿಯನ್ನು ಹೆಚ್ಚಿನ ಪ್ರಮಾಣದಲ್ಲಿ ನೇರವಾಗಿ ತಲುಪಿಸಲು ಈ ಚಿಕಿತ್ಸಾ ವಿಧಾನ ಸಹಕಾರಿ .



1911ರಲ್ಲಿ ಓಹಮ್ ಎಂಬ ರೆಟಿನಾ ಸರ್ಜನ್ ಮೊದಲ ಬಾರಿಗೆ ರೆಟಿನಲ್ ಡಿಟ್ಯಾಚ್ ಮೆಂಟ್ (ಅಕ್ಷಿಪಟಲದ ಸರಿಯುವಿಕೆ) ಶಸ್ತ್ರಚಿಕಿತ್ಸೆಯಲ್ಲಿ ಗಾಳಿಯನ್ನು ಇಂಟ್ರಾವಿಟ್ರಿಯಲ್ ಚುಚ್ಚುಮದ್ದಾಗಿ ಉಪಯೋಗಿಸಿದ ದಾಖಲೆಯಿದೆ.

1940ರ ದಶಕದ ಮಧ್ಯ ಭಾಗದಲ್ಲಿ ಎಂಡಾಫ್ತಾಲ್ಮೈಟಿಸ್ (endophthalmitis) ಅಂದರೆ ಕಣ್ಣಿನ ನಂಜಿನ ಚಿಕಿತ್ಸೆಗೆ ಇಂಟ್ರಾವಿಟ್ರಿಯಲ್ ಚುಚ್ಚುಮದ್ದುಗಳ ಪರೀಕ್ಷಾರ್ಥ ಪ್ರಯೋಗಗಳಾದರೂ ಅವುಗಳ ಫಲಿತಾಂಶ ಮತ್ತು ಸುರಕ್ಷತೆಗಳ ಬಗ್ಗೆ ಕಾಳಜಿ ಇದ್ದೆ ಇತ್ತು. 1998 ರಲ್ಲಿ ಫೋಮಿವಿರ್ಸೆನ್ (fomivirsen -Vitravene™), ಮೊದಲ ಇಂಟ್ರಾವಿಟ್ರಿಯಲ್ ಔಷಧವನ್ನು U.S. ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್ (FDA) ಅನುಮೋದಿಸಿತು.

2000 ಇಸವಿಯ ಈಚೆಗೆ ಹಲವು ಹೊಸ ಔಷಧಿಗಳ ಆವಿಷ್ಕಾರದೊಂದಿಗೆ ಹಾಗೆ ಸುರಕ್ಷಿತವಾದ ಸೂಜಿಮದ್ದು ತಂತ್ರವಿಧಾನದೊಂದಿಗೆ ಹಲವಾರು ರೆಟಿನಾ ರೋಗಗಳಿಗೆ ಇದು ಸಿದ್ಧ ಚಿಕಿತ್ಸೆಯಾಗಿ ತೋರಿದೆ ಹಾಗೆ ಇಂಟ್ರಾವಿಟ್ರಿಯಲ್ ಚುಚ್ಚುಮದ್ದುಗಳ ಬಳಕೆಯೂ ಗಮನಾರ್ಹವಾಗಿ ಹೆಚ್ಚಾಗಿದೆ.

ತೀರ ಸಾಮಾನ್ಯವಾಗಿ ಬಳಸುವ ಇಂಟ್ರಾವಿಟ್ರಿಯಲ್ ಇಂಜೆಕ್ಷನ್ ಗಳೆಂದರೆ anti-VEGF ಚುಚ್ಚುಮದ್ದುಗಳು. ಇವು ರೆಟಿನಾದಲ್ಲಿನ ಕೆಟ್ಟ ರಕ್ತನಾಳಗಳ ಬೆಳವಣಿಗೆಯನ್ನು ತಡೆಯಲು ಹಾಗೂ ಅಕ್ಷಿಪಟಲದ ಊತವನ್ನು ಕರಗಿಸಲು ಉಪಯೋಗಿಸಲಾಗುತ್ತವೆ. ಹೊಸ ರಕ್ತನಾಳಗಳ ಬೆಳವಣಿಗೆಗೆ ಬೇಕಾಗುವ vascular endothelial growth factor ಎಂಬ ಪ್ರೋಟಿನ್ ಗಳ ಸ್ರವಿಕೆಯನ್ನು ಇದು ಕುಂಠಿತವಾಗಿಸುವ ಮೂಲಕ ಕೆಲಸಮಾಡುತ್ತದೆ. ಡಯಾಬಿಟಿಕ್ ರೆಟಿನೋಪತಿ,ಮ್ಯಾಕುಲೋಪತಿ, ರಕ್ತ ನಾಳಗಳ ಬ್ಲಾಕ್ (retinal vascular occlusions), neovascular age related macular degeneration, uveitis ಗಳಲ್ಲಿ ಕಾಣುವ ಅಕ್ಷಿಪಟಲದ ಬಾವುಗಳಲ್ಲಿ ರಕ್ತಸ್ರಾವಗಳಲ್ಲಿ ಇದರ ಉಪಯೋಗ ಹೆಚ್ಚು. ನವಮಾಸ ತುಂಬದೆ ಹುಟ್ಟಿದ ಕಡಿಮೆ ತೂಕದ ಮಕ್ಕಳಲ್ಲಿ ಕಾಣುವ retinopathy of prematurity ಚಿಕಿತ್ಸೆಗೂ ಇವುಗಳನ್ನು ಯಶಸ್ವಿಯಾಗಿ off label ಬಳಸಲಾಗುತ್ತಿದೆ .

Optical coherence tomography (OCT) ಎಂಬ ರೆಟಿನಾ ಸ್ಕ್ಯಾನ್ ಮಾಡಿ ಇಂಜೆಕ್ಷನ್ ಪರಿಣಾಮವನ್ನು ಸಕ್ರೀಯವಾಗಿ ಗಮನಿಸಿಬಹುದಾಗಿದೆ.



ಸಾಮಾನ್ಯವಾಗಿ ಉಪಯೋಗಿಸುವ anti-VEGಈ ಔಷಧಗಳೆಂದರೆ bevacizumab (Avastin), ranibizumab (Lucentis) aflibercept (Eylea/Zaltrap), Pegaptanib sodium (Macugen). ಅಲ್ಲದೆ ಇತ್ತೀಚಿಗೆ Brolucizumab, Conbercept ಎಂಬ ಹೊಸ anti VEGF ಔಷಧಗಳು ಮಾರುಕಟ್ಟೆಗೆ ಬಂದಿವೆ.

ತಿಂಗಳು ಇಲ್ಲ ಎರಡು ತಿಂಗಳಿಗೊಮ್ಮೆ ಬೇಕಾಗಬಹುದಾದ anti-VEGF ಚುಚ್ಚುಮದ್ದುಗಳ ದೀರ್ಘವಾದ ಚಿಕಿತ್ಸೆಯ ವೆಚ್ಚವೂ ಹೆಚ್ಚು. ಹಲವು ಬಾರಿ ಈ ಚಿಕಿತ್ಸೆಗೆ ವಿಮೆ ಸೌಲಭ್ಯವೂ ದೊರೆಯುವುದಿಲ್ಲ.ಈ ನಿಟ್ಟಿನಲ್ಲಿ Biosimilar anti-VEGF( Razumab) ಗಳ ಬಳಕೆ ,ಕಡಿಮೆ ವೆಚ್ಚದಲ್ಲಿ ಸಿಗುತ್ತಿರುವ ಅವುಗಳ ಸಕಾರಾತ್ಮಕ ಫಲಿತಾಂಶ ಭರವಸೆಯನ್ನು ತೋರಿವೆ .

Anti-VEGF ಗೆ ಪರ್ಯಾಯವಾಗಿ ಕೆಲವು ಸಂದರ್ಭಗಳಲ್ಲಿ ಅಕ್ಷಿಪಟಲದ ಊತವನ್ನು (cystoid macular edema) ಕಡಿಮೆಮಾಡಲು ಇಂಟ್ರಾವಿಟ್ರಿಯಲ್ ಸ್ಟೀರಾಯ್ಡ್ ಇಂಜೆಕ್ಷನ್ (Triamcinolone acetonide) , ಸ್ಟೀರಾಯ್ಡ್ ಇಪ್ಲಾಂಟ್ – dexamethasone intravitreal implant (Ozurdex) ಗಳನ್ನು ಬಳಸುತ್ತಾರೆ.ಇಂಪ್ಲಾಂಟ್ ಗಳ ಔಷಧಿಯ ಪರಿಣಾಮ ಮೂರು ತಿಂಗಳಿಗೂ ಹೆಚ್ಚು ಇದ್ದು ಪದೆ ಪದೆ ಚುಚ್ಚುಮದ್ದಿನ ಅವಶ್ಯಕತೆ ಕಡಿಮೆ.


ಅಲ್ಲದೆ ಕಣ್ಣಿನ ನಂಜು (endophthalmitis), ಅಕ್ಷಿಪಟಲದ ಸೋಂಕು (retinitis) ಗಳಲ್ಲಿ ಸೂಕ್ತವಾದ ಆಂಟಿಬೈಯೋಟಿಕ್ (vancomycin, ceftazidime, amikacin), ಆಂಟಿವೈರಲ್ (ganciclovir, foscarnet), ಆಂಟಿಫಂಗಲ್ ( amphotericin B , voriconazole) ಔಷಧವನ್ನು ಇಂಟ್ರಾವಿಟ್ರಿಯಲ್ ಮಾರ್ಗವಾಗಿ ನೀಡುವುದರಿಂದ ಶೀಘ್ರವಾಗಿ ಸೋಂಕನ್ನು ನಿಗ್ರಹಿಸಬಹುದಾಗಿದೆ.

ಇಂಟ್ರಾವಿಟ್ರಿಯಲ್ ಇಂಜೆಕ್ಷನ್ ಕೊಡುವ ವಿಧಾನ

ಶಸ್ತ್ರಚಿಕಿತ್ಸೆಗೆ ಮಾಡುವಷ್ಟೆ ಕಾಳಜಿಯಿಂದ ಆಪರೇಷನ್ ಥಿಯೇಟರ್ ನಲ್ಲಿ ಈ ಚಿಕಿತ್ಸಾ ವಿಧಾನ ಮಾಡುವುದು ಸೂಕ್ತ. ಮೊದಲಿಗೆ ಕಣ್ಣಿನ ಸುತ್ತಲೂ povidone iodine ನಿಂದ ಮಡಿ ಮಾಡಿ, ಏಸೆಪ್ಟಿಕ್ ಮುನ್ನೆಚ್ಚರಿಕೆಯೊಂದಿಗೆ ಸೂಕ್ತವಾದ ಔಷಧಿಯ dose ಅನ್ನು ಕಣ್ಣಿನ ಕರಿಗುಡ್ಡೆಯಿಂದ ತುಸು ದೂರದಲ್ಲಿ ಸೂಕ್ಷ್ಮವಾದ ಸೂಜಿಯಿಂದ ಕಣ್ಣಿನೊಳಗಿರುವ ವಿಟ್ರೀಯಸ್ ಲೋಳೆಯೊಳಗೆ ನೀಡಲಾಗುತ್ತದೆ. Topical anaesthetic ಡ್ರಾಪ್ ಗಳನ್ನು ಹಾಕಿ ಮಾಡುವ ಈ ವಿಧಾನದಲ್ಲಿ ಹೆಚ್ಚಿನ ನೋವೇನೂ ಉಂಟಾಗುವುದಿಲ್ಲ.ಚಿಕಿತ್ಸೆಯ ನಂತರ ಉಪಯೋಗಿಸಲು ಕೆಲವು ಕಾಲ ಆಂಟಿಬಯೋಟಿಕ್ ಡ್ರಾಪ್ ಗಳನ್ನು ಕೊಡಲಾಗುತ್ತದೆ.

ಎಲ್ಲ ವಿಧಾನಗಳಲ್ಲಿ ಇದ್ದಂತೆ ಈ ಚಿಕಿತ್ಸೆಯಲ್ಲೂ ಕೆಲ ಆಪತ್ತು , ತೊಡಕುಗಳು ಇದ್ದೆ ಇದೆ.ಮುಖ್ಯವಾಗಿ ಸೋಂಕಿನ ಅಪಾಯ.ಅಲ್ಲದೆ ಕಣ್ಣಿನ ಒತ್ತಡ ಹೆಚ್ಚಾಗುವುದು, ರಕ್ತಸ್ರಾವ, ಅಕ್ಷಿಪಟಲದ ಸರಿಯುವಿಕೆ, ಕಣ್ಣಿನ ಪೊರೆ ಮುಂತಾದವುಗಳು.ಸರಿಯಾದ ಮುನ್ನೆಚರಿಕೆಯಿಂದ , ಸುರಕ್ಷಿತವಾದ ಚಿಕಿತ್ಸಾ ವಿಧಾನದಿಂದ ಇವುಗಳ ಸಾಧ್ಯತೆ ತೀರ ಕಡಿಮೆ.

ದೇಹದ ಮೇಲೆ anti-VEGF ಔಷಧದ ಕೆಲ ಅಡ್ಡಪರಿಣಾಮಗಳಾದ ಕರುಳಿನ ರಕ್ತಸ್ರಾವ, ಮಿದುಳಿನ ರಕ್ತಸ್ರಾವ (subdural hemorrhage, cerebral vascular accident), transient ischemic attack ಗಳು ಸಾಮಾನ್ಯವಲ್ಲದಿದ್ದರೂ ಅಪಾಯದ ಅಂಚಿನಲ್ಲಿರುವವರಲ್ಲಿ ಆಘಾತಕಾರಿಯಾಗಬಹುದು.



ಇವೆಲ್ಲದರ ಹೊರತಾಗಿ ಇಂಟ್ರಾವಿಟ್ರಿಯಲ್ ಇಂಜೆಕ್ಷನ್ ಗಳು ನೇತ್ರ ವಿಜ್ಞಾನದಲ್ಲಿ ಅಕ್ಷಿಪಟಲದ ರೋಗಗಳ ಚಿಕಿತ್ಸೆಯಲ್ಲಿ ಹೊಸ ಸಂಚಲನವನ್ನೇ ಉಂಟುಮಾಡಿದೆ. ಕಣ್ಣಿನೊಳಗೇ ನೀಡಲಾಗುವ ಈ ವಿಸ್ಮಯಕಾರಿ ಚಿಕಿತ್ಸೆಯ ಫಲಿತಾಂಶಗಳೂ ಅಭೂತಪೂರ್ವ. ○



**ಡಾ ಅಶ್ವಿನಿ ರಾಮಸ್ವಾಮಿ**
ಸಹ ಪ್ರಾಧ್ಯಾಪಕರು,ಅರಿವಳಿಕೆ ವಿಭಾಗ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ, ಹುಬ್ಬಳ್ಳಿ

ಪ್ರಚಲಿತ...

# "ವೈದ್ಯಕೀಯ ರಂಗದ ಮಹಿಳೆಯರು"



**ಡಾ ಎಚ್ ಎಸ್ ಮೋಹನ್**
ವಿಭಾಗೀಯ ಸಂಪಾದಕರು

ಔಷಧೋಪಚಾರದ ವಿಷಯದಲ್ಲಿ ಮಹಿಳೆಯರನ್ನೇ ಮೊದಲು ಉಲ್ಲೇಖಿಸಿದರೆ ತಪ್ಪಾಗಲಾರದು. ಮನೆ ಮದ್ದಿನಿಂದ ಹಿಡಿದು ದಾದಿಯರ ಕೆಲಸದ ವರೆಗೂ ಮಹಿಳೆ ಅಪರೋಕ್ಷ ವೈದ್ಯಳೇ. ಈಕೆಯ ಈ ಪಾತ್ರ ಕ್ರಿಸ್ತ ಪೂರ್ವ ಶತಮಾನಗಳಷ್ಟು ಹಳೆಯದು.

7 ನೇ ಶತಮಾನದ ಗ್ರೀಕರ ಕಾಲದ ಕ್ಲಿಯೋಪಾತ್ರ ಮೆಟ್ರೊಡೋರಳಿಗೆ ಸ್ತ್ರೀ ರೋಗಗಳ ಬಗ್ಗೆ ಅರಿವಿದ್ದು ಅನೇಕ ಗ್ರಂಥ ರಚನೆಗಳನ್ನು ಸಹ ಮಾಡಿರುವ ಪುರಾವೆಗಳಿವೆ. ಆನಂತರದಲ್ಲಿ ಬಂದ ಜರ್ಮನಿಯ ಹಿಲ್ಗಾರ್ಡ್, ಇಟಲಿಯ ಟ್ರಾತುಲ, ಬೊಲೊಗ್ನಾ ದೇಶದ ಬುಕ್ಕಾ ಹನ್ನೆರಡನೇ ಶತಮಾನದ ವೈದ್ಯಕೀಯ ರಂಗದ ಮಹಿಳಾ ರತ್ನಗಳು. 19 ನೇ ಶತಮಾನದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿ ಯಾಗುವ ಸಮಯದಲ್ಲೇ ಮಹಿಳೆಯರೂ ಸಹ ತಮ್ಮ ಸ್ಥಾನವನ್ನು ಗಟ್ಟಿಮಾಡಿಕೊಳ್ಳುವ ಪ್ರಯತ್ನದಲ್ಲಿದ್ದರು. 1849 ರಲ್ಲಿ ಎಲಿಜಬೆತ್ ಬ್ಲಾಕ್ ವೆಲ್ ಅಮೇರಿಕಾದಲ್ಲಿ ಪದವಿಭೂಷಿತ ಪ್ರಥಮ ಮಹಿಳಾ ವೈದ್ಯೆಯಾಗಿ ಹೊರ ಹೊಮ್ಮಿದರು. ಬಾಸ್ಟನ್, ನ್ಯೂಯಾರ್ಕ್ ಹಾಗೂ ಪೆನ್ಸಿಲ್ವೇನಿಯಾ ದಲ್ಲಿ ಮಹಿಳೆಯರಿಗಾಗಿಯೇ ವೈದ್ಯಕೀಯ ಕಾಲೇಜುಗಳು ಸ್ಥಾಪಿತಗೊಂಡವು. ಶ್ವೇತ ನಾರಿಯರಿಗಷ್ಟೇ ಸೀಮಿತವಾಗಿದ್ದ ಆ ಕಾಲದಲ್ಲಿ ರೆಬೆಕ್ಕಾ ಲೀ ಎಂಬ ಆಫ್ರಿಕಾ ಮೂಲದ ಅಮೆರಿಕನ್ ಮಹಿಳೆ 1864 ರಲ್ಲಿ ವೈದ್ಯಕೀಯ ಪದವಿ ಪಡೆದು ಮೊದಲಿಗಳಾದಳು.



ಡಾ. ಪ್ರಿಯಾ ಅಬ್ರಾಹಂ

20 ನೇ ಶತಮಾನದ ಜಾಗತಿಕ ಯುದ್ಧಗಳ ಅಟ್ಟಹಾಸದಲ್ಲಿ ಪುರುಷರು ಸೇನೆ ಸೇರುವಂಥ ಪರಿಸ್ಥಿತಿ ನಿರ್ಮಾಣವಾದಾಗ ವೈದ್ಯಕೀಯ ಕಾಲೇಜುಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಹೆಚ್ಚಾಯಿತು. ಯೂರೋಪಿನಲ್ಲಿ ಈ ಬೆಳವಣಿಗೆ ಜೊತೆಯಲ್ಲೇ ಭಾರತದ ನಾರಿಯರೂ ಸಹ ದಾಪುಗಾಲು ಹಾಕಿದ್ದರು. ಜಗತ್ತಿನ ಬೇರೆ ಮಹಿಳೆಯರ ಜೊತೆಗೇ ನಡೆಯುವ ಸಾಹಸಕ್ಕೆ ಕೈ ಹಾಕಿದ್ದು, ಅವರು ತುಳಿದ ಹಾದಿ ಇಂದಿನ ಸ್ತ್ರೀ ಕುಲಕ್ಕೆ ಹೆದ್ದಾರಿಯಾಗಿ ಪರಿಣಮಿಸಿದೆ. 1885 ರಲ್ಲಿ ಆನಂದಿ ಬಾಯಿ ಜೋಶಿ ಪೆನ್ ಸಿಲ್ವೇನಿಯಾ ಕಾಲೇಜಿನಿಂದ ವೈದ್ಯಕೀಯ ಪದವಿ ಪಡೆದು ಭಾರತದ ಪ್ರಥಮ ಮಹಿಳಾ ವೈದ್ಯೆ ಎಂಬ ಹೆಗ್ಗಳಿಕೆಯ ಗರಿ ಮುಡಿಗೇರಿಸಿದಳು. ಆಕೆ ಹೆಚ್ಚು ಕಾಲ ಬದುಕದಿದ್ದರೂ ಭಾರತದ ಹೆಣ್ಣು ಮಕ್ಕಳಿಗೆ ಮಹಿಳೆಯೊಬ್ಬಳು ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಬಹುದೆಂಬ ಕನಸ ಬಿತ್ತಿ ಹೋದರು. ಡಾ ಕಾದಂಬಿನಿ ಗಂಗೂಲಿ, ಕಲ್ಕತ್ತ ಮೆಡಿಕಲ್ ಕಾಲೇಜಿನಿಂದ ಪದವಿ ಪಡೆದ ಪ್ರಥಮ ಮಹಿಳಾ ವೈದ್ಯೆ ಹಾಗೂ ಫಿಸಿಶಿಯನ್ ಎಂದೆನಿಸಿಕೊಂಡರು. ಇವರಿತ್ತ ಹೆಜ್ಜೆಗಳ ಅನುಸರಿಸುತ್ತ ಭಾರತದಲ್ಲಿ ಹಲವೆಡೆ ಮಹಿಳೆಯರು ಬಿಳಿಕೋಟು ಧರಿಸಿ, ಸ್ಟೆಥೋಸ್ಕೋಪನ್ನು ತಮ್ಮ ಆಭರಣವಾಗಿಸುತ್ತ ಪುರುಷರದ್ದೇ ಪಾಳ್ಯವಾಗಿದ್ದ ವೈದ್ಯಕೀಯ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಮೂಡಿಸಲು ಮುಂದಾದರು. ಅದರಲ್ಲಿ ಅಗ್ರಗಣ್ಯರೆಂದರೆ ಡಾ ಪದ್ಮಾವತಿ ಅಯ್ಯರ್ , ಇವರನ್ನು ಕಾರ್ಡಿಯಾಲಜಿಯ ದೇವತೆಯೆಂದೇ ಸಂಭೋದಿಸುತ್ತಿದ್ದರಂತೆ. ಇವರು ಕಾರ್ಡಿಯಾಲಜಿ ವಿಭಾಗವನ್ನು ಹುಟ್ಟು ಹಾಕಿದ್ದಲ್ಲದೆ, ದೇಶದ ಪ್ರಥಮ ಹಾರ್ಟ್ ಫೌಂಡೇಷನ್ನನ್ನು ಸಹ ಸ್ಥಾಪಿಸಿ ಹೃದಯ ರೋಗಗಳ ಬಗ್ಗೆ ಜಾಗೃತಿ ಮೂಡಿಸುವ ದಿಕ್ಕಿನಲ್ಲಿ ಶ್ರಮಿಸಿದರು.

ಡಾ ಮಂಜುಳಾ ಅನಗಣಿ, ಸ್ತ್ರೀ ಮತ್ತು ಪ್ರಸೂತಿ ತಜ್ಞೆ ಯಾಗಿ ಕೆಲಸ ನಿರ್ವಹಿಸುತ್ತಿದ್ದು, ಪ್ರತ್ಯುಷಾ ಎಂಬ ಸರ್ಕಾರೇತರ ಸಂಸ್ಥೆಯನ್ನು ಹುಟ್ಟು ಹಾಕಿ ಸ್ತ್ರೀ ಪರ ಚಟುವಟಿಕೆಗಳು, ಆರೋಗ್ಯದ ಮಾಹಿತಿ ಮತ್ತು ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದರು. ಇದೇ ಕ್ಷೇತ್ರದ ವಿ. ಶಾಂತ, ಕ್ಯಾನ್ಸರ್ ರೋಗಿಗಳಿಗಾಗಿ ಹೆಚ್ಚು ಶ್ರಮಿಸಿದವರು. ಮೂರು ಪದ್ಮ ಪ್ರಶಸ್ತಿಗಳ ಜೊತೆಗೇ

ಮ್ಯಾಗ್ಸಸ್ಸೇ ಪ್ರಶಸ್ತಿಯೂ ಸಹ ಲಭಿಸಿದ್ದು ಇವರ ಸಮಾಜ ಮುಖಿ ಕಾರ್ಯಕ್ಕೆ ಮನ್ನಣೆ ಮತ್ತು ಉತ್ಸಾಹಕ್ಕೆ ಪ್ರೇರಣೆ ನೀಡಿತು.

ಡಾ ಇಂದಿರಾ ಹಿಂದೂಜಾ ಬಂಜೆತನ ನಿವಾರಣೆಗಾಗಿ ಕಾರ್ಯೋನ್ಮುಖರಾದವರಲ್ಲಿ ಒಬ್ಬರು ಮತ್ತು ಆ ವಿಷಯದಲ್ಲಿ ನುರಿತವರು. ಭಾರತದ ಪ್ರಪ್ರಥಮ ಪ್ರನಾಳ ಶಿಶುವನ್ನು 1986 ರಲ್ಲಿ ಜಗತ್ತಿಗೆ ಪರಿಚಯಿಸಿ, ಮಕ್ಕಳಿಲ್ಲ ಎಂದು ಕೊರಗುತ್ತಿರುವ ಅನೇಕ ದಂಪತಿಗಳ ಮುಖದಲ್ಲಿ ನಗುವನ್ನು ಮೂಡಿಸಿದ ಹೆಣ್ಣು ಮಗಳು.ನವಜಾತ ಶಿಶು ತಜ್ಞೆ ಡಾ ಜಯಶ್ರೀ ಮೊಂಡ್ಕರ್ ಏಷಿಯಾದಲ್ಲೇ ಪ್ರಥಮ ಎದೆ ಹಾಲಿನ ಬ್ಯಾಂಕ್ ಸ್ಥಾಪಿಸಿ ತಾಯ ಹಾಲಿನ ಕೊರತೆಯಿಂದ ಬಳಲುತ್ತಿದ್ದ ಅನೇಕ ನವಜಾತ ಕಂದಮ್ಮಗಳಿಗೆ ಆಸರೆಯಾದರು. ಈ ರೀತಿಯ ಕೇಂದ್ರಗಳು ದೇಶದ ಹಲವೆಡೆ ಶುರುವಾಗಿದ್ದು ಶಿಶು ಮರಣ ಪ್ರಮಾಣದ ಸಂಖ್ಯೆ ಅಧಿಕಾಂಶ ಇಳಿಮುಖವಾಗಿ ಈ ಯೋಚನೆ ಹಾಗೂ ಕಾರ್ಯಕ್ರಮದ ಯಶಸ್ಸನ್ನು ಬಿಂಬಿಸುತ್ತಿವೆ.

ದೆಹಲಿಯ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆ ಮೆಡಿಕಲ್ ಸೈನ್ಸ್ ನ ಡೀನ್ ಡಾ ಶಶಿ ವಾಧ್ವಾ, ಕ್ಯಾನ್ಸರ್ ರೋಗಿಗಳ ಕೊನೆಯ ಜೀವಸೆಲೆ ವಿಕಿರಣ ಚಿಕಿತ್ಸೆಯ ರೂವಾರಿಯಾದ ಡಾ ಕೇತಾಯುಂ ದಿನ್ ಷಾ,"ಆಶಾ" ಎಂಬ ಏನ್ ಜಿ ಓ ಸಂಸ್ಥೆಯನ್ನು ಪ್ರಾರಂಭಿಸಿ ಶೋಷಿತ ಮಹಿಳೆಯರ ಬಾಳಿಗೆ ಬೆಳಕಾದ ಡಾ ಕಸ್ತೂರಿ ಏಷಿಯಾದ ಪ್ರಥಮ ಮಹಿಳಾ ನ್ಯೂರೋ ಸರ್ಜನ್ ಎನಿಸಿಕೊಂಡು, 139 ಬಾರಿ ರಕ್ತದಾನ ಮಾಡಿ ಲಿಮ್ಕಾ ಬುಕ್ನಲ್ಲಿ ಹೆಸರಚ್ಚಿಸಿದ ಡಾ ಟಿ.ಸ್.ಕನಕ , ಬಾಲ್ಯ ವಿವಾಹದ ವಿರುದ್ಧ ಹೋರಾಡಿದ ಡಾ ರುಕ್ಮಾಬಾಯಿ ರಾವುತ್ , ಅಡ್ಯಾರ್ ಕ್ಯಾನ್ಸರ್ ಸಂಸ್ಥೆಯ ಸಂಸ್ಥಾಪಕಿ ಡಾ ಮುತ್ತುಲಕ್ಷ್ಮಿ ರೆಡ್ಡಿ, ಹೀಗೆ ಹೆಸರಿಸುತ್ತಾ ಹೋದಂತೆ ಆ ಸಾಲಿಗೆ ಜೋಡಿಸಿಕೊಳ್ಳುವ ವೈದ್ಯೆಯರು ಹಲವಾರು.

ಭಾರತದಲ್ಲಿ ಮಹಿಳೆಯರು ವೈದ್ಯಕೀಯ ಶಿಕ್ಷಣ ದಕ್ಕಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದರೂ ಪದವಿಯ ನಂತರ ಆ ಕ್ಷೇತ್ರದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಪುರುಷರಿಗೆ ಹೋಲಿಸಿದರೆ ಕಡಿಮೆಯೇ. ಕುಟುಂಬದ ಕೇಂದ್ರ ಬಿಂದು, ಮಕ್ಕಳ ತಾಯಿ, ಮನೆಯ ಮೇಲ್ವಿಚಾರಕಿ ಎನ್ನುತ್ತಾ ಆಕೆಯ ಹೆಗಲಿಗೆ ಹಾಕುವ ಜವಾಬ್ದಾರಿಗಳಡಿಯಲ್ಲಿ ಆಕೆಗೆ ತನ್ನ ವೈದ್ಯಕೀಯ ಪದವಿಗೆ ನ್ಯಾಯ ದೊರಕಿಸಿಕೊಡಲು ಹಣಾಹಣಿ ನಡೆಸಬೇಕಾದ ಪರಿಸ್ಥಿತಿ ಇದೆ. ಇದರ ಜೊತೆಗೆ ಕಾರ್ಯಸ್ಥಾನದಲ್ಲಿ ಶೋಷಣೆ, ಪ್ರತಿಕೂಲ ವಾತಾವರಣ, ಸಂಬಳದ ಅಂತರ, ಇವರಿಂದಾಗದು ಎಂಬ ಸಹದ್ಯೋಗಿಗಳ ಮನಸ್ಥಿತಿಯನ್ನು ಬೇರೆ ಎದುರಿಸಬೇಕು.



ಡಾ. ಸೌಮ್ಯ ಸ್ವಾಮಿನಾಥನ್

ಇವೆಲ್ಲವುಗಳನ್ನು ಮೆಟ್ಟಿ ನಿಲ್ಲಲು ಆಕೆ ಬಹುಕಾರ್ಯಕ, ದಿಟ್ಟತನ, ಮುನ್ನುಗ್ಗುವ ಛಲ ಹಾಗೂ ಕುಂದದ ಉತ್ಸಾಹವನ್ನು ಒಗ್ಗೂಡಿಸಿಕೊಳ್ಳಬೇಕು. ಉನ್ನತ ಹುದ್ದೆಗಳನ್ನು ಅಲಂಕರಿಸಿದ ಹೆಣ್ಣುಮಕ್ಕಳು ಕೆಲವು ಸುಧಾರಕ ಬದಲಾವಣೆಗಳನ್ನು ತರಬಹುದು. ಈಗಾಗಲೇ ಡೀನ್, ನಿರ್ದೇಶಕಿ , ಪ್ರಾಂಶುಪಾಲ , ಸಮಿತಿಯ ಅಧ್ಯಕ್ಷೆ, ವಿಭಾಗದ ಮುಖ್ಯಸ್ಥೆ ,ಪ್ರಾಧ್ಯಾಪಕಿ, ಜಿಲ್ಲಾ ಶಸ್ತ್ರಚಿಕಿತ್ಸಕಿ ಮತ್ತು ವೈದ್ಯಕೀಯ ಸಚಿವೆಯಾಗಿಯೂ ಕೆಲಸ ನಿರ್ವಹಿಸುತ್ತಿರುವ ಹೆಣ್ಣು ಮಕ್ಕಳು ಅದಕ್ಕೆ ಸೂಕ್ತ ನ್ಯಾಯವನ್ನು ಒದಗಿಸುತ್ತಿದ್ದಾರೆ. ಬದಲಾಗುತ್ತಿರುವ ಭಾರತದಲ್ಲಿ ಆಕೆಯ ಹಕ್ಕಿನ ಜೊತೆಗೆ ಅವಕಾಶಗಳು ಹೆಚ್ಚಾದಾಗ, ಆಕೆಯ ಕೌಟುಂಬಿಕ ಹೊರೆ ಹಂಚಿಕೆಯಾಗಿ ತುಸು ತಗ್ಗಿದಾಗ, ಸಬಲೆಯ ಮನೋಭಾವ ಅವಳಲ್ಲೇ ಗಟ್ಟಿಯಾದಾಗ, ಆಕೆ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆಯ ಹೊಳೆಯನ್ನೇ ಹರಿಸಬಹುದು.

ಇತ್ತೀಚಿಗಷ್ಟೇ ಕೊವಿಡ್ 19 ಎಂಬ ಮಿಣಿಜೀವಿ ದೇಶದ ಆರೋಗ್ಯ ವ್ಯವಸ್ಥೆಯ ವಿರುದ್ಧ ಸಮರ ಸಾರಿದಾಗ ಮುಂಚೂಣಿಯಲ್ಲಿದ್ದು ನೇತ್ರತ್ವ ವಹಿಸಿದವರಲ್ಲಿ ಮಹಿಳಾ ವೈದ್ಯರದ್ದೂ ಸಿಂಹ ಪಾಲಿದೆ. ಪುಣೆಯ ನ್ಯಾಶನಲ್ ಇನ್ಸ್ಟಿಟೂಟ್ ಅಫ್ ವೈರಾಲಜಿ ಯ ನಿರ್ದೇಶಕಿ ಡಾ ಪ್ರಿಯ ಅಬ್ರಾಹಂ ಕೊವಿಡ್ 19 ವೈರಸ್‌ನ್ನು ಬೇರ್ಪಡಿಸಿದ್ದು ವಿಜ್ಞಾನಿಗಳಿಗೆ ಆ ರೋಗದ ಲಕ್ಷಣಗಳನ್ನು ತಿಳಿಯುವಲ್ಲಿ, ಲಸಿಕೆ ತಯಾರಿಸುವಲ್ಲಿ ಸಹಾಯ ಮಾಡಿತು. ಐ ಸಿ ಎಮ್ ಅರ್ ನ ಹಿರಿಯ ವಿಜ್ಞಾನಿ ಡಾ ನಿವೇದಿತಾ ಗುಪ್ತಾ ರೋಗದ ಚಿಕಿತ್ಸಾ ವಿಧಾನ ಮತ್ತು ಪರೀಕ್ಷಿಸುವ ನೀತಿ ನಿಯಮಗಳನ್ನು ಸಿದ್ಧ ಪಡಿಸಿದ್ದು ಅದನ್ನು ದೇಶದೆಲ್ಲೆಡೆ ಅಳವಡಿಸಿಕೊಳ್ಳಲಾಯಿತು. ತಮಿಳುನಾಡಿನ ಆರೋಗ್ಯ ಇಲಾಖೆಯ ಕಾರ್ಯದರ್ಶಿ ಡಾ ಬೀಲ ರಾಜೇಶ್ ಅಳವಡಿಸಿದ ಕೆಲವು ಬದಲಾವಣೆಗಳು ಕೊವಿಡ್ ರೋಗವನ್ನು ನಿಯಂತ್ರಿಸಿದ್ದಲ್ಲದೆ ಆ ರಾಜ್ಯದ ಆರೋಗ್ಯ ವ್ಯವಸ್ಥೆ ದೇಶದೆಲ್ಲೆಡೆ ಪ್ರಶಂಸಾಪಾತ್ರವಾಯಿತು. ಇನ್ನು ವಿಶ್ವಸ್ತರಕ್ಕೆ ಬಂದರೆ ಡಾ ಸೌಮ್ಯ ಸ್ವಾಮಿನಾಥನ್. ವಿಶ್ವ ಆರೋಗ್ಯ ಸಂಸ್ಥೆಯ ಹಿರಿಯ ವಿಜ್ಞಾನಿಯಾಗಿ 2019 ರಿಂದ 2022 ರ ವರೆಗೆ ಸೇವೆ ಸಲ್ಲಿಸಿದವರು. ಇವರು ಮಕ್ಕಳ ವೈದ್ಯೆಯಾಗಿದ್ದು, ಇವರ ಕ್ಷಯ ಮತ್ತು ಎಚ್.ಐ.ವಿ. ರೋಗದ ಬಗೆಗಿನ ಸಂಶೋಧನೆಗಳು ಜಗತ್ತಿನಾದ್ಯಂತ ಮನ್ನಣೆ ಗಿಟ್ಟಿಸಿವೆ.

ಸಾಧನೆಗೆ ಲಿಂಗಭೇದವಿಲ್ಲ ಎಂಬ ಮಾತನ್ನು ಮತ್ತೆ ಮತ್ತೆ ಧೃಡಪಡಿಸುವ ಮಹಿಳಾ ವೈದ್ಯರು ತಮ್ಮದೇ ಆದ ವಿಶಿಷ್ಟ ದೇಣಿಗೆಯನ್ನು ಸಮಾಜಕ್ಕೆ ಕೊಡಬಲ್ಲರೆಂಬ ವಿಶ್ವಾಸ ಹೆಚ್ಚುತ್ತಿದೆ. ಸರ್ಕಾರ ಮತ್ತು ಸಮಾಜದ ಸಹಕಾರ ಆಕೆಗೆ ಹೀಗೆ ಪೂರಕವಾಗಿರಲಿ ಎಂಬುದು ನಮ್ಮ ಆಶಯ.



**ಡಾ ಮಹೇಶ ಕೋರೆಗೋಳ**
ನೋವಾ ಐವಿಫ್ ಫರ್ಟಿಲಿಟಿ
ಬೆಂಗಳೂರು

ಕಥಾ ವಿಭಾಗ

# ರಕ್ತ ಹೆಪ್ಪು ಗಟ್ಟಿದಾಗ



**ಡಾ ದಿವ್ಯಾ ಕೆ ಎನ್**
ವಿಭಾಗೀಯ ಸಂಪಾದಕರು

ಪ್ರತಿಷ್ಠಿತ ಆಸ್ಪತ್ರೆಯ ಐಸಿಯುನಲ್ಲಿ ಸುನೀಲ ಕಣ್ಣು ಬಿಟ್ಟಾಗ ಅವನಿಗಿನ್ನೂ ಕಣ್ಣು ಮಂಜು, ಪೂರ್ತಿಯಾಗಿ ಕಣ್ಣು ತೆರೆಯಲಾಗುತ್ತಿಲ್ಲ. ಏನೂ ಸ್ಪಷ್ಟವಾಗಿ ಕಾಣುತ್ತಿಲ್ಲ, ಮೈಕೈ ಎಲ್ಲಾ ಸಹಿಸಲಾಗದಷ್ಟು ನೋವು. ಐಸಿಯುನಲ್ಲೇ ನೀರವ ಮೌನ, ಬೀಪ್ ಬೀಪ್ ಎಂದು ಸದ್ದು ಮಾಡುವ ಉಪಕರಣಗಳನ್ನು ಬಿಟ್ಟು ದೂರದಲ್ಲಿ ಮೆಲುದನಿಯಲ್ಲಿ ಮಾತನಾಡುತ್ತಿರುವ ನರ್ಸ್ ಮತ್ತು ವೈದ್ಯರ ಮಾತುಗಳಷ್ಟೇ ಅಲ್ಲಿ.



ಐಸಿಯು ತುಂಬೆಲ್ಲ ಜೀವನ್ಮರಣದ ಮಧ್ಯೆ ಹೋರಾಡುವ ರೋಗಿಗಳೇ, ಯಾರಿಗೂ ಅಪಘಾತವಾದರೆ, ಇನ್ನೊಬ್ಬರಿಗೆ ಹೃದಯಾಘಾತ, ಶಸ್ತ್ರಚಿಕಿತ್ಸೆಯ ಆರೈಕೆ, ಬಿಪಿ ಜಾಸ್ತಿಯಾಗಿ ಸ್ಟ್ರೋಕ್ (ಪಾರ್ಶ್ವವಾಯು) ಮುಂತಾದವರು. ಎಲ್ಲಿ ನೋಡಿದರಲ್ಲಿ ನೇತಾಡುತ್ತಿರುವ ರಕ್ತದ ಚೀಲಗಳು, ಸಲೈನ್ ಬಾಟಲಿಗಳು. ಅವುಗಳಿಂದ ರೋಗಿಗಳಿಗೆ ರಕ್ತ, ಸಲೈನ್ ಪೂರೈಸುವ ಸಣ್ಣ ಪೈಪುಗಳು. ಪ್ರತಿಯೊಂದು ರೋಗಿಯ ವಿಭಿನ್ನ ನಾಡಿಮಿಡಿತ, ಬಿಪಿ, ರಕ್ತದಲ್ಲಿನ ಆಕ್ಸಿಜನ್ ತೋರಿಸುವ ಮಾನಿಟರ್‌ಗಳು. ಈ ಮಾನಿಟರ್‌ಗಳಿಂದ ಹೊರಡುವ ವಿಧದ ಶಬ್ದಗಳು ಇನ್ನೇನು ಯಮನನ್ನು ಕೂಗಿ ಕರಿಯುತ್ತಿವೆಯೇ ಎನ್ನುವಷ್ಟು ಭಯಾನಕ ಹಾಗೂ ನಿರಂತರ. ಇಲ್ಲಿ ದೇವರೇ ಒಳಬಂದು ಎಲ್ಲರನ್ನೂ ನೋಡಲು ಎರಡು ಬಾರಿ ಯೋಚಿಸಬೇಕಾದ ವಾತಾವರಣ. ಹಲವರಿಗೆ ಆಕ್ಸಿಜನ್ ಪೂರೈಸುವ ವೆಂಟಿಲೇಟರ್‌ಗಳು, ನೈಸರ್ಗಿಕವಾಗಿ ಉಚಿತವಾಗಿ ದೊರೆಯುವ ಆಕ್ಸಿಜನ್ ಕೂಡಾ ಹಣತೆತ್ತು ಕೊಂಡರೂ ದುಡ್ಡು ಅಥವಾ ಜೀವನ ಶಾಶ್ವತವಿಲ್ಲವೆಂದು ಕುಹಕವಾಗಿ ಹೇಳುತ್ತಿರುವವು.

ಸುನೀಲನ ಅಪ್ಪ ಪಿತ್ರಾರ್ಜಿತ ಆಸ್ತಿಯಿಂದ ಅಗರ್ಭ ಶ್ರೀಮಂತ. ನೂರಾರು ಎಕರೆ ಗದ್ದೆ, ಹಣ, ಮನೆ, ಬಂಗಾರ ಯಾವುದಕ್ಕೂ ಕೊರತೆಯಿಲ್ಲದ ಜೀವನ. ಸುನೀಲನ ಅಜ್ಜನಿಗೆ ಇಬ್ಬರೇ ಗಂಡು ಮಕ್ಕಳಾದ್ದರಿಂದ, ಅಪ್ಪ ಹಾಗೂ ಚಿಕ್ಕಪ್ಪನಿಗೆ ಸಮನಾಗಿ ಹಂಚಿದ ಆಸ್ತಿಯಿಂದ ಇಬ್ಬರೂ ಕುಬೇರನ್ನೇ ನಾಚಿಸುವಷ್ಟು ಆಸ್ತಿ ಹೊಂದಿದ್ದರು. ತುಂಬಾ ಅನ್ಯೋನ್ಯವಾಗಿದ್ದ ಸುನೀಲನ ಅಪ್ಪನಿಗೆ ಸುನೀಲನೊಬ್ಬನೇ ಮುದ್ದಿನ ಮಗನಾದರೇ, ಚಿಕ್ಕಪ್ಪನಿಗೆ ಮೂರು ಜನ ಗಂಡು ಮಕ್ಕಳು. ಬಾಲ್ಯದಲ್ಲಿ ಸುನೀಲ ತನ್ನ ಚಿಕ್ಕಪ್ಪನ ಮೂವರು ಗಂಡು ಮಕ್ಕಳೊಂದಿಗೆ ಅವಿಭಕ್ತ ಕುಟುಂಬದಲ್ಲಿ ಬೆಳೆದ ದಿನಗಳು ಅತಿಯಾದ ಪ್ರೀತಿ, ಸಲುಗೆ ಸುಖದಿಂದ ಕೂಡಿತ್ತು. ಅಪ್ಪ, ಚಿಕ್ಕಪ್ಪರಿಬ್ಬರಿಗೂ, ಪರಿಶ್ರಮಿಗಳಾಗಿದ್ದರಿಂದ ಯಾವುದೇ ದುಶ್ಚಟಗಳಿಗೊಳಗಾಗದೇ ಬಳುವಳಿಯಾಗಿ ಬಂದ ಆಸ್ತಿಯನ್ನು ಇನ್ನಷ್ಟು ವೃದ್ಧಿಸಿಕೊಂಡು ಊರಲ್ಲೇ ಹೆಸರುವಾಸಿಯಾದರು.

ವಯಸ್ಸಿಗೆ ಬಂದ ಮೇಲೆ ಸುನೀಲನಿಗೆ ಹಾಗೂ ಅವನ ಮೂರು ದಾಯಾದಿಗಳಿಗೆ ಮದುವೆಯಾಗಿ ಒಳ್ಳೆಯ ಸೊಸೆಯಂದಿರನ್ನು ಮನೆ ತುಂಬಿಸಿಕೊಂಡು ಕುಟುಂಬದ ವರ್ಚಸ್ಸನ್ನು ವೃದ್ಧಿಸಿದರು.

ಮದುವೆಯಾದ ಒಂದೆರಡು ವರ್ಷದಲ್ಲಿ ದೇವರು ಎಲ್ಲರಿಗೂ ಮುದ್ದಾದ ಮಕ್ಕಳನ್ನು ಕರುಣಿಸಿದನು. ಸುನೀಲನೊಬ್ಬನನ್ನು ಹೊರತುಪಡಿಸಿ.

ವರ್ಷಗಳು ಉರುಳಿದಂತೆ ಸುನೀಲನನ್ನು ಬಿಟ್ಟು, ಎಲ್ಲರಿಗೂ ಎರಡರಿಂದ ಮೂರು ಮಕ್ಕಳಾದವು.

ತುಂಬಿದ ಕುಟುಂಬದಲ್ಲಿ ಮಕ್ಕಳ ಕಲರವ ಎಲ್ಲರಿಗೂ ಮುದ ಕೊಡುವಂತಿತ್ತು. ಆದರೆ ಸುನೀಲನ ಮನದಲ್ಲಿ ಮಕ್ಕಳಿಲ್ಲವೆಂಬ ಚಿಂತೆ ಸುಡುತ್ತಲಿತ್ತು. ಎಷ್ಟೊಂದು ತಜ್ಞರ ಬಳಿ ಚಿಕಿತ್ಸೆ ಪಡೆದರೂ ಮಕ್ಕಳಾಗಲಿಲ್ಲ. ಹೀಗೆಯೇ ನೋಡುತ್ತ ಇಪ್ಪತ್ತು ವರ್ಷಗಳು ಕಳೆದರೂ ಮಕ್ಕಳಾಗುವ ಸಾಧ್ಯತೆ ಮರೀಚಿಕೆಯಾಯಿತು. ಜ್ಯೋತಿಷಿಗಳು, ನಾಟಿವೈದ್ಯರಿಂದ ಹಿಡಿದು ಪಟ್ಟಣದ ಪ್ರಸಿದ್ಧ ವೈದ್ಯರಿಂದಲೂ ಸಂತಾನ ಪ್ರಾಪ್ತಿಯಾಗುವ ಯಾವುದೇ ಭರವಸೆ ಇಲ್ಲದಾಯಿತು.

ಇದನ್ನೆಲ್ಲ ನೋಡಿ ಊರ ವಾಡಿಕೆಯಂತೆ ಮಕ್ಕಳಿಲ್ಲದವರ ಸಂಪತ್ತು, ಆಸ್ತಿಯೆಲ್ಲ ದಾಯಾದಿಗಳೇ ವಾರಸುದಾರರೆಂದು ತೀರ್ಮಾನಿಸಲಾಯಿತು. ಇಂದಿನ ಕಾಲದ ಯುವಕರಾಗಿದ್ದ ದಾಯಾದಿಯ ಮಕ್ಕಳಿಗೆ ಎಲ್ಲಿಲ್ಲದ ಸಂತೋಷ. ಕಷ್ಟಪಡದೆ ಬರಬಹುದಾದ ಸುನೀಲನ ಪಾಲಿನ ಸಂಪತ್ತನ್ನು ತಮ್ಮದೇ ಎಂದುಕೊಂಡು ಆಗಿನಿಂದಲೇ ಆ ಆಸ್ತಿಯ ಒಡೆಯರಂತೆ ವರ್ತಿಸತೊಡಗಿದರು. ಅದರಲ್ಲೇ ಹಿರಿಯ ದಾಯಾದಿಯ ಮಗನಾದ ಗಿರೀಶ, ಸಾರಾಯಿ, ಜೂಜಿನಂತಹ ದುಶ್ಚಟಗಳಿಗೆ ಬಲಿಯಾಗಿ ಊರಲ್ಲಿ ಆಗಾಗ್ಗೆ ಗೂಂಡಾವರ್ತನೆಗೆ ತೊಡಗಿಕೊಂಡು ಕುಟುಂಬದ ಹೆಸರನ್ನು ಹಾಳುಗೆಡಲು ಶುರು ಮಾಡಿಕೊಂಡನು.

ಮದುವೆಯಾಗಿ ಇಪ್ಪತ್ತೈದು ವರ್ಷವಾದರೂ ಮಕ್ಕಳ ಸುಖ ಕಾಣದ ಸುನೀಲನಿಗೆ ಒಂದು ದಿನ ಅವನ ಆತ್ಮೀಯ ಗೆಳೆಯನೊಬ್ಬ ಪ್ರಸಿದ್ಧ ವೈದ್ಯರ ಬಗ್ಗೆ ಹೇಳಿದ.

ಆ ವೈದ್ಯರ ಚಿಕಿತ್ಸೆಯಿಂದ ಸುನೀಲನಂತೆ ಸುಮಾರು ವರ್ಷಗಳಿಂದ ಸಂತಾನ ಹೊಂದದ ತಾನೂ ಯಶಸ್ವಿಯಾಗಿ ಅವಳಿ ಮುದ್ದು ಮಕ್ಕಳ ತಂದೆಯಾದ ಕಥೆಯನ್ನು ವಿವರಿಸಿ, ತಾನೇ ಆ ದೇವರ ಸಮಾನ ವೈದ್ಯರ ಬಳಿ ಕರೆದೊಯ್ದು ಚಿಕಿತ್ಸೆ ಕೊಡಿಸಿದ.

ಇಷ್ಟು ವರ್ಷಗಳ ಬಳಿಕ ಕಣ್ಣು ತೆರೆದ ದೇವರು, ವೈದ್ಯರ ಚಿಕಿತ್ಸೆ ಫಲಿಸಿ ಸಂತಾನ ಭಾಗ್ಯವನ್ನು ಕರುಣಿಸಿಯೇ ಬಿಟ್ಟ. ಒಂಭತ್ತು ತಿಂಗಳು ಸತತ ಕಣ್ಣಲ್ಲಿ ಕಣ್ಣಿಟ್ಟು ಪತ್ನಿಯ ಆರೈಕೆ ಮಾಡಿ ಒಂದು ಮುದ್ದಾದ ಗಂಡು ಮಗುವಿಗೆ ತಂದೆಯಾದ.

ಅಂದು ಗಂಡ– ಹೆಂಡಿರಿಬ್ಬರ ಸಂತೋಷ ಹೇಳತೀರದು. ಮಗ ಹುಟ್ಟಿದ ದಿನ ಸುನೀಲ ಊರಿಗೆಲ್ಲ ಊಟ ಹಾಕಿಸಿ, ಊರ ದೇವರಿಗೆ ಬೆಳ್ಳಿ ಕಳಸ ಕೊಡುವ ಹರಕೆಯನ್ನು ಪೂರೈಸಿದ. ಊರಿನ ಜನರೆಲ್ಲ ಹಾಡಿ, ಹರಸಿ ದೀರ್ಘಕಾಲ ಸುಖವಾಗಿರಲೆಂದು ಕುಟುಂಬವನ್ನು ಹಾರೈಸಿದರು.

ವರ್ಷ ಕಳೆದಂತೆ ಸ್ವರ್ಗವನ್ನೇ ನಾಚಿಸುವ ಸಂತೋಷದಿಂದ ಸುನೀಲ ದಂಪತಿ ಮತ್ತು ಮಗ ಆನಂದ ಸಾಗರದಲ್ಲಿ ಜೀವಿಸುತ್ತಿದ್ದರು. ಇತ್ತ ದಾಯಾದಿಗಳು ಸಹ ಹರ್ಷದಿಂದ ಇದ್ದರು ದುಶ್ಚಟ ಹಾಗೂ ಗೂಂಡಾಗಿರಿಗೆ ಇಳಿದಿದ್ದ ದಾಯಾದಿಯ ಮಗನಾದ ಗಿರೀಶನಿಗೆ ಕೈತಪ್ಪಿಹೋದ ಸುನೀಲನ  ಆಸ್ತಿಯ ಮೇಲೆ ತುಂಬಾ ಬೇಸರವಿತ್ತು. ದಿನಗಳೆದರು ಈ ಬೇಸರವು ಕ್ರೋಧ ಹಾಗೂ ಮತ್ಸರವಾಗಿ ಮಾರ್ಪಟ್ಟಿತು.

ಸುನೀಲನು ಗಿರೀಶನ ದೊಡ್ಡಪ್ಪನಾಗಿದ್ದರೂ, ಯಾವಾಗಲೂ ತನ್ನ ಸ್ವಂತ ಮಗನಂತೆ ಬೆಳೆಸಿದ್ದನು. ಅಕ್ಕರೆ, ಪ್ರೀತಿ ಹಾಗೂ ವಾತ್ಸಲ್ಯಕ್ಕೆಂದೂ ಕೊರತೆ ಮಾಡಿರಲಿಲ್ಲ. ಕೇಳಿದಾಗಲೆಲ್ಲ ದುಡ್ಡು ಕೊಟ್ಟು ಬೆಳೆಸಿದ್ದನು. ಇಷ್ಟಾಗಿಯೂ ದೊಡ್ಡವನಾದಂತೆ ತಪ್ಪುದಾರಿ ಹಿಡಿದ ಗಿರೀಶನಿಗೆ ದೊಡ್ಡಪ್ಪನ ಆಸ್ತಿಯೇ ಗುರಿಯಾಗತೊಡಗಿತು. ತಾನೇ ಸುನೀಲನ ವಾರಸುದಾರನೆಂಬಂತೆ ವರ್ತಿಸುತ್ತಿದ್ದ ಗಿರೀಶನಿಗೆ ಸುನೀಲನಿಗಾದ ಗಂಡು ಮಗುವಿನ ಮೇಲೆ ಎಲ್ಲಿಲ್ಲದ ಕೋಪ. ಅಸೂಯೆ. ಈ ಕೆಟ್ಟ ಭಾವನೆ ಉಲ್ಬಣಿಸಿ ಹಲವು ಬಾರಿ ಜಗಳಗಳಾಗುವುದು ಸಾಮಾನ್ಯವಾಯಿತು. ಊರ ಹಿರಿಯರು ಹಾಗೂ ಕುಟುಂಬದವರು ಎಷ್ಟೇ ಬುದ್ಧಿ ಹೇಳಿದರೂ ಗಿರೀಶ ತನ್ನ ಕೆಟ್ಟ ಚಾಳಿಯನ್ನು ಬಿಡಲಿಲ್ಲ. ದಿನ ಬೆಳಗಾದರೆ ಗಿರೀಶ ಕಾಲ್ಕೆರೆದು ಜಗಳ ಮಾಡುವುದು ಸಾಮಾನ್ಯವಾಯಿತು.

ತನ್ನ ತಪ್ಪುದಾರಿಯಲ್ಲಿ ಮುಂದೆ ಹೋದ ಗಿರೀಶನಿಗೆ ಸುನೀಲನ ಮಗನನ್ನೇ ಕೊಲ್ಲುವ ದುರಾಲೋಚನೆ ಬರತೊಡಗಿತು. ಒಂದು ರಾತ್ರಿ ಎಲ್ಲರೂ ಮಲಗಿರುವಾಗ ಕಂಠಪೂರ್ತಿ ಕುಡಿದ ಅಮಲಿನಲ್ಲಿ ಮಚ್ಚು ಹಿಡಿದ ಗಿರೀಶ ಮೃಗದಂತೆ ಎರಗಿದಾಗ ತಡೆಯಲು ಬಂದ ಸುನೀಲನಿಗೆ ಮಚ್ಚಿನ ಗಾಯಗಳಾಗಿ ಪ್ರಜ್ಞೆ ತಪ್ಪಿತು.

ಐಸಿಯುನಲ್ಲಿ ಪೂರ್ತಿಯಾಗಿ ಎಚ್ಚರವಾದ ಸುನೀಲನಿಗೆ ವಿಪರೀತ ನೋವು. ಜೋರಾಗಿ ಅರಚಿದಾಗ ಓಡೋಡಿ ಬಂದ ನರ್ಸ್ ನೋವಿನ ಇಂಜೆಕ್ಷನ್ ಕೊಡಲು ಸಿದ್ಧತೆ ನಡೆಸಿದಳು. ಭುಜದಲ್ಲಿ ವಿಪರೀತ ನೋವು ಎಂದು ಹೇಳಲು ಕೈ ಎತ್ತುವ ಪ್ರಯತ್ನ ಮಾಡಿದಾಗಲೆ ತನ್ನ ಕೈಯೆರಡನ್ನೂ ಕೊಚ್ಚಿ ಕತ್ತರಿಸಲಾಗಿದೆ ಎಂದು ಅವನ ಅರಿವಿಗೆ ಬಂದದ್ದು. ಇದನ್ನರಿತ ಸುನೀಲನು ಐಸಿಯು ಗಾಜುಗಳೆಲ್ಲ ಒಡೆಯುವ ಹಾಗೆ ಜೋರಾಗಿ ಕಿರುಚತೊಡಗಿದ, ಮಾನಸಿಕ ಆಘಾತಕ್ಕೊಳಗಾಗಿ ಅಳತೊಡಗಿದ. ಸ್ಥಳಕ್ಕೆ ಧಾವಿಸಿ ಬಂದ ವೈದ್ಯರು ಇವನ ಹಿನ್ನಲೆ ಬಲ್ಲವರಾಗಿದ್ದು. ಇವನ ದೈಹಿಕ ಮತ್ತು ಮಾನಸಿಕ ವೇದನೆಯನ್ನು ಕಂಡ ವೈದ್ಯರು, ನಿದ್ದೆ ಬರುವ ಇಂಜೆಕ್ಷನ್ ಕೊಟ್ಟು ಮಲಗಿಸಿದರು. ಆಸ್ಪತ್ರೆಯ ಕೆಳಗಿನ ಅಂತಸ್ತಿನ ಶವಗಾರ  ದಲ್ಲಿ ಶವವಾಗಿ ಮಲಗಿರುವ ಸುನೀಲನ ಹೆಂಡತಿ ಮತ್ತು ಮಗನನ್ನು ಕಂಡು ವೈದ್ಯರ ಕಣ್ಣಲ್ಲಿ ಅವರಿಗೇ ತಿಳಿಯದಂತೆ ಕಣ್ಣೀರ ಹನಿಯೊಂದು ಜಿನುಗಿತು.

○



**ಡಾ. ಅರವಿಂದ್ ಎಸ್ ಟಿ.**
ಎಂ ಆರ್ ಸಿ ಸೈಕಿಯಾಟ್ರ (ಲಂಡನ್, ಯುಕೆ)
ತಜ್ಞ ಮನೋವೈದ್ಯರು. ಪಾಸಿಟಿವ್ ಮೈಂಡ್ ಆಸ್ಪತ್ರೆ, ಶಿವಮೊಗ್ಗ

ಕೃತಿ ಪರಿಚಯ

# ಬಸವ ಮತ್ತು

## ಡಾ ಸರಜೂ ಕಾಟ್ಕರ್




**ಡಾ ಅಣ್ಣಯ್ಯ ಕುಲಾಲ್ ಉಳ್ತೂರು**
ವಿಭಾಗೀಯ ಸಂಪಾದಕರು

21ನೇ ಶತಮಾನದಲ್ಲಿ ಸಮಾಜ 5ಜಿ ತರಂಗಾಂತರಗಳಲ್ಲಿ ಹಾಗೂ ಆಧುನಿಕತೆಯ ಭರಾಟೆಯಲ್ಲಿ ಕೊಚ್ಚಿಹೋಗುತ್ತಿದೆ, ನಮ್ಮಲ್ಲಿರುವ ಮಾನವೀಯ ಮೌಲ್ಯಗಳು ಮುಳುಗತೊಡಗಿದೆ. ಇಂದಿಗೂ ಸಾಮಾಜಿಕ ಶೋಷಣೆ, ಮೇಲುಕೀಳೆಂಬ ಭಾವನೆಗಳು, ಲಿಂಗತಾರತಮ್ಯ ಹಾಗೂ ಹಿಂಸಾ ಪ್ರವೃತ್ತಿ ಸಮಾಜದಲ್ಲಿ ಎದ್ದು ಕಾಣುತ್ತಿದೆ. ಇಂತಹ ವಿಷಯಗಳನ್ನು 12ನೇ ಶತಮಾನದಲ್ಲೇ ಖಂಡಿಸಿ, ಸಮಾಜ ಸುಧಾರಣೆಯ ಉನ್ನತ ಕಾರ್ಯಕ್ಕೆ ಕೈ ಹಾಕಿದವರು ಬಸವಣ್ಣನವರು.

ಕುವೆಂಪು ಅವರು ಹೇಳಿದ ಹಾಗೆ ಕಾರ್ತಿಕ ಮಾಸದಲ್ಲಿ ಆಕಾಶ ದೀಪವಾಗಿ ಬಂದ ಬಸವಣ್ಣನವರು ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ ಇಡೀ ಜಗತ್ತಿಗೆ ಮಾದರಿ.

ಪುಸ್ತಕ ವಿಮರ್ಶೆ ಅಂತ ಬಂದಾಗ ನಮ್ಮ ತಂದೆಯವರಾದ ಶ್ರೀ ಎಸ್ ವಿ ತಿಮ್ಮಯ್ಯನವರು ಮನೆಯಲ್ಲೇ ಒಂದು ಸ್ವಂತ ಗ್ರಂಥಾಲಯವನ್ನು ರಚಿಸಿ ಸಾವಿರಾರು ಪುಸ್ತಕಗಳ ಭಂಡಾರವನ್ನೇ ಬಿಟ್ಟು ಹೋದರು, ಆ ಗ್ರಂಥಾಲಯದಲ್ಲಿ ನನ್ನ ಕಣ್ಮನ ಸೆಳೆದದ್ದು ಡಾ. ಸರಜು ಕಾಟ್ಕರ್ ಅವರ 'ಬಸವ ಮತ್ತು' ಎಂಬ ಉತ್ತಮಕೃತಿ.


ಈ ಕೃತಿಯಲ್ಲಿ ಬಸವಣ್ಣ ಮತ್ತು ಇತರ ಸಮಾಜ ಸುಧಾರಕರ ತತ್ವ ಜ್ಞಾನವನ್ನು ಮತ್ತು ವಿಚಾರಗಳನ್ನು ತುಲನೆ ಮಾಡಿ ರಚಿಸಿದ್ದಾರೆ, ಇದನ್ನು ಓದುವುದು ವೈವಿಧ್ಯಮಯ ಹಾಗೂ ಶ್ರೇಷ್ಠ ಅನುಭವವನ್ನು ಕೊಡುತ್ತದೆ. ಬಸವಣ್ಣನವರ ಚಿಂತನೆಗಳನ್ನು 13 ಇತರೆ ಮಹಾಜ್ಞಾನಿಗಳ ಜೊತೆ ಹೋಲಿಕೆ ಮಾಡಲಾಗಿದೆ. ಈ ಮಹಾತ್ಮರ ಮಧ್ಯೆ ಕಾಲದ ಕಂದರವಿದೆ, ದೇಶ ಭಾಷೆಯ ಅಂತರವಿದೆ ಆದರೆ ಒಂದೇ ಚಿಂತನಾ ದಾಟಿಯನ್ನು ಗಮನಿಸಿದಾಗ 'Great men think alike' ಎಂಬ ಮಾತಿಗೆ ಕನ್ನಡಿ ಹಿಡಿದಂತಿದೆ. ವಿಮರ್ಶೆಯ ಸ್ಥಳಾವಕಾಶದ ಕೊರತೆಯಿಂದಾಗಿ ನಾನು ಬಸವಣ್ಣ ಮತ್ತು ಕೆಲವು ಮಹಾಪುರುಷರ ಚಿಂತನೆಗಳನ್ನು ಮಾತ್ರ ತುಲನೆ ಮಾಡಿದ್ದೇನೆ.




ಬಸವ ಮತ್ತು ಬುದ್ಧ

ದಯೆ ಬುದ್ಧ ಧರ್ಮದ ಒಂದು ಪ್ರಮುಖ ನೀತಿ. ಬಸವಣ್ಣನವರು ದಯೆ ಇಲ್ಲದ ಧರ್ಮ ಯಾವುದಯ್ಯ? ದಯೆಯೆ ಬೇಕು ಸಕಲ ಪ್ರಾಣಿಗಳೆಲ್ಲರಲ್ಲೂ' ಎಂದು ಹೇಳಿ ದಯೆ ಧರ್ಮದ ಮೂಲವೆಂದು ಸಾರಿದರು. ಇಬ್ಬರೂ ಜನಸಾಮಾನ್ಯರನ್ನು ಗುರಿಯನ್ನಾಗಿ ಇಟ್ಟುಕೊಂಡು ತಮ್ಮ ಸಿದ್ಧಾಂತಗಳನ್ನು ಮಂಡಿಸಿದರು ಇಬ್ಬರು ಆಗ ಪ್ರಚಲಿತ ಮೂಢನಂಬಿಕೆಗಳ ಬುಡಕ್ಕೆ ಕೊಡಲಿ ಏಟು ನೀಡಿದರು. ಬುದ್ಧ ಅಷ್ಟಾಂಗ ಮಾರ್ಗಗಳನ್ನು ಪ್ರತಿಪಾದಿಸಿದ. ಸಮ್ಯಗ್ ದೃಷ್ಟಿ, ಸಮ್ಯಗ್ ಸಂಕಲ್ಪ, ಸಮ್ಯಗ್ ವಾಚ, ಸಮ್ಯಗ್ ಕರ್ಮ, ಸಮ್ಯಗ್ ವ್ಯಾಯಾಮ, ಸಮ್ಯಗ್ ಆಜೀವ, ಸಮ್ಯಗ್ ಸ್ಮೃತಿ ಹಾಗೂ ಸಮ್ಯಗ್ ಸಮಾಧಿ– ಹೀಗೆ ಜೀವನದ ಮುಕ್ತಿಗೆ ಎಂಟು ಮಾರ್ಗಗಳನ್ನು ಪ್ರತಿಪಾದಿಸಿದ.

ಬಸವಣ್ಣ ಹೇಳಿದ "ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ" ಎಂಬ ಈ ಸಪ್ತ ಸೂತ್ರಗಳು ಸಾರ್ಥಕ ಬದುಕಿಗೆ ಸೂತ್ರಗಳು.



ಅಯ್ಯಾ ಎಂದರೆ ಸ್ವರ್ಗ ಹೀಗೆಂದು ಬಸವಣ್ಣನವರು ಹೇಳಿದರೆ, ನಿನ್ನ ಮಾತಿನಲ್ಲಿ ಜೇನಿರಲಿ ವಿನಯವಿರಲಿ ಎಂದು ಬುದ್ಧ ಹೇಳಿದ್ದಾನೆ. ಇಬ್ಬರೂ ಬಂಡಾಯಗಾರರು. ಬುದ್ಧ ಬಸವ ಇಬ್ಬರು ಜನಪದರಾಗಿದ್ದರು. ಇಬ್ಬರಿಗೂ ಜೀವನದ ಮೌಲ್ಯಗಳ ಬಗ್ಗೆ ಅಗಾಧವಾದ ಅರಿವು ಮತ್ತು ವಿಶ್ವಾಸವಿತ್ತು. ಮನುಷ್ಯನ ಏಳಿಗೆಗೆ ಅವನ ಸ್ವ ಪ್ರಯತ್ನಗಳೇ ಮುಖ್ಯವೆಂಬುದು ಇಬ್ಬರ ನಿಲುವು. ಇಬ್ಬರೂ ಜನರೊಡನೆ ಹೋಗಿ ಅವರ ವೈಚಾರಿಕ ಮಟ್ಟವನ್ನು ಹೆಚ್ಚಿಸುವಲ್ಲಿ ಪ್ರಯತ್ನಿಸಿದರು.

**ಬಸವ ಮತ್ತು ಕನ್ಫ್ಯೂಷಿಯಸ್**

ಕನ್ಫ್ಯೂಷಿಯಸ್ ಚೀನಾ ದೇಶದ ಐತಿಹಾಸಿಕ ಬೋಧಕ, ರಾಜಕಾರಣಿ ಹಾಗು ತತ್ವಜ್ಞಾನಿ. ಕನ್ಫ್ಯೂಷಿಯಸ್ ಅವರ ತತ್ವಗಳು ವೈಯಕ್ತಿಕ ಹಾಗು ಸಾಮಾಜಿಕ ನೈತಿಕತೆ, ಸೂಕ್ತ ಸಾಮಾಜಿಕ ಸಂಬಂಧಗಳು, ಸಾಮಾಜಿಕ ನ್ಯಾಯ ಮತ್ತು ಪ್ರಾಮಣಿಕತೆ ಬಗ್ಗೆ ಸಾರುತ್ತವೆ.

ಕನ್ಫ್ಯೂಷಿಯನಿಸಮ್ ಒಂದು ಧರ್ಮವಲ್ಲ, ಒಂದು ತತ್ವ, ಒಂದು ಪ್ರಣಾಳಿಕೆ. ಆದರೆ ಧರ್ಮವೆಂಬಂತೆ ಬೆಳೆದು ಇದು ಚೀನಾವನ್ನು ಆವರಿಸಿತು. ಇದರ ಖ್ಯಾತಿಯನ್ನು ಕಂಡು ಆಡಳಿತ ವರ್ಗದವರು ಈತನನ್ನು ಊರಿನಿಂದ ಓಡಿಸಿದರು. ಇವರ ಜೀವನವೂ ಕೂಡ ನಮ್ಮ ಬಸವಣ್ಣನವರ ಜೀವನಕ್ಕೆ ಹತ್ತಿರವಾಗಿಯೇ ಇದೆ.

ಬೇರೆಯವರು ನಮ್ಮನ್ನು ಹೇಗೆ ನಡೆಸಿಕೊಳ್ಳಬೇಕೆಂದು ನಾವು ಬಯಸುತ್ತೇವೆಯೋ ಹಾಗೆಯೇ ನಾವು ಅವರೊಡನೆ ನಡೆದುಕೊಳ್ಳಬೇಕೆಂದು ಆತ ಹೇಳುತ್ತಾನೆ.

"ಮೇರು ಪರ್ವತ ಪುಡಿಯಾಗಲೇಬೇಕು", "ಗಟ್ಟಿಯಾದ ತೊಲೆ ಮುರಿಯಲೇಬೇಕು" ಎನ್ನುವ ಈತನ ತತ್ವಗಳು ಬಸವಣ್ಣನವರ "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎನ್ನುವುದನ್ನು ಹೋಲುತ್ತದೆ. ಇಬ್ಬರೂ ಕಾಡಿಗೆ ತೆರಳಿ ತಪಸ್ಸು ಮಾಡುವುದನ್ನು ವಿರೋಧಿಸಿದ್ದಾರೆ. ಕೆಲಸ ಮಾಡುವ ಪ್ರವೃತ್ತಿ ಅತಿ ದೊಡ್ಡ ವರ ಎಂದು ಕನ್ಫ್ಯೂಷಿಯಸ್ ತಿಳಿಸಿದರೆ, ಕಾಯಕವೇ ಕೈಲಾಸ ಎಂದು ಬಸವಣ್ಣನವರು ಹೇಳಿದ್ದಾರೆ.

**ಬಸವ ಮತ್ತು ಕಬೀರ**

ಮನುಷ್ಯರೆಲ್ಲರೂ ಸಮಾನರು ಎನ್ನುವ ಕಬೀರರು, ಜಾತಿಯಲ್ಲಿ ನಾನು ಶ್ರೇಷ್ಠ ಎಂದು ತಿಳಿದಿರುವವರ ಬಗ್ಗೆ ಈ ಮಾತನ್ನು ಹೇಳುತ್ತಾರೆ "ಎಲ್ಲರೂ ಹುಟ್ಟುವಂತೆ ನೀವು ಹುಟ್ಟಿದ್ದೀರಿ ಅದಕ್ಕೆ ಹೊರತಾಗಿ ನೀವೇನು ಬೇರೆ ರೀತಿಯಲ್ಲಿ ಹುಟ್ಟಿಲ್ಲವಲ್ಲ, ನಿಮ್ಮ ಮೌಢ್ಯಕ್ಕೆ ನಗಬೇಕು" ಎನ್ನುತ್ತಾರೆ.

ಕಬೀರರು ಕೇವಲ ಹಿಂದೂ ಧರ್ಮದ ಮೌಢ್ಯಗಳನ್ನು ಮಾತ್ರವಲ್ಲದೆ, ಇಸ್ಲಾಮಿನ ಮುಲ್ಲಾಗಳನ್ನು, ಖಾಜಿಗಳನ್ನು ಟೀಕಿಸುತ್ತಾರೆ. 'ಅಲ್ಲಾ ಸರ್ವಶಕ್ತ, ಸರ್ವ ವ್ಯಾಪಿಯಾದ ಮೇಲೆ ನೀವು ಮಸೀದಿ ಕಟ್ಟಿ ಅದರ ಮೇಲೆ ನಿಂತು ಏಕೆ ಕೂಗುತ್ತೀರಿ ?.' ಎನ್ನುತ್ತಾರೆ. ಬಸವಣ್ಣನವರು 'ಎನ್ನ ಕಾಲೇ ಕಂಬ, ದೇಹವೇ ದೆಗುಲ, ಶಿರ ಹೊನ್ನ ಕಳಶವಯ್ಯ' ಎಂಬ ವಚನದ ರೂಪದಂತಿದೆ ಕಬೀರರ ಈ ಮಾತುಗಳು – ದೇಹವೇ ಮೆಕ್ಕಾ , ದೇಹವೇ ದೇವಾಲಯ ಇರುವಾಗ ಕಾಶಿಗಾಗಲಿ ಮೆಕ್ಕಾಗಲಿ ಹೋಗುವುದು ವ್ಯರ್ಥ. ದೇಹದಲ್ಲೇ ಪರಮಾತ್ಮನನ್ನ ಕಾಣಿರಿ. ಮನಸ್ಸು ಮಥುರಾ, ಹೃದಯವೇ , ದ್ವಾರಕಾ ಶರೀರವೇ ಕಾಶಿ'.

ಡಾ. ಸರಜೂ ಕಾಟ್ಕರ್ ಅವರು ತಮ್ಮ "ಬಸವ ಮತ್ತು" ಅನನ್ಯ ಕೃತಿಯಲ್ಲಿ ಅನೇಕ ಮಹನೀಯರ ವಿಚಾರಧಾರೆಗಳನ್ನು ಬಸವಣ್ಣನವರ ಜೀವನ ಹಾಗೂ ವಚನಗಳ ಜೊತೆ ಅಧ್ಯಯನ ಮಾಡಿ, ತೂಗಿ ಅಳೆದು ನಮಗೆ ವೈಚಾರಿಕತೆಯ ಹೊಸ ಬೆಳಕು ಮೂಡಿಸಿದ್ದಾರೆ.

ವೃತ್ತಿಯಲ್ಲಿ ಪತ್ರಕರ್ತರು, ಪ್ರವೃತ್ತಿಯಲ್ಲಿ ಸಾಹಿತಿಗಳು ಆಗಿರುವ ಡಾ. ಸರಜೂ ಕಾಟ್ಕರ್ ಒಬ್ಬ ಉತ್ತಮ ವಿಚಾರವಂತ ಲೇಖಕರು. ನಾನು ಅವರಿಗೆ ಕರೆ ಮಾಡಿ ಅವರ ಪುಸ್ತಕದ ವಿಮರ್ಶೆ ಬಗ್ಗೆ ಚರ್ಚಿಸಿದಾಗ ಅತ್ಯಂತ ಪ್ರೀತಿಯಿಂದ ಹಾಗೂ ಗೌರವದಿಂದ ಕಂಡರು, ತಕ್ಷಣ ಅವರಲ್ಲಿದ್ದ ಪುಸ್ತಕವನ್ನು ನನಗೆ ಕಳಿಸಿಕೊಟ್ಟರು, ಇಂತಹ ಮನುಷ್ಯತ್ವದ ಗುಣಗಳಿಗೆ ನಾನು ಸದಾ ಅವರಿಗೆ ಚಿರಋಣಿ.



**ಡಾ. ದಿನೇಶ್ ಗುಡಿ**
ಹಿರಿಯ ವೈದ್ಯಾಧಿಕಾರಿ, ಎಆರ್‌ಟಿ ಪ್ಲಸ್ ಕೇಂದ್ರ
ವಿಮ್ಸ್ ಬಳ್ಳಾರಿ

ಕಾಯಿಲೆ–ಚಿಕಿತ್ಸೆ

# ಏಡ್ಸ್ ನಿರ್ಮೂಲನೆ ಮಾಡೋಣ



**ಡಾ ಉಮಾಮಹೇಶ್ವರಿ ಎಸ್**
ವಿಭಾಗೀಯ ಸಂಪಾದಕರು

ಡಿಸೆಂಬರ್ 1 ನೇ ತಾರೀಖನ್ನು ಅಂತರಾಷ್ಟ್ರೀಯ ಏಡ್ಸ್ ದಿನವಾಗಿ ಆಚರಿಸಲಾಗುತ್ತದೆ. 1987 ರಿಂದ ಈ ಬಗ್ಗೆ ಚಿಂತನೆ ನಡೆದು 1988 ರಂದು ಮೊದಲ ಬಾರಿಗೆ ಆಚರಿಸಲಾಯಿತು. ಜೇಮ್ಸ್ ಬನ್ & ಥಾಮಸ್ ನೆಟ್ಟರ್ ಅವರ ಪ್ರಯತ್ನದಿಂದಾಗಿ ಜಾಗತಿಕ ಏಡ್ಸ್ ಕಾರ್ಯಕ್ರಮದ ಅಂದಿನ ನಿರ್ದೇಶಕರಾಗಿದ್ದ ಡಾ. ಜೋನಾಥನ್ಮನ್ ರವರು ಈ ದಿನಾಚರಣೆಗೆ ಶ್ರೀಕಾರ ಹಾಕಿದರು.

**ವೈರಸ್ ನ ಉಗಮ ಮತ್ತು ಇತಿಹಾಸ:**


ದೇಹದಲ್ಲಿ ನಿರೋಧಕ ಶಕ್ತಿಯನ್ನು ಕುಗ್ಗಿಸುವ ವೈರಸ್ ಆಫ್ರಿಕಾದ ಕಾಡಿನಲ್ಲಿ ವಾಸಿಸುವ ಕೋತಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಚಿಂಪಾಂಜಿಗಳು ಈ ಸೋಂಕಿತ ಕೋತಿಗಳನ್ನು ತಿಂದಾಗ ವೈರಸ್ ಅವುಗಳ ದೇಹವನ್ನು ಪ್ರವೇಶಿಸಿ ರೂಪಾಂತರ ಹೊಂದುತ್ತದೆ. ಆಫ್ರಿಕಾದಲ್ಲಿ ಕೆಲ ಆದಿವಾಸಿಗಳು ಚಿಂಪಾಂಜಿಗಳನ್ನು ಆಹಾರವಾಗಿ ಬಳಸುತ್ತಾರೆ. ಈ ಸೋಂಕಿತ ಚಿಂಪಾಂಜಿಗಳನ್ನು ತಿಂದ ಮನುಷ್ಯರ ದೇಹವನ್ನು ಪ್ರವೇಶಿಸಿದ ಈ ರೂಪಾಂತರಿತ ವೈರಸ್ ಏಡ್ಸ್ ಕಾಯಿಲೆಹರಡಿತು. ಕ್ರಿ.ಶ 1800 ರಿಂದ ಇದು ಮನುಷ್ಯರಿಗೆ ಹರಡಲಾರಂಭಿಸಿದೆ ಎಂದು ಶಂಕಿಸಲಾಗಿದೆ.

ಭಾರತದಲ್ಲಿ ಚೆನ್ನೈನಲ್ಲಿ ಮೊದಲ ಸೋಂಕಿತರು ಪತ್ತೆಯಾದರು. ಒಂದು ತಿಂಗಳ ನಂತರ ನಮ್ಮ ಕರ್ನಾಟಕದ ಸವದತ್ತಿಯಲ್ಲಿ ಎರಡನೇ ಸೋಂಕಿತರು ಪತ್ತೆಯಾದರು. ಜಗತ್ತಿನಾದ್ಯಂತ ಹಾಗೂ ಭಾರತದಲ್ಲಿ HIV 1 ಸೋಂಕು ಅಧಿಕವಾಗಿದೆ. HIV 2 ಸ್ವಲ್ಪ ಮಟ್ಟಿಗಿದೆ.

**ಹರಡುವಿಕೆ:**

ಮುಖ್ಯವಾಗಿ 4 ವಿಧಾನಗಳಲ್ಲಿ ಈ ಕಾಯಿಲೆ ಹರಡುತ್ತದೆ.

1) ಸೋಂಕಿತರೊಂದಿಗೆ ಅಸುರಕ್ಷಿತ ಲೈಂಗಿಕ ಮಾರ್ಗವಾಗಿ.



2) ಸೋಂಕಿತ ಗರ್ಭಿಣಿ ತಾಯಿಯಿಂದ ಮಗುವಿಗೆ.

3) ಸೋಂಕಿತರ ರಕ್ತವನ್ನು ಪಡೆಯುವದರಿಂದ.

4) ಅಸುರಕ್ಷಿತ ಸೂಜಿ ಮತ್ತು ಸಿರಿಂಜುಗಳನ್ನು ಬಳಸುವದರಿಂದ.

**ಸೋಂಕಿನ ಪ್ರಮಾಣ:** ಕಳೆದ ವರ್ಷದ ಗಣತಿಯಂತೆ ಜಗತ್ತಿನಾದ್ಯಾಂತ ಸುಮಾರು 38.4 ಕೋಟಿ ಸೋಂಕಿತರಿದ್ದಾರೆ. ಪ್ರತಿ ವರ್ಷ ಸುಮಾರು 1.5 ಕೋಟಿ ಹೊಸ ಸೋಂಕಿತರು ಸೇರ್ಪಡೆಯಾಗುತ್ತಿದ್ದಾರೆ 6,50,000 ಜನ ಇದರ ಕಾರಣಕ್ಕಾಗಿ ಸಾವನ್ನಪ್ಪುತ್ತಿದ್ದಾರೆ. 28.7 ಕೋಟಿ ಜನ art ಚಿಕಿತ್ಸೆಪಡೆಯುತ್ತಿದ್ದಾರೆ.

ದಕ್ಷಿಣಆಫ್ರಿಕಾದಲ್ಲಿ ಅತೀ ಹೆಚ್ಚು ಸೋಂಕಿತರಿದ್ದಾರೆ (7.5ಕೋಟಿ) ಮೊಜಾಂಬಿಕ್ ದೇಶದಲ್ಲಿ 2.2 ಕೋಟಿ ಸೋಂಕಿತರಿದ್ದರೆ ಭಾರತದಲ್ಲಿ 2.1 ಕೋಟಿ ಇದ್ದು ಮೂರನೇ ಸ್ಥಾನದಲ್ಲಿದೆ.

ಆಂಧ್ರಪ್ರದೇಶದಲ್ಲಿ ಅತೀ ಹೆಚ್ಚು ಸೋಂಕಿತರಿದ್ದಾರೆ. (318814) ನಂತರದ ಸ್ಥಾನದಲ್ಲಿ ಮಹಾರಾಷ್ಟ್ರ (284277 ಕರ್ನಾಟಕ (212982) ಮೂರನೇ ಸ್ಥಾನದಲ್ಲಿದೆ. ಮಿಜೊರಾಂ ರಾಜ್ಯದಲ್ಲಿ ದೇಶದ ಸರಾಸರಿಗಿಂತ 10 ಪಟ್ಟು ಹೆಚ್ಚು ಸೋಂಕಿತರಿದ್ದಾರೆ.

**ತಡೆಗಟ್ಟುವಿಕೆ:** ಲೈಂಗಿಕ ಜೀವನ ಆರಂಭಿಸುವವರೆಗೆ ಬ್ರಹ್ಮಚರ್ಯಪಾಲನೆ ಮತ್ತು ಏಕಸಂಗಾತಿಯೊಡನೆ ಸಂಬಂಧ (ಹೆರಲಿಂಗಿ ಅಥವಾ ಸಲಿಂಗಿ) ಇಟ್ಟುಕೊಂಡಲ್ಲಿ ಲೈಂಗಿಕ ಈ ಸೋಂಕು ಹರಡಲು ಸಾಧ್ಯವಿಲ್ಲ.

1) ಸೋಂಕಿತ ಗರ್ಭಿಣಿಯು ತಪ್ಪದೇ ಮಾತ್ರೆಗಳನ್ನು ಸೇವಿಸುತ್ತಿದ್ದು ವೈರಸ್ ಗಳ ಸಂಖ್ಯೆ <1000 ಇದ್ದರೆ ಅಂತಹ ತಾಯಿಯಿಂದ ಮಗುವಿಗೆ ಸೋಂಕು ಹರಡುವ ಸಾಧ್ಯತೆ ತೀರ ಕಡಿಮೆ.

2) ಸೂಜಿಯಿಂದ ಮಾದಕದ್ರವ್ಯ ಸೇವನೆಯನ್ನು ನಿಲ್ಲಿಸುವುದು, ಸೇವಿಸಿದ್ದೇ ಆದಲ್ಲಿ ಪ್ರತಿಬಾರಿ ಹೊಸ ಸಂಸ್ಕರಿಸಿದ ಸೂಜಿಯನ್ನು ಬಳಸಿದರೆ ಸೋಂಕನ್ನು ತಡೆಗಟ್ಟಬಹುದು. ನಮ್ಮಲ್ಲಿ ನಿರೋಧ್ ಹಂಚಿದಂತೆ ಈಶಾನ್ಯ ಭಾರತದ ಕೆಲ ರಾಜ್ಯಗಳಲ್ಲಿ ಸುರಕ್ಷಿತ ಸೂಜಿಗಳನ್ನು ಹಂಚುತ್ತಾರೆ. ವೈದ್ಯಕೀಯ ವೃತ್ತಿಯಲ್ಲಿರುವವರಿಗೂ ಈ ದಾರಿಯಲ್ಲಿ ಸೋಂಕು ತಗಲುವ ಸಾಧ್ಯತೆ ಇರುತ್ತದೆ, ಆದ್ದರಿಂದ ಪ್ರತಿಯೊಬ್ಬ ರೋಗಿಯೂ ಸೋಂಕಿತನೇ ಎಂದು ಭಾವಿಸಿ ಅವಶ್ಯಕವಿರುವ ಸಾರ್ವತ್ರಿಕ ಮುಂಜಾಗೃತಾ ಕ್ರಮಗಳನ್ನು ಪಾಲಿಸಬೇಕು. ಹೀಗೆ ಮಾಡುವದರಿಂದ ಚಿಕಿತ್ಸಾ ವೆಚ್ಚ ತುಂಬಾ ಹೆಚ್ಚಾಗುತ್ತದೆ. ಭಾರತದಂತ ದೇಶದಲ್ಲಿ ಇದು ಕಷ್ಟಸಾಧ್ಯ.

ಎಲ್ಲ ಮುಂಜಾಗ್ರತಾ ಕ್ರಮಗಳ ನಂತರವೂ ಸೋಂಕಿತರ ರಕ್ತ ಅಥವಾ ದೇಹ ದ್ರವಗಳ ಸಂಪರ್ಕ ಬಂದಲ್ಲಿ PEP (post exposure prophylaxis) ಚಿಕಿತ್ಸೆಯಿಂದ ಸೋಂಕನ್ನು ತಡೆಗಟ್ಟಬಹುದು.

Pre EP (pre exposure prophylaxis) ನಿಂದ HIV ಸೋಂಕು ನಮ್ಮ ದೇಹವನ್ನು ಪ್ರವೇಶಿಸದಂತೆ ಸೋಂಕಿಗೆ ತೆರೆದು ಕೊಳ್ಳುವ ಮುಂಚೆಯೇ ತಡೆಯಬಹುದು.

**ಉದಾ:** ಪರಕೀಯರ ಜೊತೆ ಲೈಂಗಿಕ ಸಂಪರ್ಕಕ್ಕೆ ಮುಂಚೆ. ಅಮೇರಿಕದಲ್ಲಿ ಇದನ್ನು ಆರೋಗ್ಯ ಕಾರ್ಯಕ್ರಮದಲ್ಲಿ ಸೇರಿಸಿದ್ದಾರೆ. ಹಾಗಾಗಿ ಅಲ್ಲಿ ಸೋಂಕಿನ ಪ್ರಮಾಣ ತಗ್ಗಿದೆ

ನಿರೋಧ್ ಬಳಕೆಯಿಂದಲೂ ಲೈಂಗಿಕವಾಗಿ 90% ಸೋಂಕು ಹರಡದಂತೆ ತಡೆಗಟ್ಟಬಹುದು. HIV ಸೋಂಕನ್ನು ತಡೆಗಟ್ಟಲು ಲಸಿಕೆ ತಯಾರಿಕೆಯು ಭರದಿಂದ ಸಾಗಿದೆ. ಯಶಸ್ವಿಯಾದರೆ ಈ ಸೋಂಕನ್ನು ಸಂಪೂರ್ಣವಾಗಿ ತಡೆಗಟ್ಟಬಹುದು.



ಅಕಸ್ಮಾತ್ ವ್ಯಕ್ತಿ ಸೋಂಕಿತನಾದರೆ ಏನು ಮಾಡಬಹುದು?

ಐಸಿಟಿಸಿ ಕೇಂದ್ರದಲ್ಲಿ ಉಚಿತವಾಗಿ ಪರೀಕ್ಷೆ ಮಾಡಿ PID ಸಂಖ್ಯೆ ನೀಡಿದ ನಂತರ ART ಕೇಂದ್ರಕ್ಕೆ ಕಳಿಸುತ್ತಾರೆ.

1) ಅಲ್ಲಿ ಸೋಂಕಿತನನ್ನು



ನೊಂದಾಯಿಸಿಕೊಂಡು ART ಸಂಖ್ಯೆಯನ್ನು ನೀಡಿ CD4 ಮತ್ತು ಇತರ ಪರೀಕ್ಷೆಗಳ ನಂತರ ಒಪ್ಪಿಗೆ ಪತ್ರಕ್ಕೆ ಸಹಿ ಪಡೆದು ಉಚಿತವಾಗಿ ಚಿಕಿತ್ಸೆ ನೀಡಲಾಗುವುದು.

2) ಸೋಂಕಿತನಿಗೆ ಮತ್ತು ಕಟುಂಬದವರಿಗೆ ART ಚಿಕಿತ್ಸೆ ಅರಂಭಿಸುವ ಮೊದಲು ಆಪ್ತಸಮಾಲೋಚನೆಯನ್ನು ಮಾಡಲಾಗುತ್ತದೆ. ಕುಟುಂಬದವರಲಿ ಒಬ್ಬರನ್ನು care taker ಎಂದು ಗುರುತಿಸಿ ಅವರಿಗೂ ಮಾಹಿತಿ ನೀಡಲಾಗುವುದು.

3) ತಿಂಗಳ ನಂತರ ಕ್ಷಯರೋಗ ಬಾರದಂತೆ 6 ತಿಂಗಳು TPT ಚಿಕಿತ್ಸೆ ನೀಡಲಾಗುತ್ತದೆ.

**ಚಿಕಿತ್ಸೆ:**

ಸೋಂಕನ್ನು ಸಂಪೂರ್ಣ ನಿಯಂತ್ರಿಸಿ ನಿರ್ಮೂಲನೆ ಮಾಡುವಗುರಿ ಹೊಂದಿರುವದರಿಂದ ಪರೀಕ್ಷಿಸು ಮತ್ತು ಚಿಕಿತ್ಸೆ ಆರಂಭಿಸು ಎಂಬ ನಿಯಮವನ್ನು ಪಾಲಿಸಲಾಗುತ್ತದೆ. 95:95:95 ನಿಯಮವನ್ನು ಪಾಲಿಸಲಾಗುತ್ತಿದೆ ಅಂದರೆ 95% ಸೋಂಕಿತರು ತಮ್ಮ ಸೋಂಕಿನ ಬಗ್ಗೆ ತಿಳಿದಿರಬೇಕು. 95% ಸೋಂಕಿತರು ಚಿಕಿತ್ಸೆಯನ್ನು ಪಡೆಯುತ್ತಿರಬೇಕು. 95% ಸೋಂಕಿತರ ವೈರಲ್ ಲೋಡ್ 1000 ಕ್ಕಿಂತ ಕಡಿಮೆ ಇರಬೇಕು.

**ಔಷಧಿಗಳು:**

**ಮೊದಲನೇ ಸಾಲಿನ ಔಷಧಿಗಳು:** ಎಲ್ಲಾ ವಯಸ್ಕ ಸೋಂಕಿತರಿಗೆ 30 ಕೆಜಿಗಿಂತ ದೇಹದ ತೂಕ ಹೆಚ್ಚು ಇರುವವರಲ್ಲಿ ಈಗ TLD (ಟಿನೋಫಿವರಿನ್, ಲ್ಯಾಮವುಡಿನ್ &ಡೊಲೊಟೊಗ್ರಾವರ್ ) ಎಂಬ ಔಷಧಿ ಸಮುಚ್ಛಯವನ್ನು ಬಳಸಲಾಗುತ್ತದೆ. ಈ ಮಾತ್ರೆಯನ್ನು ದಿನಾಲು ಬೆಳಿಗ್ಗೆ ಅಥವಾ ರಾತ್ರಿ ಆಹಾರ ಸೇವಿಸಿದ ಎರಡು ಗಂಟೆಯ ನಂತರ ಸೇವಿಸಬೇಕು. ಯಾವುದಾದರೂ ಒಂದು ನಿಶ್ಚಿತ ಸಮಯದಲ್ಲಿ ಪ್ರತಿದಿನ ತೆಗೆದುಕೊಳ್ಳಬೇಕು. ಮಕ್ಕಳಲ್ಲಿ 10 ವರ್ಷಕ್ಕಿಂತ ಚಿಕ್ಕವರು ತೂಕ 30 ಕೆಜಿಗಿಂತ ಕಡಿಮೆ ಇರುವ ವಯಸ್ಕರಲ್ಲೂ ಇದನ್ನು ಬಳಸುವದಿಲ್ಲ. ಮೂತ್ರಜನನಕಾಂಗದ ತೊಂದರೆ ಇರುವವರೂ ಇದನ್ನು ಬಳಸುವದಿಲ್ಲ. ಆಗ ZL (ಜಿಡೋವಿಡಿನ್ &ಲ್ಯಾಮವುಡಿನ್) ಅಥವಾ AL (ಅಬಾಕವಿರ್&ಲ್ಯಾಮವಿಡಿನ್) ಜೊತೆ ಡೊಲೊಟಾಗ್ರಾವಿರ್ ಅಥವಾ Lpv/r (ಲೊಪೆನವಿರ್ &ರಿಟನೊವಿರ್) ಔಷಧಿಗಳನ್ನು ಬಳಸಲಾಗುತ್ತದೆ.

**ಎರಡನೇ ಸಾಲಿನ ಔಷಧಿಗಳು:** ಸೋಂಕಿತನ ರಕ್ತದಲ್ಲಿ ವೈರಸ್ಗಳ ಸಂಖ್ಯೆ 1000 ಕ್ಕಿಂತ ಹೆಚ್ಚಾಗಿದ್ದರೆ Cd4 ಸಂಖ್ಯೆ 350 ಕ್ಕಿಂತ ಕಡಿಮೆ ಇದ್ದರೆ ಮೊದಸಲ ಹಾಗೆ ಕಂಡುಬಂದಲ್ಲಿ 3 ತಿಂಗಳು ಬದ್ಧತೆ ಹೆಚ್ಚಿಸಲು ಕ್ರಮಕೈಗೊಂಡು ಮತ್ತೆ ಪರೀಕ್ಷೆ ಮಾಡಲಾಗುತ್ತದೆ. ಆಗಲೂ ವೈರಲ್ ಲೋಡ್ & ಛಿಜ4 ನಿಯಂತ್ರಣಕ್ಕೆ ಬರದಿದ್ದಲ್ಲಿ ಅಂತಹ ಸೋಂಕಿತನಿಗೆ ಎರಡನೇ ಸಾಲಿನ ಚಿಕಿತ್ಸೆ ಆರಂಭಿಸಲಾಗುತ್ತದೆ. ಇಲ್ಲಿ ಬೆನ್ನೆಲುಬಾದ ಔಷಧಿಗಳ ಜೊತೆ Atv/r (ಅಟಜೆನೊವಿರ್ &ರಿಟೊನೊವಿರ್) ಅಥವಾ Lpv/r (ಲೊಪಿನವಿರ್ &ರಿಟೊನೊವಿರ್) ಔಷಧಿಗಳನ್ನು ಮತ್ತು ಡೊಲೆಟೊಗ್ರವಿರ್ ಔಷಧಿಯನ್ನು ಬಳಸಲಾಗುತ್ತದೆ.

ಮೂರನೇ ಸಾಲಿನ ಔಷಧಿಗಳು: –ಎರಡನೇ ಸಾಲಿನ ಔಷಧಿಗಳೂ ಕೂಡ ಸೋಂಕಿತನ ಸೋಂಕನ್ನು ತಡೆಯಲು ವಿಫಲವಾದರೆ ಅಂಥವರನ್ನು ಮೂರನೆ ಸಾಲಿನ ಔಷಧಿಗಳ ನಿರ್ಧಾರಕ್ಕಾಗಿ COE (ಸೆಂಟರ್ ಆಫ್ ಎಕ್ಸಲೆನ್ಸ್ ) ವಯಸ್ಕರಿನು ್ಬೌರಿಂಗ್ ಆಸ್ಪತ್ರೆಗೆ, ಮಕ್ಕಳನ್ನು ಇಂದಿರಾಗಾಂದಿ, ಮಕ್ಕಳ ಆಸ್ಪತ್ರೆಗೆ ಕಳಿಸಲಾಗುತ್ತದೆ. ಡರಾನೆವಿರ್, ರೆಲಿಟಾಗ್ರಾವಿರ್,ಡಲಿಟಾಗ್ರಾವಿ ಔಷಧಿಗಳನ್ನು ಬಳಸಲಾಗುವುದು.

**ಸರಕಾರಿ ಸೌಲಭ್ಯಗಳು:**

ART ಚಿಕಿತ್ಸೆ ಮತ್ತು ಎಲಾ ಪರೀಕ್ಷೆಗಳನ್ನು ಉಚಿತವಾಗಿ ಮಾಡಲಾಗುತ್ತದೆ ಸೋಂಕಿತಮಗು 18 ವರ್ಷ ವಯಸ್ಸಾಗುವವರೆಗೆ ಪ್ರತಿ ತಿಂಗಳು ಮಾಸಾಶನ ನೀಡಲಾಗುತ್ತದೆ.

ಮಕ್ಕಳಿಗೆ, ಎರಡನೇ & ಮೂರನೆ ಸಾಲಿನ ಔಷಧಿ ಪಡೆಯುವವರಿಗೆ ART ಕೇಂದ್ರಕ್ಕೆ ಹೋಗಿ ಬರಲು ಪ್ರಯಾಣಭತ್ಯೆ ನೀಡಲಾಗುತ್ತದೆ. ಸೋಂಕಿತರಿಗಾಗಿ ವಿಶೇಷ ಸಾಲಸೌಲಭ್ಯಗಳಿವೆ. ಅವರಿಗೆ ಮನೆಕಟ್ಟಿಕೊಳ್ಳಲು, ವ್ಯಾಪಾರ ಮಾಡಲು ಧನಸಹಾಯ ನೀಡಲಾಗುತ್ತದೆ. ಲೈಂಗಿಕ ಕಾರ್ಯಕರ್ತೆಯರು, ತೃತೀಯ ಲಿಂಗಿಗಳು, ಪುರುಷ ಸಲಿಂಗಿಗಳು, ವಲಸೆಬಂದವರು ಇವರೆಲ್ಲರಿಗೆ ಸಹಾಯ ಮಾಡಲು ಸರ್ಕಾರೇತರ ಸಂಸ್ಥೆಗಳಿವೆ.



**ಡಾ ರಕ್ಷಾ ಯು. ರಾವ್,**
ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರು.
ಉಷಾ ನರ್ಸಿಂಗ್ ಹೋಂ, ಶಿವಮೊಗ್ಗ.

ವೈದ್ಯೇತರ

# ರಕ್ತದಾನದ ಅನುಭವ ಕಥನ



**ಡಾ. ವಿನಯಾ ಶ್ರೀನಿವಾಸ್**
ವಿಭಾಗೀಯ ಸಂಪಾದಕರು

ರಕ್ತದಾನ ಮಹಾದಾನ ಎಂದು ನಮಗೆಲ್ಲ ತಿಳಿದದ್ದೆ. ಗೃಹವೈದ್ಯರಾದಾಗ, ವೈದ್ಯಕೀಯ ಸ್ನಾತಕೋತ್ತರ ಪದವಿಗೆ ಓದುವಾಗ, ಆ ಒಂದು ರೋಗಿಯನ್ನು ಉಳಿಸಲೆಂದು ರಕ್ತ ಅರೇಂಜ್ ಮಾಡಲೆಂದು ನಾವೆಲ್ಲರೂ ಹರಸಾಹಸ ಪಟ್ಟಿದ್ದನ್ನೊಮ್ಮೆ ನೆನಪಿಸಿಕೊಳ್ಳಿ. ಓದು ಮುಗಿದು ವೈದ್ಯ ವೃತ್ತಿ ಆರಂಭಿಸಿ ಸಾಕಷ್ಟು ವರ್ಷಗಳಾದರೂ, ನಾನು ರಕ್ತದಾನ ಮಾಡಿರಲಿಲ್ಲ. ಹಂಬಲ ಇದ್ದರೂ, ಕಾಲ ಕೂಡಿಬಂದಿರಲಿಲ್ಲ ಎಂದು ಹೇಳಬಹುದೇನೊ.



ರಕ್ತದಾನದ ಹಿನ್ನಲೆಯಲ್ಲಿ ಒಂದು ಬಗೆ ಅಂಜಿಕೆ, ಹೆದರಿಕೆ ಇರುವವರಿಗೆ, ಈ ಒಂದು ಮಹಾಕ್ರಿಯ ಎಷ್ಟು ಸರಳ, ಲಘುವಾಗಿ ನೆರೆಯುವ ಕಾರ್ಯ ಎಂಬ ಬಗ್ಗೆ ನನ್ನ ಒಂದು ಅನುಭವ ಕಥನ..........

ಸುಮಾರು ಎರಡು ವರ್ಷಗಳ ಹಿಂದೆ,ವೈದ್ಯೆಯಾದ ನನ್ನ ದಿನಚರಿಯಲ್ಲೊಂದು ದಿನ ಹೀಗಿತ್ತು.

ನಾನು ಒಬ್ಬ ಹೆಣ್ಣು.ಒಬ್ಬ ತಾಯಿ,ಹೆಂಡತಿ, ವೈದ್ಯೆಕೂಡ .ಹೇಗೆ ಒಬ್ಬ ಮಹಿಳೆ ಗೃಹಿಣಿ ಅಥವಾ ವೃತ್ತಿಪರಳಾಗಿ ಹತ್ತಾರು ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಾಳೋ, ನಾನೂ ಕೂಡ ಇಂತಹ ಪ್ರಯತ್ನದಲ್ಲಿ ನಿತ್ಯವೂ ತೊಡಗಿರುತ್ತೇನೆಂದರೆ ತಪ್ಪಾಗಲಾರದು.

2020ನೇ ಇಸವಿಯ ಮೇ ತಿಂಗಳ ಒಂದು ಸೋಮವಾರ. ಸೋಮವಾರವೆಂದರೆ ವೈದ್ಯರಿಗೆ ತುಂಬಾ ಹೆಕ್ಟಿಕ್ ಡೇ ಅಂತ ಪರಿಗಣಿಸಬಹುದು. ವಾರದ ಮೊದಲ ದಿನವೆಂದೋ ಅಥವಾ ಭಾನುವಾರದ ರಜೆಯ ನಂತರ ಬರುವ ದಿನವೆಂದೋ, ಇನ್ನು ತಿಳಿದುಬಂದಿಲ್ಲ, ಒಟ್ಟು ಸೋಮವಾರ ಎಲ್ಲಾ ಕ್ಲಿನಿಕ್, ಆಸ್ಪತ್ರೆ, ಲ್ಯಾಬ್ ಗಳಲ್ಲಿ ಜನ ಜಂಗುಳಿ ವಿಪರೀತ.

ಎಂದಿನಂತೆ, ಬೆಳಗ್ಗೆ ಏಳುವಾಗಲೇ, ದಿನ ಹೇಗೆ ನಿರ್ವಹಿಸಬೇಕೆಂದು ಮನದಲ್ಲೇ, ಟೈಂಟೇಬಲ್ ಹಾಕಿಕೊಂಡೆ. ಒಂದು ಗಂಟೆ ಕುಟುಂಬದೊಂದಿಗೆ ವ್ಯಾಯಾಮದ ನಂತರ, ಮನೆಯ ಕೆಲಸಗಳನ್ನು ಮುಗಿಸಿ, 8 ಗಂಟೆಗೆ ಮಗಳ ಶಾಲೆಯತ್ತ ಅರ್ಧ ಗಂಟೆಯ ಡ್ರೈವ್ಗೆ ಹೋದೆ, ಶಾಲೆಯ ಪ್ರಾರಂಭ ಸಧ್ಯದಲ್ಲೇ ಎಂದು ಪಠ್ಯಪುಸ್ತಕಗಳ ವಿತರಣೆ ನಡೆದಿತ್ತು.ಹೆಚ್ಚಿನ ಪೋಷಕರು ಆಗಮಿಸುವ ಮೊದಲೇ ನನ್ನ ಕೆಲಸ ಬೇಗ ಮುಗಿಸಿಬರುವ ಸಲುವಾಗಿ, 8 ಗಂಟೆಗೇ ಅಲ್ಲಿದ್ದು, ಪುಸ್ತಕಗಳನ್ನು ಪಡೆದು, ಸಿಕ್ಕ ಕೆಲವು ಶಿಕ್ಷಕಿಯರ ಕುಶಲೋಪಚಾರ ವಿಚಾರಿಸಿ, ಮತ್ತೆ ಮನೆಯ ದಾರಿ ಹಿಡಿದೆ. ಮನೆ ತಲುಪಿ ಉಪಹಾರ ಮುಗಿಸುವಷ್ಟರಲ್ಲಿ, ಆಸ್ಪತ್ರೆಯಿಂದ ಕರೆ ಬಂತು.

ಆಸ್ಪತ್ರೆಗೆ ಹೋಗಿ, ಆಗತಾನೆ ಶುರುವಿನ ಹೆರಿಗೆ ನೋವಿನಲ್ಲಿ ಆಗಮಿಸಿದ ಚೊಚ್ಚಲ ಗರ್ಭಿಣಿಗೆ ತಪಾಸಣೆ ಮಾಡಿ, ಹೆರಿಗೆಗೆ ಅನುಕೂಲವಾದ ಚಿಕಿತ್ಸೆ ಶುರುಮಾಡಿ , ಇನ್ನಿತರ ಒಳರೋಗಿಗಳನ್ನೊಮ್ಮೆ ಮಾತನಾಡಿಸಿ, ಇನ್ನೇನು ಅರ್ಧ ಗಂಟೆಯಲ್ಲಿ ಹೆಕ್ಟಿಕ್ ಓಪಿಡಿ ಶುರುಮಾಡುವ ಎಂದಾಗ, ಅಪ್ಪನ ಕರೆ ಬಂತು. ನಮ್ಮ ಆಪ್ತರೊಬ್ಬರಿಗೆ



ರಕ್ತಹೀನತೆಯಿಂದ ರಕ್ತದ ಅವಶ್ಯಕತೆಯಿದ್ದು, ನಿಮ್ಮ ಆಸ್ಪತ್ರೆಯಲ್ಲಿ ಬ್ಲಡ್ ಟ್ರಾನ್ಸ್ ಫ್ಯೂಷನ್ ಮಾಡಿಸು ಎಂದರು. ಆಗಲಿ ಎಂದೆ . ಬರುವ ಮಹಿಳೆ ನನಗೂ ತುಂಬಾ ಪ್ರಿಯರು, ನಿಕಟರಾಗಿದ್ದು , ಅವರಿಗೆ ಓ ಪಾಸಿಟಿವ್ ರಕ್ತದ ಅವಶ್ಯಕತೆಯಿತ್ತು.

ಕೊರೋನಾ ಲಾಕ್ ಡೌನ್ ಆಗ ಮಿತಿಮೀರಿತ್ತು. ಆದ್ದರಿಂದ ಶಾಲಾ, ಕಾಲೇಜು ರಜ. ಕ್ಯಾಂಪ್ ಗಳಿಲ್ಲದೆ, ರಕ್ತ ಸಿಗುವುದೂ ಕಷ್ಟವಾಗಿತ್ತು. ಬೇಕಾದ ರಕ್ತ ಅಲ್ಲಿ ಲಭ್ಯವಿಲ್ಲ ಎಂದು ತಿಳಿದಾಗ, ನನ್ನ ತುಂಬಾ ದಿನಗಳೊಂದಿದ್ದ ರಕ್ತದಾನ ಮಾಡಬೇಕೆಂಬ ಮಹದಾಸೆ ಜಾಗೃತವಾಯಿತು. ನನ್ನ ಮುಂದೆ ಇಡೀ ದಿನದ ಬಿಡುವಿಲ್ಲದ ಓಪಿಡಿ ಕೆಲಸ, ಹೆರಿಗೆ ಎಲ್ಲಾ ಇಟ್ಟುಕೊಂಡು, ಶಂಕೆಯಿಂದಲೇ ಬ್ಲಡ್ ಬ್ಯಾಂಕ್ ಗೆ ಕರೆ ಮಾಡಿದೆ. ರಕ್ತದಾನಕ್ಕೆ ಅವರು ಕೇವಲ ಅರ್ಧತಾಸು ಸಮಯ ಸಾಕು ಎಂದರು. ನನ್ನ ಮನಸ್ಸು ಪುಳಕಿತಗೊಂಡಿತು.

5 ನಿಮಿಷದ ದಾರಿ ಆಸ್ಪತ್ರೆಯಿಂದ ಬ್ಲಡ್ ಬ್ಯಾಂಕಿಗೆ. ಅರ್ಧಗಂಟೆಯಲ್ಲಿ ವಾಪಾಸ್ಸು ಬರುವೆ ಎಂದು ಆಸ್ಪತ್ರೆಯಲ್ಲಿ ಹೇಳಿ, ಕಾರ್ ಹತ್ತಿ ಬ್ಲಡ್ ಬ್ಯಾಂಕಿಗೆ ಧಾವಿಸಿದೆ. ಬೆಳಿಗ್ಗೆ 10:30 ಗೆ ಅದು ಪ್ರಾರಂಭವಾಗುವ ಸಮಯ, ಹೆಚ್ಚಿನ ಜನಜಂಗುಳಿ ಇರಲಿಲ್ಲ. ಅಲ್ಲಿನ ವೈದ್ಯಾಧಿಕಾರಿ ನನ್ನ ಬಿಪಿ, ಹಿಮೋಗ್ಲೋಬಿನ್ ತಪಾಸಣೆ ಮಾಡಿ , ರಕ್ತದಾನಕ್ಕೆ ನನಗೆ ಸೈ ಎಂದರು.

ನಾನು ಖುಷಿಯಿಂದ ಯಾವ ಅಂಜಿಕೆ ಇಲ್ಲದೆ, ಸ್ವಯಂಪ್ರೇರಿತಳಾಗಿ ರಕ್ತದಾನದ ಕೊಠಡಿಯಲ್ಲಿ ಮಲಗಿದೆ. ಸುಮಾರು 15–20 ನಿಮಿಷಗಳಲ್ಲಿ, ನನ್ನ ದೇಹದ 400ml ಅಂದಾಜಿನಷ್ಟು ರಕ್ತವನ್ನು ತೆಗೆದು ಶೇಖರಿಸಲಾಯಿತು. ನಂತರ 5 ನಿಮಿಷ ನನ್ನನ್ನು ತಪಾಸಣೆಯಲ್ಲಿಟ್ಟು, ನೀವಿನ್ನು ಹೋಗಬಹುದೆಂದರು. ಅಷ್ಟೇ ಸಿಂಪಲ್. ಅರ್ಧಗಂಟೆಯ ಕಾಲಾವಧಿಯಲ್ಲಿ ಮುಗಿದ ಈ ಮಹಾದಾನದಲ್ಲಿ ದಾನ ಮಾಡಿದವರಿಗೆ ಪುಣ್ಯ ಸಿಕಿದ ಅನುಭವ ಪಡೆದೆ. ಕಾರ್ ಹತ್ತಿ, ಆಸ್ಪತ್ರೆಗೆ ವಾಪಾಸಾಗಿ ನನ್ನ ಹೊರರೋಗಿ ತಪಾಸಣೆಗೆ ಕೋವಿಡ್ ಸಮಯದಲ್ಲಿರಬೇಕಾದ ಮುಂಜಾಗ್ರತಾ ಕ್ರಮಗಳಾದ ಪಿಪಿಇ ಕಿಟ್, ಮಾಸ್ಕ, ಪೇಸ್ ಶೀಲ್ಡ್, ಗ್ಲೋವ್ ಎಲ್ಲಾ ಧರಿಸಿ ಪ್ರಾರಂಭಮಾಡಿದಾಗ 11:30ಗಂಟೆ. ಗರ್ಭಿಣಿಯರು, ಹದಿಹರೆಯದ ಕಿಶೋರಿಯರು, 50 ರ ಹರೆಯದ ಆಸುಪಾಸಿನ ಮಹಿಳೆಯರು– ಇವರೆಲ್ಲರ ಸಮಸ್ಯೆಗಳನ್ನು ಕೇಳಿ, ಪರೀಕ್ಷಿಸಿ, ಸಾಂತ್ವಾನ ಹೇಳಿ, ಚಿಕಿತ್ಸೆ ನೀಡಿ ನನ್ನ ಹೊರರೋಗಿ ತಪಾಸಣೆ ಮುಗಿದಾಗ , ಮದ್ಯಾಹ್ನ 3 ಗಂಟೆಯಾಗಿತ್ತು. ಇದೇನಿದು, ರಕ್ತದಾನದ ನಂತರ ಯಾವುದೇ ಸುಸ್ತು ಆಗಲಿಲ್ಲವೇ ಎಂದು ನಾನೇ ಆಶ್ಚರ್ಯ ಪಡುವಾಗ, ನರ್ಸ್ ಬಂದು ಹೆರಿಗೆಗೆ ರೆಡಿ ಆಗಿದ್ದಾಳೆ ಬೆಳಗ್ಗೆ ಬಂದ ಗರ್ಭಿಣಿ ಎಂದರು.

ಚೊಚ್ಚಲ ಹೆರಿಗೆ ಮಾಡಿಸಿ, ಮುದ್ದು ಕಂದಮ್ಮನನ್ನು ಹೊರಗಿನ ಪ್ರಪಂಚಕ್ಕೆ ತಂದು, ಅವಳಮ್ಮನ ಕಣ್ಣಿನಲ್ಲಿ ಕಂಡ ಆನಂದ ಭಾಷ್ಪಗಳು ನನ್ನ ಅಂತರಾಳವನ್ನು ಮುಟ್ಟಿತು. ಅವರ ಕುಟುಂಬದವರ ಹರ್ಷೋದ್ಗಾರ ಕೇಳಿ, ಧನ್ಯವಾದ ಸ್ವೀಕರಿಸಿ, ಇತರ ಒಳರೋಗಿಗಳ ಕ್ಷೇಮ ವಿಚಾರಿಸಿ ಮನೆಗೆ ಬಂದಾಗ 5 ಗಂಟೆ.

ಕೊರೋನಾ ಸಮಯದಲ್ಲಿ ಹಸಿವಿಗಿಂತ ಶುಚಿತ್ವ ಮೇಲು. ಹೊಟ್ಟೆ ಹಸಿವಿದ್ದರೂ, ಮೊದಲು ಸ್ನಾನ ಮಾಡಿ, ಬಟ್ಟೆ ಬದಲಾಯಿಸಿ, ಊಟಕ್ಕೆ ಕೂರುವಾಗ, ಅಮ್ಮ ಬಂದೆಯಾ? ಎಂದು ಮಕ್ಕಳೋಡಿ ಬಂದಾಗ ಮತ್ತೊಮ್ಮೆ ಧನ್ಯತಾನುಭವ. ಮಕ್ಕಳ ದಿನಚರಿಯನ್ನು ಕೇಳಿ, ಅವರ ದಿನಚರಿಯನ್ನೆಲ್ಲಾ ಆಲಿಸಿ, ನಂತರ ನನ್ನ ರಕ್ತದಾನದ ಕಥೆ ಅವರಿಗೆ ಹೇಳಿದಾಗ, ಅವರೂ ಕೂಡ ಇಷ್ಟು ಸುಲಭವೇ ಇದು, ಮುಂದೆ ನಾವು ಕೂಡ ರಕ್ತದಾನದಲ್ಲಿ ನಮ್ಮನ್ನು ತೊಡಗಿಸಿಕೊಳ್ಳುತ್ತೇವೆಂದು ಪಣತೊಟ್ಟರು.

ದಿನದ ಬಿರುಸಿನ ಕೆಲಸಕ್ಕೂ ಯಾವ ರೀತಿ ಭಾಧೆ ಮಾಡದೆ, ಒಂದು ಅರ್ಥಪೂರ್ಣ ಸೇವೆಗೆ ಅವಕಾಶ ಮಾಡಿಕೊಟ್ಟ ಎಲ್ಲರನ್ನೂ ನೆನೆಯುತ್ತಾ, ಗಡಿಯಲ್ಲಿನ ಯೋಧರಿಗೂ, ಕೊರೋನಾ ಯೋಧರಿಗೂ ನಾನೇನು ಕಡಿಮೆ ಎಂದು ಯಶಸ್ವಿಯಾಗಿ ನಿರ್ವಹಿಸಿದ ದಿನಕ್ಕೆ ನನ್ನ ಬೆನ್ನು ನಾನೆ ತಟ್ಟಿಕೊಳ್ಳ ಬಹುದಲ್ಲವೇ?

ಈಗ ತಿಳಿಸಿದ ಹಾಗೆ ಇದು ನಡೆದದ್ದು, 3 ವರ್ಷಗಳ ಹಿಂದೆ. ಆಗಿನಿಂದ ನಿರಂತರವಾಗಿ 4 ತಿಂಗಳಿಗೊಮ್ಮೆ ಇಲ್ಲಿಯವರಿಗೆ 8 ಸಲ ರಕ್ತದಾನ ಮಾಡಿಕೊಂಡು ಬಂದಿದ್ದೇನೆ.ಇದರ ಮೂಲಕ ಎಲ್ಲಾ ಯುವಕ ಯುವತಿಯರಿಗೂ ರಕ್ತದಾನ ಮಾಡಿ ಇನ್ನೊಂದು ಜೀವ ಉಳಿಸುವ ಪ್ರೇರಣೆ ಸಿಗಲೆಂದು, ನಿಮ್ಮ ಮುಂದೆ ನನ್ನ ಅನುಭವ ಬಿಚ್ಚಿಟ್ಟಿದ್ದೇನೆ.



**ಡಾ. ಶ್ರೀನಿವಾಸ ಹರಪನಹಳ್ಳಿ**
ಅರಿವಳಿಕೆ ತಜ್ಞರು, ತತ್ವದರ್ಶ ಆಸ್ಪತ್ರೆ
ಹುಬ್ಬಳ್ಳಿ, 9886236300

ವೈದ್ಯೇತರ

# ಪ್ರಾರ್ಥನೆ



**ಡಾ. ವಿನಯಾ ಶ್ರೀನಿವಾಸ್**
ವಿಭಾಗೀಯ ಸಂಪಾದಕರು, ಶಿವಮೊಗ್ಗ

ಇಂದು ದೀಪಾವಳಿ. ಹಬ್ಬದ ಕಳೆ ಎಂದಿನಂತೆಯೇ ಕಾಣುತ್ತಿದೆ. ಕರೋನಾ ನಂತರವೂ ಜೀವನ ಸಾಗುತ್ತದೆ ಎನ್ನುವ ಪ್ರತೀಕವೋ ಏನೋ ಅದೇ ಹೂವಿನ ಸುವಾಸನೆ, ಅದೇ ದೀಪದ ಜ್ವಾಲೆ, ಅದೇ ಮಂಗಳಾರತಿಯ ಸೊಬಗು. ಅವ್ವ 'ಬೇಗ ಬಂದು ಎಲ್ಲರೂ ನಮಸ್ಕಾರ ಮಾಡಿ ಬೇಡಿಕೊಳ್ಳಿ' ಎಂದಾಗ ಎಲ್ಲರೂ ಬಂದು ನಿಂತೆವು. ಎಂದಿನಂತೆ ದೇವರಿಗೆ ಕೈಮುಗಿದು ನೆಲಕ್ಕೆ ಹಣೆಹಚ್ಚಿ ನಮಸ್ಕರಿಸುವಾಗ ಬಂದಿದ್ದು ಅದೇ ಬೇಡಿಕೆ. ಇದನ್ನು ನಾನು ಬಹು ಚಿಕ್ಕ ವಯಸ್ಸಿನಿಂದಲೇ ದೇವರ ಎದುರಿಗೆ ಬೇಡುತ್ತಾ ಬಂದಿದ್ದೇನೆ. ತೀರ ಇತ್ತೀಚಿನವರೆಗೂ ನಾನು ಇದರ ಬಗ್ಗೆ ಜಾಸ್ತಿ ವಿಚಾರ ಮಾಡಿದ್ದೇ ಇಲ್ಲ. ಆದರೆ ಈಗ ಈ ರೀತಿ ಮಾಡುವಾಗ ಏನೋ ಒಂದು ರೀತಿ ಹಿಂಜರಿಕೆ. ಅಯ್ಯೋ ಬಾಲ್ಯದಲ್ಲಿ ಏನೋ ಹೇಳಿಕೊಟ್ಟದ್ದನ್ನ ಇನ್ನೂ ಮುಂದುವರಿಸಿಕೊಂಡು ಬಂದಿದ್ದೇನಲ್ಲ. ಇದು ಈಗಲೂ ಸರಿಯೇ? ಎಂಬ ವಿಚಾರ.

ನಾನು ಮೊದಲಿನಿಂದಲೂ ದೇವರು, ಪೂಜೆ, ಗುಡಿ–ಗುಂಡಾರ ಎಂದರೆ ಕೊಂಚ ದೂರವೇ, ಹಾಗಂತ ನನಗೆ ಅಸಡ್ಡೆಯೇನೂ ಇಲ್ಲ. ಅದರಲ್ಲಿಯೇ ಬಹಳ ಹೊತ್ತು ಕಳೆಯುವುದು ಅನವಶ್ಯಕ ಎಂಬ ಭಾವನೆ ಅಷ್ಟೇ. ಅಂದಹಾಗೆ ನಾನು ದೇವರ ಹತ್ತಿರ ಬೇಡಿಕೊಳ್ಳುತ್ತಿದ್ದುದು ಏನು ಗೊತ್ತಾ?

'ದೇವರೇ,
ನನ್ನನ್ನು ಒಳ್ಳೆಯವನಾಗಿ ಮಾಡು.
ದೊಡ್ಡವನಾಗಿ ಮಾಡು
ಬುದ್ದಿವಂತನನ್ನಾಗಿ ಮಾಡು
ಹಠ ಮಾಡದಂತೆ ಮಾಡು!


ನಾನು ಇದೇ ತರಹ ಪ್ರಾರ್ಥಿಸಲಿಕ್ಕೂ ಒಂದು ಕಾರಣ ಇದೆ. ಅದೇನೆಂದರೆ, ನಾನು ಚಿಕ್ಕವನಿದ್ದಾಗ ಬಹಳ ಹಠ ಮಾಡುತ್ತಿದ್ದೆನಂತೆ. ಹಠ ಕಡಿಮೆಯಾಗಲೆಂದು ಮನೆಯವರೆಲ್ಲ ಸೇರಿ ಹೇಳಿಕೊಟ್ಟ ಉಪಾಯ ಇದು. ಹಠ ಮಾಡದೇ, ರಂಪಾಟ ಮಾಡದೇ ಯಾವ ಮಕ್ಕಳು ತಾನೇ ಬೆಳೆಯುತ್ತಾರೆ? ಆದರೆ ಪ್ರಾರ್ಥನೆ ಫಲ ನೀಡಿದೆ ಎಂದು ಹಳೆಯ ತಲೆಗಳು ಸಿಕ್ಕಾಗಲೊಮ್ಮೆ ಹೇಳುವುದುಂಟು.

ಆದರೆ ಈ ರೀತಿಯಾಗಿ ಬೇಡುವುದು ಸರಿಯೇ ಎಂಬ ವಿಚಾರ ಆಗಾಗ ನನ್ನ ತಲೆಯಲ್ಲಿ ಸುಳಿದಾಡುತ್ತಿರುತ್ತದೆ. ನಮ್ಮ ನಮ್ಮ ಪರಿಶ್ರಮಕ್ಕೆ, ಒಳ್ಳೆಯ ನಡತೆಗೆ ತಕ್ಕಂತೆ



ಫಲ ಸಿಕ್ಕೇ ಸಿಗುತ್ತದೆ ಎಂದು ನನ್ನ ಭಾವನೆ. ಬೇಡುವುದು ಸಮರ್ಪಣೆಯ ಭಾವವಾಗಬೇಕೇ ಹೊರತು ಅರ್ಜಿಯಾಗಬಾರದು. ಅಲ್ಲದೆ, ಮಂಡಿಯೂರಿ, ಹಣೆಯೂರಿ ನಮಸ್ಕರಿಸುವುದು ಎದುರಿದ್ದ ಮೂರ್ತಿಗೂ ಅಥವಾ ಫೋಟೋಕ್ಕಲ್ಲ. ಅವೆಲ್ಲಕ್ಕಿಂತ ಮಿಗಿಲಾದ ಆ ಅಗೋಚರ ಶಕ್ತಿಗೆ ಶರಣಾಗಲು ಎಂದು ನನ್ನ ನಂಬಿಕೆ.

ಪ್ರಾರ್ಥನೆ ಒಂದು ಸಾರ್ವತ್ರಿಕ ನಂಬಿಕೆಯೆನ್ನಬಹುದು. ಇದಕ್ಕೆ ಜಾತಿ–ಮತದ ಬೇಧವಿಲ್ಲ. ಜೊತೆಗೆ ಯಾವುದೇ ಒಂದು ಪ್ರದೇಶ ಅಥವಾ ದೇಶಕ್ಕೆ ಕೂಡ ಸೀಮಿತವಾಗಿಲ್ಲ. ಘೋರ ಕ್ರೌರ್ಯವೆಸಗಿ ಗಲ್ಲಿಗೇರುವ ಮುನ್ನ ಆ ಖೈದಿಗೂ ಕೂಡ ಪ್ರಾರ್ಥಿಸುವ ಒಂದು ಅವಕಾಶವನ್ನು ನೀಡುತ್ತಾರೆ.



ಅದೇರೀತಿ ಪ್ರಾರ್ಥನೆಯನ್ನು ಇಲ್ಲಿಯೇ ಅಥವಾ ಇಂಥ ಸಮಯಕ್ಕೇ ಮಾಡಬೇಕೆಂಬ ಸಂಕೋಲೆಗಳೇನೂ ಇಲ್ಲ. ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ಮಾಡಬಹುದು. ಕೆಲವರು ಮನೆಯಲ್ಲಿಯೇ ಪ್ರಾರ್ಥಿಸಿದರೆ ಹಲವರು ಮಂದಿರ–ಮಸೀದಿ–ಚರ್ಚುಗಳಿಗೆ ತೆರಳಿ ತಮ್ಮ–ತಮ್ಮ ಪ್ರಾರ್ಥನೆಗಳನ್ನು ಸಲ್ಲಿಸುತ್ತಾರೆ. ಬಸ್ಸು–ರೈಲುಗಳಲ್ಲಿ, ತಮ್ಮ ಕಚೇರಿಯ ಸೀಟಿನಲ್ಲಿ ಆಸೀನರಾಗಿ ಪ್ರಾರ್ಥಿಸುವವರನ್ನೂ ನಾವು ಅನೇಕ ಬಾರಿ ನೋಡಿರುತ್ತೇವೆ.

ಪ್ರಾರ್ಥನೆಯು ದೇಹ ಹಾಗೂ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರುತ್ತೆ ಎಂದು ಅನೇಕ ಸಂಶೋಧನೆಗಳು ಹೇಳುತ್ತವೆ. ಪ್ರಾರ್ಥನೆ ಕೆಲವೊಬ್ಬರಿಗೆ ಶಕ್ತಿಯನ್ನ ನೀಡಿದರೆ ಹಲವರಿಗೆ ಅದು ತಮ್ಮ ದುಃಖ–ದುಮ್ಮಾನಗಳನ್ನು ತೋಡಿಕೊಂಡು ಹಗುರಾಗುವ ವಿಧಾನ. ಇನ್ನೂ ಕೆಲವರು ಕೇವಲ ನೆಮ್ಮದಿಗಾಗಿ ಪ್ರಾರ್ಥಿಸುತ್ತಾರೆ. ಹಾಗೆಯೇ ಕೆಲವರು ತಮಗಾಗಿ ಪ್ರಾರ್ಥಿಸಿದರೆ ಇನ್ನು ಕೆಲವರು ತಮ್ಮ ಕರುಳುಬಳ್ಳಿಗಳ ಅಥವಾ ಆಪ್ತರ ಸಲುವಾಗಿ ಪ್ರಾರ್ಥಿಸುತ್ತಾರೆ. ಮಕ್ಕಳು ಚಾಕೋಲೇಟಿಗಾಗಿ ಪ್ರಾರ್ಥಿಸಿದರೆ ದೊಡ್ಡವರು ಆ ಚಾಕಲೇಟ್ ಕೊಡಿಸುವ ಶಕ್ತಿಗಾಗಿ ಪ್ರಾರ್ಥಿಸುತ್ತಾರೆ!

ಆದ್ದರಿಂದ ನಾನು ಕೂಡ ನನ್ನ ಬೇಡುವಿಕೆಯನ್ನು ಕೇವಲ ನನಗೋಸ್ಕರ ಮೀಸಲಿಡದೆ, ಎಲ್ಲರನ್ನೂ ಒಳಪಡಿಸುವ ಪ್ರಯೋಗವನ್ನು ಮಾಡತೊಡಗಿದೆ. ಮೊದಲಿಗೆ ನನ್ನ ಕುಟುಂಬ, ಸಂಬಂಧಿಕರು ಹಾಗೂ ಸ್ನೇಹಿತರ ಒಳಿತಿಗಾಗಿ ಪ್ರಾರ್ಥಿಸಲು ಪ್ರಾರಂಭಿಸಿದೆ. ಆದರೆ ಇದರಲ್ಲಿಯೂ ಒಂದುರೀತಿಯ ಸಂಕುಚಿತ ಭಾವನೆ ಕಾಡತೊಡಗಿತು. ನಂತರ ನನ್ನ ಲಿಸ್ಟಿಗೆ ರೋಗಿಗಳು ಸೇರ್ಪಡೆಯಾದರು. ಆಮೇಲೆ ಜಗತ್ತಿನ ಎಲ್ಲ ಜನರನ್ನೂ, ಸಮಸ್ತ ಪ್ರಾಣಿ–ಪಕ್ಷಿಗಳನ್ನೂ ಸೇರಿಸಬೇಕಾಯಿತು. ಎಂಬಿಬಿಸ್ ಕೂಡ ಪಾಸು ಮಾಡಿದ್ದೇನಲ್ಲ. ಆದಕಾರಣ ಕ್ರಿಮಿಜೀವಿಗಳ ಜೊತೆ ಕ್ರಿಮಿನಲ್ಲಗಳನ್ನೂ ಸೇರಿಸುವವರಗೂ ಸಮಾಧಾನವಾಗಲಿಲ್ಲ. ಆದರೂ ಕೂಡ ನನ್ನ ಪ್ರಾರ್ಥನೆ ನನಗೆ ಸಮಾಧಾನ ನೀಡುವುದರ ಬದಲು ನನ್ನನ್ನು ನೋಡಿ ನಗುತ್ತಿರುವಂತೆ ಭಾಸವಾಗುತ್ತಿತ್ತು. ಕೊನೆಗೆ ನಾನು 'ಸರ್ವೇ ಜನಃ ಸುಖಿನೋ ಭವಂತು' ಎಂದು ಹೇಳಿ ಮುಗಿಸುವ ಅಭ್ಯಾಸ ಮಾಡಿಕೊಂಡೆ. ಈಗ ಕೊಂಚ ನೆಮ್ಮದಿ. ಮೊದಲಿನ ತರಹ ತಪ್ಪಿತಸ್ಥ ಭಾವನೆ ಬರುತ್ತಿಲ್ಲ.

ಭಾರತೀಯರಾದ ನಮಗೆ ಪ್ರಾರ್ಥಿಸಲು ಕಾರಣಗಳೇ ಬೇಕಂತಿಲ್ಲ. ಮನೆಗಳಲ್ಲಿಯೋ, ಅಂಗಡಿಗಳಲ್ಲಿಯೋ ಅಥವಾ ಹೊರಗಡೆ ನಡೆದಾಡುವಾಗಲೋ ಎಲ್ಲೊ ಒಂದು ಕಡೆ ಪೂಜೆ, ಮಂಗಳಾರತಿಯ ಘಂಟೆಯ ನಾದ ಕಿವಿಗೆ ಬೀಳುತ್ತಿರುತ್ತದೆ. ಇಲ್ಲವೇ ಯಾರೋ ಒಬ್ಬರು ಪ್ರಸಾದ ತಂದು ಕೊಡುತ್ತಾರೆ. ಆಗ ನಮಗರಿವಿಲ್ಲದಂತೆ ಒಂದು ಚಿಕ್ಕ ಪ್ರಾರ್ಥನೆಯೋ, ಅಥವಾ ಉದ್ಗಾರವೋ ಹೊರಹೊಮ್ಮುತ್ತದೆ. ಅನೇಕ ಸಲ ಇದು ಯಾಂತ್ರಿಕೃತವಾಗಿಯೇ ನಡೆದುಹೋಗುತ್ತದೆ ಕೂಡ. ಈಗೀಗ ಸಾಮಾಜಿಕ ಜಾಲತಾಣಗಳಲ್ಲಿ ಕೂಡ 'ನಮಗಾಗಿ ಪ್ರಾರ್ಥಿಸಿ' ಎಂಬ ಸಂದೇಶಗಳು ಕಾಣಬರುತ್ತವೆ. ಕೆಲವರು ಆಮೆನ್ ಎಂದು ರಿಪ್ಲೈ ಕೂಡ ಮಾಡಿರುತ್ತಾರೆ. ಒಟ್ಟಿನಲ್ಲಿ ಇದು ನಮ್ಮನೆಲ್ಲ ಯಾವುದೊ ಒಂದು ರೀತಿಯಲ್ಲಿ ಬೆಸೆದುಬಿಟ್ಟಿದೆ ಎಂದು ಹೇಳಬಹುದೇನೋ.

ನನ್ನ ಪ್ರಾರ್ಥನೆಯಿಂದ ನನಗೆ ಅಥವಾ ಬೇರೆಯವರಿಗೆ ಎಷ್ಟು ಲಾಭವಾಗಿದೆ ಎಂದು ತಿಳಿದುಕೊಳ್ಳುವ ಗೋಜಿಗೆ ನಾನೆಂದೂ ಹೋಗಿಲ್ಲ. ಯಾಕೆಂದರೆ ಇದು ಲಾಭಕ್ಕಾಗಿ ಬಳಸುವ ವಸ್ತುವಲ್ಲ ಎಂದೇ ನನ್ನ ಅನಿಸಿಕೆ. ಪ್ರಾರ್ಥನೆಗೆ ಅದರದೇ ಆದ ಒಂದು ಪಾವಿತ್ರ್ಯತೆ ಇದೆ. ಅಲ್ಲದೆ, ಎಲ್ಲರಿಗೂ ಸುಖ–ಶಾಂತಿ ದೊರೆಯಲಿ ಎಂದು ಪ್ರಾರ್ಥಿಸುವುದು ಬರೀ ಲಾಭ–ನಷ್ಟದ ಲೆಕ್ಕಾಚಾರವಲ್ಲ, ಅದಕ್ಕಿಂತ ಉನ್ನತವಾದ ಒಂದು ಸಾತ್ವಿಕ ಭಾವನೆ ಅಷ್ಟೇ ಎಂದು ನನ್ನ ನಂಬಿಕೆ.

ಆದರೆ ಈಗಲೂ ಕೂಡ ದೇವರ ಮುಂದೆ ಕೈಮುಗಿದು ಕಣ್ಮುಚ್ಚಿದಾಗ ಮನಸ್ಸಿನಲ್ಲಿ 'ದೇವರೇ, ನನ್ನನ್ನು ಒಳ್ಳೆಯವನಾಗಿ ಮಾಡು . ಎಂದೇ ಪ್ರಾರಂಭವಾಗಿ ನನ್ನ ಪ್ರಾರ್ಥನೆ ಕೆಲಕ್ಷಣ ನನ್ನನ್ನು ಬಾಲ್ಯಕ್ಕೆಳೆದೊಯ್ಯುತ್ತದೆ. ಮನದಲ್ಲಿ ಮುಗುಳ್ನಗೆ ಮೂಡುತ್ತದೆ.



**ಡಾ. ಅಣ್ಣಯ್ಯ ಕುಲಾಲ್ ಉಳ್ತೂರು**
ಕುಟುಂಬ ವೈದ್ಯರು, ಮಂಗಳೂರು

ಸಂದರ್ಶನ

# ವೈದ್ಯಕೀಯ ದಿಗ್ಗಜನ ಜೊತೆ ಕೆಲವು ಕ್ಷಣಗಳು



**ಡಾ ಅರವಿಂದ ಪಟೇಲ**
ವಿಭಾಗೀಯ ಸಂಪಾದಕರು, ಬಳ್ಳಾರಿ

ಚಿತ್ತಪಾಡಿ ರಾಮಕೃಷ್ಣ ಬಲ್ಲಾಳ ಅವರು ಮಣಿಪಾಲ್ ಕಾಲೇಜಿನ 3ನೇ Batch ವಿದ್ಯಾರ್ಥಿಗಳು ಈಗ 70ನೇ batch ಇದೆ ಮತ್ತು TMA Pai ರ ಚಿನ್ನದ ಪದಕ ಗಿಟ್ಟಿಸಿಕೊಂಡವರು.

**ಡಾ. ಅಣ್ಣಯ್ಯ:** ಈಗ ನಿಮ್ಮ ಮೊಮ್ಮಗಳು ಡಾ. ವೈಷ್ಣವಿ (3ನೇ ತಲೆಮಾರು) ಅದೇ ಚಿನ್ನದ ಪದಕವನ್ನು ತೆಗೆದುಕೊಂಡಿದ್ದಾರೆ. ಈಗಿನ ವೈದ್ಯಕೀಯ ಕ್ಷೇತ್ರದ ಬಗ್ಗೆ ಹೇಗೆ ಅನ್ನಿಸುತ್ತಿದೆ ಸರ್.

**ಡಾ. ಬಲ್ಲಾಳ್:** ಈಗ ಎಲ್ಲಾ ಕಡೆ Negativity ತುಂಬಿದೆ. (ಯುವ) ಪ್ರತಿಭಾನ್ವಿತ ಮನಸ್ಸುಗಳು ಈಗ ವೈದ್ಯಕೀಯ ಕ್ಷೇತ್ರದ ಕಡೆಗೆ ಕಡಿಮೆ ಆಕರ್ಷಿತರಾಗುತ್ತಿದ್ದಾರೆ. ಹುಡುಗರು ಇಂಜಿನಿಯರಿಂಗ್ ಕಡೆಗೆ ಹುಡುಗಿಯರು CA ಕಡೆಗೆ ವಾಲುತ್ತಿದ್ದಾರೆ. ವಿದೇಶಕ್ಕೆ ತೆರಳಿ ಪದವಿ ಪಡೆದು ಅಲ್ಲಿಯೇ ನೆಲೆಸುತ್ತಿದ್ದಾರೆ. ಅದರಲ್ಲಿಯೂ ಸುಮಾರು ಅಡೆತಡೆಗಳು ಉಂಟು ಯಾಕೆಂದರೆ ಹತ್ತು ಹಲವು ಪ್ರವೇಶ ಪರೀಕ್ಷೆಗಳು ಹಾಗು MBBS ನಂತರ (MD) ನಂತರ MCH (DM) ಸೂಪರ್ ಸ್ಪೆಷಾಲಿಟಿಯಲ್ಲೂ ಕೂಡ ಅತೀ ವರ್ಗೀಕರಣ (Fragmentation) ಆಗಿದೆ. ಇದು ಸರಿ ಇಲ್ಲ ವೈದ್ಯಕೀಯ ಕ್ಷೇತ್ರದಲ್ಲಿ Integeral Teaching / Approach ಇರಬೇಕು.

**ಡಾ. ಅಣ್ಣಯ್ಯ:** ಓದು ಮುಗಿಯುವುದೆ ಇಲ್ಲ ಅಲ್ವಾ ಸರ್.

**ಡಾ. ಬಲ್ಲಾಳ್:** ಅಲ್ಲದೆ ಮುಗಿಸಿಯೂ ಕೂಡ ವೃತ್ತಿ ಜೀವನದಲ್ಲಿ ಕಾಲೂರಲು ತುಂಬಾ ಸಮಯ ಆಗುತ್ತದೆ. ಅಲ್ಲದೆ ಜಾತಿ ಮೀಸಲಾತಿಯಿಂದ ವೈದ್ಯಕೀಯ ಶಿಕ್ಷಣದ ಗುಣಮಟ್ಟ ಕುಸಿದಿದೆ. ಅಲ್ಲದೆ ಸರ್ಕಾರವು ತುಂಬಾ ವೈದ್ಯಕೀಯ ಕಾಲೇಜುಗಳನ್ನು ತೆರೆದಿದೆ, ಆದರೆ ಅಲ್ಲಿ



ಸಿಬ್ಬಂದಿ ಕೊರತೆಯು ತೀವ್ರವಾಗಿದೆ ಸಂಖ್ಯೆಯಲ್ಲಿಯೂ, ಗುಣಮಟ್ಟದಲ್ಲಿಯೂ, ಕೂಡ ಕೆಲವು ಕಡೆಗಳಲ್ಲಿ ರೋಗಿಗಳನ್ನು ಹಣ ಕೊಟ್ಟು ಕರೆಸುತ್ತಾರೆ. ಈಗಿನ ಯುವ ವೈದ್ಯರು, ಶಿಕ್ಷಣ ಮುಗಿದ ತಕ್ಷಣವೇ ದೊಡ್ಡ ಕಾರುಗಳನ್ನು ಬಯಸುತ್ತಾರೆ. ನನ್ನ ಕೆಲ ಶಿಕ್ಷಕರು ಸೈಕಲ್ಲಿನಲ್ಲಿ ಬರುತ್ತಿದ್ದರು.

**ಡಾ. ಅಣ್ಣಯ್ಯ:** ನಿಮ್ಮ ಕ್ಲಾಸ್‌ಗೆ ಬೇರೆ ತರಗತಿಯ ವಿದ್ಯಾರ್ಥಿಗಳೂ ಬರುತ್ತಿದ್ದರು. ಆಸ್ಪತ್ರೆಯು




ಶಾಲಾ ಕಾಲೇಜುಗಳಲ್ಲಿ. ವಿದ್ಯಾರ್ಥಿಗಳಿಗೆ ಪಾಠ ಇಷ್ಟವಿಲ್ಲ, ಆದರೂ ಪಾಸಾಗಬೇಕು, ನಾನು ಪಾಠ ತೆಗೆದುಕೊಂಡಾಗ 2½ ಗಂಟೆಗೂ ಮಿಕ್ಕಿ ಎಲ್ಲರು ಪಾಠ ಕೇಳಿದರು, ಇಂದು ತುಂಬ ಜನರಿಗೆ ಆಶ್ಚರ್ಯ ತಂದಿತು.

**ಡಾ. ಅಣ್ಣಯ್ಯ:** ನಿಮಗೆ ASI ಯಿಂದ ಜೀವಮಾನ ಪ್ರಶಸ್ತಿ ಸಂದಿದೆ. ಅಲ್ಲದೆ ನಾರಾಯಣ ಆಸ್ಪತ್ರೆಯಲ್ಲಿ ಡಾ. ದೇವಿಶೆಟ್ಟಿಯವರು ಒಂದು ವಾರ್ಡ್‌ಗೆ ನಿಮ್ಮ ಹೆಸರಿಟ್ಟಿದ್ದಾರೆ ತಮಗೆ ಹೇಗನಿಸುತ್ತಿದೆ. (ತಾವು ಜೀವಂತ ದಂತಕತೆಯಾಗಿದ್ದೀರಿ). ಸಮಾರಂಭಗಳಲ್ಲಿ ತಮ್ಮ ವಿಧ್ಯಾರ್ಥಿಗಳು ತಮ್ಮ ಪಾದಸ್ಪರ್ಶ ಮಾಡಿರುವುದನ್ನು ಕಂಡಿದ್ದೇನೆ.

**ಡಾ. ಬಲ್ಲಾಳ್:** ಇದು ಎಲ್ಲಾ ದೇವರಿಚ್ಛೆ ಎಲ್ಲಕ್ಕಿಂತಲು ನನಗೆ ಸಾವಿರಾರು ವಿಧ್ಯಾರ್ಥಿಗಳ ಪ್ರೀತಿ ವಿಶ್ವಾಸ ದೊರಕಿದೆ. ಇದೆಲ್ಲ ದೇವರ ಕೊಡುಗೆ.

**ಡಾ. ಅಣ್ಣಯ್ಯ:** ನೀವು ASI ನಲ್ಲಿ Quiz Master ಆಗಿದ್ದೀರಿ. ಆ ಅನುಭವವನ್ನು ಹಂಚಿಕೊಳ್ಳಬಹುದೇ.

**ಡಾ. ಬಲ್ಲಾಳ್:** ಹೌದು, ನನಗೆ ತುಂಬಾ ಒಳ್ಳೆ ಮಿತ್ರರು ಸಹಪಾಠಿಗಳು ಸಿಕ್ಕರು ಡಾ. ಲಕ್ಷಣರವರಂತೆ, ಆದ್ದರಿಂದ ನನಗೆ ಇದೆಲ್ಲ ಸಾಧ್ಯವಾಯಿತು. Quiz ಗೆ, ಎಲ್ಲಾ ವ್ಯವಸ್ಥೆಗಳನ್ನು ಮಾಡಿ, ಸಾಮಾಗ್ರಿಗಳನ್ನು ಒದಗಿಸಿದರು ಅವರು ಗರ್ಭಗುಡಿಯ ದೇವರು ನನ್ನನ್ನು ಒಂಥರಾ ಉತ್ಸವ ಮೂರ್ತಿಯನ್ನಾಗಿ ಮಾಡಿದರು.

ಖಾಲಿಯಾಗುತ್ತಿತ್ತು, ನಿಮ್ಮ ಪಾಠ ಕೇಳಲು ಈಗ ಅದೇ Trend ಇದೆಯಾ, ಈಗ Online CME, Teaching ಯಿಂದ ಏನು ಪ್ರಭಾವ ಇದೆ.

**ಡಾ. ಬಲ್ಲಾಳ್:** ಈಗಲೂ ತುಂಬಾ ಪ್ರತಿಭಾನ್ವಿತ ವೈದ್ಯ ಶಿಕ್ಷಕರಿದ್ದಾರೆ. ಆದರೆ ಸಂಖ್ಯೆ ಕಮ್ಮಿ ಇದೆ.

**ಡಾ. ಅಣ್ಣಯ್ಯ:** Mixopathy ಬಗ್ಗೆ ತಮ್ಮ ಅಭಿಪ್ರಾಯವೇನು?

**ಡಾ. ಬಲ್ಲಾಳ್:** ಆ Concept ಸರಿ ಇಲ್ಲ MS ಅನ್ನು 3 ವರ್ಷ ಓದಿಯೂ ನಮಗೆ ಕೆಲವು ಶಸ್ತ್ರಚಿಕಿತ್ಸೆ ಮಾಡುಲು ಧೈರ್ಯ ಸಾಲದೆ, ನಿಮ್ಮ ಸೀನಿಯರ್‌ಗಳ ಸಹಾಯ ಕೇಳುತ್ತೇವೆ. ಇಂತಹದ್ದರಲ್ಲಿ ಬೇರೆ ಪದ್ದತಿಯಲ್ಲಿ ಓದಿದವರು ಹೇಗೆ ಇದನ್ನು ನಿಭಾಯಿಸುವರು.

**ಡಾ. ಅಣ್ಣಯ್ಯ:** ನೀವು ಕರ್ನಾಟಕ ಹಾಗೂ ತಮಿಳುನಾಡಿನ ವಿವಿಧ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಿದ್ದೀರಿ, ಏನಾದರೂ ವ್ಯತ್ಯಾಸ ಅನಿಸುತ್ತಿದೆಯೇ?

**ಡಾ. ಬಲ್ಲಾಳ್:** ಕೆಲವು ಖಾಸಗಿ



ಡಾ. ಚಂದ್ರಶೇಖರಶೆಟ್ಟಿಯವರು (RGUHS) VC ಒಂದು Pilot Project ಮಾಡಿ, Manipal Hospital ಮತ್ತು BMC ವಿಧ್ಯಾರ್ಥಿಗಳನ್ನು ಒಟ್ಟಿಗೆ ತಂದರು. ಕೆಲವು ವಿದ್ಯಾರ್ಥಿಗಳಿಗೆ ಭೋಧಿಸುವ ಆಸಕ್ತಿಯಿರುವ ಶಿಕ್ಷಕರು ಮತ್ತು ವಿಧ್ಯಾರ್ಥಿಗಳಿಗೆ ಒಳ್ಳೆಯ ಅವಕಾಶವಿತ್ತು.

**ಡಾ. ಅಣ್ಣಯ್ಯ:** ಹೌದು ಸರ್. ಅವರಿಂದಲೆ ನಾನು MBBS ಮಾಡಿದ್ದು, BSC ಆದ ಮೇಲೆ MBBS Course ಗೆ, ೦dmission ಮಾಡಿಸಿ, MMC ಯಿಂದ ಮಣಿಪಾಲ್‌ಗೆ ನನ್ನ ವರ್ಗಾವಣೆ ಮಾಡಿಸಿದರು. ನನ್ನ ನೆರೆಮನೆಯವರು ಅವರು ಕುಂದಾಪುರದಲ್ಲಿ.

**ಡಾ. ಅಣ್ಣಯ್ಯ:** ತಾವು ತಮ್ಮ ಬಿಡುವಿಲ್ಲದ ವೃತ್ತಿಯ ಮಧ್ಯೆಯೂ ಸಾಹಿತ್ಯ ಕೃಷಿ ಮಾಡಿದ್ದೀರಿ ತಮ್ಮ ಪುಸ್ತಕ Brahmin Ballal of ದಕ್ಷಿಣ ಕನ್ನಡ, Clinical Surgery ಪುಸ್ತಕ, ಜೀವನ ಚರಿತ್ರೆ ಬರೆದಿದ್ದೀರಿ, ಅನೇಕ ಸಮಾಜ ಮುಖಿ ಕಾರ್ಯಗಳಲ್ಲಿ ತೊಡಗಿದ್ದೀರಿ. ಈ ಪ್ರವೃತ್ತಿಗಳು ನಿಮಗೆ ಹೇಗೆ ಸಹಾಯಕವಾದವು ತಿಳಿಸುತ್ತೀರಾ.


**ಡಾ. ಬಲ್ಲಾಳ್:** ನನಗೆ ಮಾನವೀಯತೆಯೇ ಮುಖ್ಯ ಮೊದಲು ಮಾನವನಾಗು ಅನ್ನುವಂತೆ. ಹೌದು ಈ Brahmin Ballal of ದಕ್ಷಿಣ ಕನ್ನಡ ಪುಸ್ತಕ ಬರೆದಿದ್ದೇನೆ. ಇದಕ್ಕೆ ನನ್ನ ತಂದೆಯವರು ಪ್ರೇರಣೆ, ಪ್ರೋತ್ಸಾಹ ಇದೆ. ಮಧ್ವ ವಿಜಯದಲ್ಲಿ ಮಾಧ್ವಾಚಾರ್ಯರಿಗೆ ಸಹಾಯ ಮಾಡಿದ ಬಲ್ಲಾಳರ ಉಲ್ಲೇಖ ಇದೆ. ಅವರು ಬಲ್ಲಾಳನನ್ನು ಸಮರ್ಥರು ಎಂದು ಗುರುತಿಸುತ್ತಾರೆ. ದಕ್ಷಿಣ ಕನ್ನಡದಲ್ಲಿರುವ 4 ವರ್ಗದ ಬ್ರಾಹ್ಮಣರನ್ನು ಕುರಿತು ಈ ಪುಸ್ತಕದಲ್ಲಿ ವಿವರಗಳಿವೆ, ನಾನು ತುಂಬಾ ಪುಸ್ತಕಗಳನ್ನು ಓದುತ್ತೇನೆ.

**ಡಾ. ಅಣ್ಣಯ್ಯ:** ಇತ್ತೀಚೆಗೆ ಪ್ರಕಟವಾದ ಸಿರಿಂಜ್ ಹಿಂಡಿದ ಕೈ ... ಗೊಸ್ಕರ ನಿಮ್ಮ ಲೇಖನವನ್ನು ಆಹ್ವಾನಿಸಲಾಗಲಿಲ್ಲ, ಅದರ 2ನೇ ಭಾಗಕ್ಕೆ ನೀವು ಖಂಡಿತ ಬರೆಯಬೇಕು ಸರ್.

**ಡಾ. ಬಲ್ಲಾಳ್:** ಖಂಡಿತ ಡಾ. ಚಂದ್ರಪ್ಪಗೌಡ ಮತ್ತು ಡಾ. ಚಂದ್ರಶೇಖರ ಅವರು ಕನ್ನಡದಲ್ಲಿ ವೈದ್ಯಕೀಯ ಲೇಖನ ಬರೆದದ್ದು ನೆನಪಿದೆ ನನಗೆ.

**ಡಾ. ಅಣ್ಣಯ್ಯ:** ನೀವು ಸಂತೃಪ್ತ ಅವಿಭಕ್ತ ಕುಟುಂಬದಿಂದ ಬಂದವರು ಈಗಿನ ನ್ಯೂಕ್ಲಿಯರ್ Family ಬಗ್ಗೆ ಏನನಿಸುತ್ತಿದೆ ಸರ್.

**ಡಾ. ಬಲ್ಲಾಳ್:** ಬದಲಾವಣೆಯೇ ಶಾಶ್ವತ ಅಲ್ಲವೇ.



ಕೃಷಿಯ ಆದಾಯ ಇಳಕೆಯಾದಂತೆ, ಎಲ್ಲರೂ ಬೇರೆ ವೃತಿಗಳತ್ತ ಮುಖ ಮಾಡಿದರು ಆಗ ಒಟ್ಟಗೆ ಇರಲಿಕ್ಕೆ ಆಗುವುದಿಲ್ಲವಲ್ಲ ಅದಕ್ಕೆ ಚಿಕ್ಕ ಕುಟುಂಬಗಳಿವೆ ಈಗ ನಾನು ನನ್ನ ಮೊಮ್ಮಕ್ಕಳಿಗೆ ಹೇಳುತ್ತಿರುತ್ತೇನೆ Care and Share ಎಂದು, ಇವೆರಡು ಅವಿಭಕ್ತ ಕುಟುಂಬಕ್ಕೆ ತುಂಬಾ ಮುಖ್ಯ ಈಗ ಕುಟುಂಬದ ಮೌಲ್ಯಗಳು ನಶಿಸುತ್ತಿವೆ.

**ಡಾ. ಅಣ್ಣಯ್ಯ:** ಈಗಿನ ವೈದ್ಯರಿಗೆ ತಮ್ಮ ಕಿವಿಮಾತು.

**ಡಾ. ಬಲ್ಲಾಳ್:** ಈಗ ವೈದ್ಯರಲ್ಲಿ ಪರಸ್ಪರ ಗೌರವ ಕಮ್ಮಿ ಆಗ್ತಾ ಇದೆ ಅನ್ನಿಸುತ್ತೆ Medical Jousting ಆಗ್ತಾ ಇದೆ. ಇದು ಸರಿ ಇಲ್ಲ. ಪರಸ್ಪರ ಗೌರವ ಮತ್ತು ಸಹಕಾರ ತುಂಬಾ ಮುಖ್ಯ ಮತ್ತು ಅವಶ್ಯ. ಯಾರು ಶಾಶ್ವತರಲ್ಲ, ನಮ್ಮ ಜ್ಞಾನವನ್ನು ಇತರರಿಗೆ ಹಂಚಿದರೆ ಸಾರ್ಥಕ ಪರಸ್ಪರ ಪ್ರತಿಸ್ಪರ್ಧೆ ಒಳ್ಳೆಯದಲ್ಲ.

**ಡಾ. ಅಣ್ಣಯ್ಯ:** ನಿಮ್ಮೊಂದಿಗೆ ಮಾತನಾಡಿದ್ದು ನನಗೆ ಅತೀವ ಸಂತಸ ಹಾಗೂ ಹೆಮ್ಮೆ ಸರ್ ನಿಮ್ಮ ರಜೆಯಲ್ಲಿ ತೊಂದರೆ ಆಯಿತು ಅನಿಸುತ್ತೆ. ಈ ಸಂದರ್ಶನ ವೈದ್ಯ ಸಂಪದದಲ್ಲಿ ಪ್ರಕಟವಾಗಲಿದೆ.



**ರಘು.**
**ವೈದ್ಯಕೀಯ ವಿದ್ಯಾರ್ಥಿ, ತೃತೀಯ ವರುಷ**
**ವಿಜಯನಗರ ವೈದ್ಯಕೀಯ ಮಹಾ ವಿದ್ಯಾಲಯ, ಬಳ್ಳಾರಿ**

ವಿದ್ಯಾರ್ಥಿ ಲೋಕ

# ಕೀರ್ತಿಘೋಷಗಳು



**ಡಾ॥ ಕೆ. ಎಸ್. ಶುಭ್ರತಾ**
**ವಿಭಾಗೀಯ ಸಂಪಾದಕರು**

ಕಗ್ಗತ್ತಲ ರಾತ್ರಿಯಲ್ಲಿ, ಕಾರ್ಮೋಡಗಳ ಮಧ್ಯೆ ಕಂಗೊಳಿಸಿದ ಅರ್ಧರಕ್ತಚಂದಿರ ಮಲ್ಪೆಯ ಬೃಹತ್ ಕಡಲ ತೀರದಲ್ಲಿ ಮಲಗಿದ್ದನೊಬ್ಬ ಮೀನುಗಾರ (ಉಗ್ರ), ನೋಡುತ್ತ ಬಾಹ್ಯಾಕಾಶದಲ್ಲಿ ಸಹಸ್ರಾರು ನಕ್ಷತ್ರಗಳು ನೋಡುತ್ತಲೆ ಕಾಣುತ್ತಿದ್ದವು ಸಮುದ್ರದಡಿಯ ಮುತ್ತುಗಳಂತೆ ಉಪಪ್ರಜ್ಞೆಯಿಂದಲೇ ತನ್ನ ಬಲಕ್ಕೆ ವರ್ತಿಯೊಂದನ್ನು ತೋಡಿದ್ದ, ತಣ್ಣನೆ ತಂಗಾಳಿ ಅತಿ ವೇಗವಾಗಿ ಬೀಸಿದಾಗ ನಡುಗುತ್ತಲೆ ಕೂಗಿದ. "ಓ ಗೋಪಿಚಂದ ಮಾಧವ", ಪುಟ್ಟ ಅಲೆಯೊಂದು ಅವನ ಪಾದವನ್ನು ಮೆಟ್ಟಿ ಹೋಗಿತ್ತು, ಆ ಹೊತ್ತಿನಲ್ಲಿ ಇದು ದೈನಂದಿನ ಆಚರಣೆಯಾಗಿತ್ತು ಪ್ರತಿದಿನ ಗಡಿ-ಬಿಡಿ, ಮೀನು ಮಾರಾಟ ಮತ್ತು ವ್ಯಾಪಾರದ ನಂತರ ಹೊಟ್ಟೆ ತುಂಬ ಅನ್ನ ಮೀನುಸಾರು, ತಿಂದು ಕಡಲ ತೀರದಲ್ಲಿ ಒಂದರ್ಧ ಮೈಲಿ ನಡೆದು, ಮಂಗಳಾದೇವಿಯ, ದೇವಾಲಯದ ಹಿಂದೆ ಕುಳಿತು ಆಕಾಶ ನೋಡುವುದಾಗಿತ್ತು. ಆದರೆ ಇಂದು ಮನದೊಳಗೆ ಬಹು ಪ್ರಶ್ನೆಗಳಿದ್ದವು, ಅವುಗಳು:

1. ಅಂತರಾಳದಲ್ಲಿರುವ ಅಂತರಾತ್ಮವೇನು?
2. ಪ್ರತಿಬಿಂಬದ ಬಿಂಬವೇನು?
3. ಕತ್ತಲೊಳಗಿನ ಬೆಳಕೇನು?

ಈ ಪ್ರಶ್ನೆಗಳ ಮೂಲ ದು:ಖವಾಗಿತ್ತು. ಕೆಲವು ದಿನಗಳಿಂದ ವ್ಯಾಪಾರದಲ್ಲಿ ಬಹಳಷ್ಟು ನಷ್ಟವಾಗಿತ್ತು. ಕಣ್ಣೀರ ಹನಿಯೊಂದು ಜಾರಿ ನೆಲದ ಮೇಲೆ ಬಿದ್ದಾಗ ಮೃದುವಾದ ಧ್ವನಿಯಲ್ಲಿ ಹಾಡಿದ "ತಾರಕ್ಕ ಬಿಂದಿಗೆ ನಾ ನೀರಿಗೆ ಹೋಗುವೆ ತಾರೆ ಬಿಂದಿಗೆಯ" ಮುಂಜಾನೆ ಬಲ ಗಲ್ಲದ ಮೇಲೆ ಗುರುತುಳ್ಳ ಒಬ್ಬ ಕಾರ್ಮಿಕ ಬಂದು ಉಗ್ರನನ್ನು ನಿದ್ರೆಯಿಂದ ಎಚ್ಚರಿಸಿ ಕೇಳಿದ "ಕೆಲಸ ಸಿಗುತ್ತ" "ನೀವು ಬಹಳ ಒಳ್ಳೆ ಮೀನುಗಾರ ಅಂತ ಕೇಳ್ಪಟ್ಟೆ".





ಉಗ್ರ ಮಲ್ಪೆ ತೀರದ ಅತಿ ಚಾಲಾಕಿ ಮೀನುಗಾರ, "ಸರಿ ಈ ದಿನ ಮೀನು ಹಿಡಿಯುವ ವ್ಯಾಪಾರದ ನಂತರ ನೋಡಿ ಹೇಳುತ್ತೇನೆ", ದೋಣಿ ತೆಗೆದುಕೊಂಡು ಸಮುದ್ರದೆಡೆ ನಡೆದರು.

ಸಂಧ್ಯಾ ವೇಳೆಯಾಗಿತ್ತು. ಸೂರ್ಯ ಮುಳುಗುತ್ತಿದ್ದನು, ಅನ್ನ-ಸಾರು ತಿಂದು ಕಾರ್ಮಿಕ ಮತ್ತು ಉಗ್ರ ಮಂಗಳಾದೇವಿಯ

ದೇವಾಲಯದ ಹಿಂದೆ ಕುಳಿತು ಸಂತಸದಿಂದ ಆ ದಿನದ ಯಶಸ್ಸಿನ ಬಗ್ಗೆ ಮಾಡನಾಡುತ್ತಿದ್ದರು.

ಕಾರ್ಮಿಕ (ಕುತೂಹಲದಿಂದ): ಇಂದು ಬಹಳಷ್ಟು ಮೀನು ಮತ್ತು ಮುತ್ತುಗಳು ಸಿಕ್ಕಿವೆ ಅಲ್ಲವೆ?

ಉಗ್ರ (ಖುಷಿಯಿಂದಲೆ): ಪಶ್ಚಿಮದತ್ತ ನಡೆದ ಗಾಳಿಯ ದೊಡ್ಡ ಅಲೆಯಿಂದ ಇದೆಲ್ಲವು ಸಾಧ್ಯವಾಯಿತು.





ಉಗ್ರ: ಸ್ವಲ್ಪಹೊತ್ತು ಸುಮ್ಮನಾಗಿ ಹೇಳಿದ, ನೀ ನನಗೆ ಸಿಕ್ಕಿಯಲ್ಲ ಭಾಗ್ಯದಂತೆ.

ಕಾರ್ಮಿಕ (ಕುತೂಹಲದಿಂದ): ಮಾರುಕಟ್ಟೆಯಲ್ಲಿ ಇಂದು ದರಗಳೆಲ್ಲವು ಗಗನಕ್ಕೇರಿವೆ ಅಲ್ಲವೆ?

ಉಗ್ರ: ಮಲ್ಪೆ, ಉಡುಪಿ, ಕೋಡಿ, ಪಾಡೆ ಅಲ್ಲೆಲ್ಲ ವಿಜಯದಶಮಿಯ ಬಿಸಿ ಜೋರಾಗಿದೆ, ನೀ ನನಗೆ ಸಿಕ್ಕೆಯಲ್ಲ ಭಾಗ್ಯದಂತೆ.

ಕಾರ್ಮಿಕ: ನಿನಗೆ ಬಹಳಷ್ಟು ಗೊತ್ತಿದೆಯಲ್ಲ, ನನ್ನದೊಂದು ಪ್ರಶ್ನೆ ಇದೆ, ಸಮುದ್ರ, ಅಂತರಾತ್ಮವೇನು?

ಉಗ್ರ: ಜೀವರಾಶಿಯ ಜೀವ (ಉಗ್ರನಿಗೆ ಎಲ್ಲವು ಕೇಳಲಾರಂಭಿಸಿತು).

ಕಾರ್ಮಿಕ: ಹಾಗಾದರೆ ಅಂತರಾಳದ ಅಂತರಾತ್ಮವು ಜೀವವಲ್ಲವೆ!

ಉಗ್ರ ಆಶ್ಚರ್ಯದಿಂದ ನೋಡಿದ.

ಕಾರ್ಮಿಕ: ಮಾರುಕಟ್ಟೆಯ ಬಿಂಬವೇನು?

ಉಗ್ರ (ಭಯದಿಂದ): ಬೇ ಬೇ ಬೇಡಿಕೆ

ಕಾರ್ಮಿಕ: ಹಾಗಿದ್ದಮೇಲೆ ಪ್ರತಿಬಿಂಬದ ಬಿಂಬ ಸತ್ಯವಲ್ಲವೆ?

ಉಗ್ರ ನಡುಗಲಾರಂಭಿಸಿದ

ಅಷ್ಟರಲ್ಲಿ ದೊಡ್ಡದಾದ ಅಲೆಯೊಂದು ರಭಸದಿಂದ ಮಂಗಳಾದೇವಿಯ ಕಡೆಗೆ ಬರಲಾರಂಭಿಸಿತು.

ಉಗ್ರ ಮಂಗಳಾದೇವಿಯ ಕಡೆಗೆ ಓಡಲಾರಂಬಿಸಿದ, ಅಲೆಯು ಹಿಂದೆಸರಿಯುತ್ತಲೆ ಉಗ್ರನು, ಹಿಂತಿರುಗುವಷ್ಟರಲ್ಲಿ ಕಾರ್ಮಿಕ ಮಯಾವಾಗಿದ್ದನು, ಸುತ್ತ ಕಣ್ಣಾಡಿಸಿದರು ಕಾಣಲ್ಲಿಲ್ಲ.

ಉಗ್ರನ ತನುಮನವೆಲ್ಲವು ರೊಮಾಂಚನ ಗೊಂಡಿತು, ಭಯದಲ್ಲೆ ಒಂದು ಹೆಜ್ಜೆ ಮುಂದಿಡುತ್ತ ಜೋರಾಗಿ ಕೂಗಿದ.


"ಕತ್ತಲೊಳಗಿನ ಬೆಳಕೇನು ಓ ಗೋಪಿಚಂದ ಮಾಧವ"

ಕಡಲ ಕಡೆಯ ದೃಷ್ಟಿ ದೂರದಲ್ಲಿ ಕತ್ತಲಲ್ಲಿ ಬಹುದೊಡ್ಡ ಬೆಳಕೊಂದು ಮೂಡಿತು ಆಗ ಆಕಾಶದಿಂದ ಅಶರೀರವಾಣಿಯೊಂದು ಕೇಳಿತು.

ಆತ್ಮ ಸ್ಥೈರ್ಯವಲ್ಲವೇ?

ಉಗ್ರ ಅಲ್ಲೆ ಕುಸಿದು ಮೃದುವಾಗಿ ಹಾಡಿದ.

ತಲ್ಲಣಿಸದಿರು ಕಂಡ್ಯ ತಾಳು ಮನವೆ



ವಿದ್ಯಾರ್ಥಿ ಲೋಕ (ಕವನ)

# ಬದಲಾದ ಬಾಲ್ಯದ ದಿನಗಳು

**ದೀಪಿಕ .ಹೆಚ್.ಎಸ್**
ತೃತೀಯ ವರ್ಷ ಎಂ.ಬಿ.ಬಿ.ಎಸ್
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ



**ಡಾ|| ಕೆ. ಎಸ್. ಶುಭ್ರತಾ**
ವಿಭಾಗೀಯ ಸಂಪಾದಕರು

ಹೋಳಿಯಲ್ಲಿ ಬಣ್ಣ ಹಚ್ಚಿಸಿಕೊಳ್ಳದೆ ತಪ್ಪಿಸಿಕೊಂಡು ಓಡುವುದರಿಂದ ಶುರುವಾಗಿ,
ಪ್ರತಿದಿನ ಬಣ್ಣ ಹಚ್ಚಿಕೊಂಡೇ ಬದುಕುವವರೆಗೆ..

ಆಟಿಕೆಗಳ ಮೇಲೆ ಹುಚ್ಚು ಭಾವನೆಗಳನ್ನಿಟ್ಟು ಆಟ ಆಡವುದರಿಂದ ಶುರುವಾಗಿ,
ಭಾವನೆಗಳನ್ನೇ ಆಟಿಕೆಗಳನ್ನಾಗಿಸಿಕೊಂಡು ಬದುಕುವವರೆಗೆ...

ಶಾಲೆಯ ಕಂಪೌಂಡ್ ಗೋಡೆಯನ್ನು ಹಾರಿ, ಮನೆ ಮನೆಯನ್ನು ಸುತ್ತುವುದರಿಂದ ಶುರುವಾಗಿ,
ಮನಗಳ ಮಧ್ಯೆ, ಹಾರಲಾಗದ ಎತ್ತರದ ಗೋಡೆಗಳನ್ನು ಕಟ್ಟಿಕೊಂಡು ಬದುಕುವವರೆಗೆ..

ಪರೀಕ್ಷೆಗಳಿಂದ ತಪ್ಪಿಸಿಕೊಳ್ಳಲು ಸುಳ್ಳು ನಾಟಕಗಳನ್ನು ಆಡುವುದರಿಂದ ಶುರುವಾಗಿ,
ಬದುಕೆಂಬ ನಾಟಕದಲ್ಲಿ ಅರಿವಿಲ್ಲದೆ ಎದುರಾಗುವ ಪರೀಕ್ಷೆಗಳನ್ನು ಎದುರಿಸಲು ಸಜ್ಜಾಗುವವರೆಗೆ..

ಬಳಪ ಮುರಿಯಿತೆಂದು, ಹೊಸ ಬಳಪ ಕೊಡಿಸುವವರೆಗೆ ಕಣ್ಣೀರಿಡುವುದರಿಂದ ಶುರುವಾಗಿ,
ಒಡೆದ ಹೃದಯವನ್ನು ಮೆಲ್ಲನೆ ಜೋಡಿಸಿ, ಮೌನದಿ ಮುಗುಳ್ನಗೆಯ ಬೀರುವವರೆಗೆ..

ಅಪ್ಪನ ಹೆಗಲ ಮೇಲೆ ಕೂತು ಹಾಯಾಗಿ ಊರು ಸುತ್ತುವುದರಿಂದ ಶುರುವಾಗಿ,
ಕಲ್ಲು ಮುಳ್ಳುಗಳು ತುಂಬಿರುವ ಹಾದಿಯ ಮೇಲೆ ನಡೆಯುತ್ತಾ ಕನಸಿನ ಪರಿವರ್ತವ ಹೇರುವ ಕಡೆಗೆ
ಕ್ರಮಿಸುತ್ತಿದೆ ಹಾದಿ ಸುಳಿವಿಲ್ಲದೆ

ಕಂಗಳಲ್ಲಿ ಭರವಸೆಯ ಬೆಳಕೊಂದಿದೆ
ಮುಳ್ಳು ಹಾದಿಯನ್ನು ಮರೆಸುವ ಪರ್ವತದ ತುದಿಯ ಸುಂದರ ದೃಶ್ಯ ನೋಡಲು ಹಾತೊರೆದಿದೆ ಈ ಮನ



## ಕವಿತೆಯ ವಿಮರ್ಶೆ

**ಡಾ.ಆರ್.ಕೆ.ಸರೋಜ**
ರೇಡಿಯಾಲಜಿ ಪ್ರೊಫೆಸರ್ ಹಾಗೂ ನ್ಯೂಕ್ಲಿಯರ್ ಮೆಡಿಸಿನ್ ತಜ್ಞರು..

ಇದೊಂದು ಉತ್ತಮ ಕವಿತೆ. ಸರಳವಾದ ಭಾಷೆ-ಉತ್ತಮ ಶೈಲಿ ಇಲ್ಲಿ ಸಮಾಜದ ಗೋಸುಂಬೆತನವನ್ನು ವಿಡಂಬನೆಯ ಮೂಲಕ ಪ್ರಶ್ನಿಸುವ ತಾತ್ವಿಕ ಜಿಜ್ಞಾಸೆ ಮುಖಾಮುಖಿಯಾಗಿರುತ್ತದೆ. ಬಣ್ಣ ಹಚ್ಚಿಕೊಂಡು ಬದುಕುವುದು ಒಳಗೊಂದು ಹೊರಗೊಂದು ಅಸಲಿಯತ್ತಿನ ಮೇಲೆ ಬಣ್ಣದ ವೇಷ ಹಚ್ಚಿ ನಿಜದ ಮೇಲೆ ತೆರೆ ಹಾಕಿ ಬದುಕುವ ರೀತಿ ಬಣ್ಣಿತವಾಗಿದೆ.

ಭಾವನೆಗಳನ್ನೇ ಆಟಿಕೆಗಳನ್ನಾಗಿಸಿಕೊಂಡು...... ಆಟಿಕೆಗಳು ಬಾಲ್ಯದಲ್ಲಿ ಆಟಕ್ಕೆ ಮಾತ್ರ. ಆದರೆ ದೊಡ್ಡವರಾಗುತ್ತಿದ್ದಂತೆ ಭಾವನೆಗಳೇ ಆಟಿಕೆಗಳಾಗಿ ಬಿಡುತ್ತವೆ. ಮುಗ್ಧತೆ ಮಾಸಿ ಸಮಯಕ್ಕೆ ತಕ್ಕಂತಹ ಆಟ ಕಟ್ಟುವ ಪರಿ ಬಿಂಬಿತವಾಗಿದೆ.

'ಮನಗಳ ಮಧ್ಯೆ ಹಾರಲಾಗದ ಗೋಡೆ' ಪ್ರಸ್ತುತದಲ್ಲಿ, ಧರ್ಮ-ದ್ವೇಷ ಭಾವನೆಗಳ ಹಾರಲಾಗದ ಗೋಡೆಗಳನ್ನು ಕಟ್ಟಿಕೊಂಡು ವಿಶ್ವ ಬಂಧುತ್ವದಿಂದ ಪ್ರತ್ಯೇಕಿಸಿ ಕೊಳ್ಳುತ್ತಿದ್ದೇವೆ. ಬದುಕು ಒಂದು ಜೀವನ ನಾಟಕ, ಈ ಹಾದಿಯಲ್ಲಿ ಎಂತಹ ಕ್ಲಿಷ್ಟ ಪರೀಕ್ಷೆಗಳು ಬಂದೊದಗಿದರೂ ಅವುಗಳನ್ನು ಧೈರ್ಯದಿಂದ ಎದುರಿಸಿ ಎನ್ನುವ ಸಂದೇಶವನ್ನು ಸಾರಿ ಹೇಳುತ್ತದೆ.

ಈ ಬದುಕಿನ ಹಾದಿ ಸರಳವಲ್ಲ, ಆದರೇನು? ಧೈರ್ಯದಿಂದ ಮುನ್ನಡೆವೆ, ನನಗೆ ಭರವಸೆಯಿದೆ ಎಂಬ ಆತ್ಮಸ್ಥೈರ್ಯ ಧ್ವನಿಸುತ್ತದೆ. ಒಟ್ಟಿನಲ್ಲಿ ಇದು ಒಂದು ಪ್ರಬುದ್ಧ ಸುಂದರ ಕವಿತೆ.

# ಭಾವಪೂರ್ಣ ಶ್ರದ್ಧಾಂಜಲಿ



**ಡಾ ಕವಿತಾ ಸದಾಶಿವ**
**10.07.1961 – 26.12.2022**

ಭಾರತೀಯ ವೈದ್ಯಕೀಯ ಸಂಘ ಭದ್ರಾವತಿ ಶಾಖೆಯ ಅಧ್ಯಕ್ಷರು ಮತ್ತು ವೈದ್ಯ ಸಂಪದದ ವಿಭಾಗೀಯ ಸಂಪಾದಕರಾಗಿದ್ದ ಡಾ ಕವಿತಾ ಸದಾಶಿವ ಅವರ ಅಕಾಲಿಕ ನಿಧನಕ್ಕೆ ಸಂಪಾದಕ ಮಂಡಳಿಯಿಂದ ಭಾವಪೂರ್ಣ ಶ್ರದ್ಧಾಂಜಲಿ. ಅವರ ನಡೆ ನುಡಿ ಮತ್ತು ಜೀವನೋತ್ಸಾಹ ನಮಗೆ ಸದಾ ಪ್ರೇರಣೆ.



**ಮುರಳಿ ಹತ್ವಾರ್**
ಲಂಡನ್

ಅನಿವಾಸಿ ಲೋಕ!

# ಇನ್ಸುಲಿನ್: ನೂರು ವರ್ಷದ ಪಯಣ



**ಡಾ ಶಿವಶಂಕರ ಎನ್ ಮೇಟಿ**
**ವಿಭಾಗೀಯ ಸಂಪಾದಕರು**

ಕೆಲವೊಮ್ಮೆ ಹಿನ್ನೋಟ ಇಂದಿನ ಪಯಣಕ್ಕೆ ಮತ್ತೆ ಮುಂದಿನ ದಿನಗಳ ಹೆಜ್ಜೆಗಳಿಗೆ ಸರಿ ದಾರಿ ತೋರಿಸುತ್ತದೆ. ಕೆಲವೊಮ್ಮೆ, ಅದ್ಭುತ, ಅಸಾಧ್ಯವೆನಿಸುವ ಸಾಧನೆಗಳ ಮಿಂಚಿನಲ್ಲಿ ಹೊಸ ಆಲೋಚನೆಗಳ ಸೃಷ್ಟಿಸುತ್ತದೆ. ಮತ್ತೆ ಕೆಲವೊಮ್ಮೆ, ಮನುಷ್ಯರ ಇಂಗದ ದುರಾಸೆ ಮತ್ತು ನೈತಿಕ ಭ್ರಷ್ಟತೆಗೆ ಕನ್ನಡಿ ಹಿಡಿಯುತ್ತದೆ. ಒಂದು ಶತಮಾನದ ಹಿಂದೆ, 11 ಜನವರಿ 2022, ಇನ್ಸುಲಿನ್ನಿನ ಮೊದಲ ಇಂಜೆಕ್ಷನ್ ಮನುಷ್ಯನ ಮೈಯೊಳಿಳಿದು ಮಧುಮೇಹಿಗಳ ಜೀವ ಉಳಿಸಿ, ಬೆಳೆಸಿ, ಬೆಳೆದ ನೂರು ವರ್ಷದ ದಾರಿ ಹಲವಾರು ಕನ್ನಡಿಗಳ ಮುಂದಿಟ್ಟಿದೆ.

ಮಧುಮೇಹ ಬಹುಷಃ ಅನಾದಿಯಿಂದಲೂ ಮನುಷ್ಯನಿಗಂಟಿದ ಖಾಯಿಲೆ. ಸುಶ್ರುತ, ಚರಕರ ಕಾಲದಲ್ಲೇ ಅದರ ಲಕ್ಷಣಗಳ ಅದರ ವಿವಿಧ ಪ್ರಭೇದಗಳ ವಿಂಗಡಣೆ ಮಾಡುವಷ್ಟು ತಿಳಿದಿತ್ತು. ಆದರೆ, ಆ ಖಾಯಿಲೆಯ ಹುಟ್ಟಿನ ಕಾರಣ ತಿಳಿಯಲಾರಂಭವಾದದ್ದು 19 ನೇ ಶತಮಾನದಲ್ಲಿ. 1869ರಲ್ಲಿ ಲಾಂಗೆರ್ಹಾನ್ಸ್, ಪ್ಯಾಂಕ್ರಿಯಾಸ್ ಗ್ರಂಥಿಯ ಒಂದಿಷ್ಟು ಭಾಗ ಬೇರೆ ರೀತಿ ಇರುವುದನ್ನು ಗುರುತಿಸಿದ. ಮುಂದೆ ಅದಕ್ಕೆ 'ಲಾಂಗೆರ್ಹಾನ್ಸನ ಕಿರುದ್ವೀಪ' ಎಂದು ಹೆಸರಿಡಲಾಯಿತು. 1910ರಲ್ಲಿ ಎಡ್ವರ್ಡ್ ಶಾರ್ಪಿ-ಶಾಫರ್, ಮಧುಮೇಹಿಗಳಲ್ಲಿ ಕೊರತೆಯಿರುವ ಹಾರ್ಮೋನಿಗೆ ಇನ್ಸುಲಿನ್ ಇಂದು ಹೆಸರಿಟ್ಟ – ಲ್ಯಾಟಿನ್ನಿನಲ್ಲಿ ಇನ್ಸುಲ ಎಂದರೆ ದ್ವೀಪ ಎಂದರ್ಥ. ಹೀಗೆ ಹೆಸರಿಟ್ಟುಕೊಂಡ ಇನ್ಸುಲಿನ್ನಿನ ಕಥೆಗೆ ದೊಡ್ಡ ತಿರುವು ಸಿಕ್ಕಿದ್ದು 1921ರಲ್ಲಿ.

ಆ ವರ್ಷ, ಕೆನಡಾದ ಟೊರಂಟೋದ ಆಸ್ಪತ್ರೆಯೊಂದರಲ್ಲಿ ಕೆಲಸಕ್ಕಿದ್ದ ಮೂಳೆ ತಜ್ಞ ಫ್ರೆಡ್ರಿಕ್ ಬ್ಯಾಂಟಿಂಗ್, ಇನ್ಸುಲಿನ್ನಿನ ಬಗ್ಗೆ ಆವರೆಗೆ ಪ್ರಕಟವಾದ ವೈಜ್ಞಾನಿಕ ಲೇಖನಗಳಲ್ಲಿ ಓದಿದ ವಿಚಾರಗಳ ಸ್ಫೂರ್ತಿಯಲ್ಲಿ, ನಾಯಿಗಳ ಪ್ಯಾಂಕ್ರಿಯಾಸ್ ನಿಂದ ಇನ್ಸುಲಿನ್ ತೆಗೆಯುವ ವಿಧಾನವೊಂದನ್ನು ಚಿಂತಿಸಿ, ಆ ಆಲೋಚನೆಯನ್ನ ಟೊರಾಂಟೊ ಯೂನಿವರ್ಸಿಟಿಯ ಪ್ರೊಫೆಸರ್ ಜೆ.ಜೆ. ರ್ ಮ್ಯಾಕ್ಲೌಡ್ ಅವರ ಮುಂದಿಟ್ಟ. ಅವರು, ಅವನ ಪ್ರಯೋಗಗಳಿಗೆ ಮಾರ್ಗದರ್ಶಕರಾಗಲೊಪ್ಪಿ, ಜಾಗ, ಮತ್ತೆ ಸಹಾಯಕ್ಕೆಂದು ಚಾರ್ಲ್ಸ್ ಬೆಸ್ಟ್ ಎಂಬ ವೈದ್ಯಕೀಯ ವಿದ್ಯಾರ್ಥಿಯನ್ನ ನಿಯುಕ್ತಿಮಾಡಿದರು. ಇವರಿಗೆ, ಅಲ್ಲಿನ ಬಯೋಕೆಮಿಸ್ಟ್ ಜೇಮ್ಸ್ ಕಾಲಿಪ್ ನ ಸಹಕಾರವೂ ಸಿಕ್ಕಿತು. ಈ ತಂಡ, ನಾಯಿಯೊಂದರ ಪ್ಯಾಂಕ್ರಿಯಾಸ್ ತೆಗೆದು, ಅದರಿಂದ ಇನ್ಸುಲಿನ್ನನ್ನು ಬೇರ್ಪಡಿಸಿ ಮತ್ತೆ ಅದನ್ನು ಇಂಜೆಕ್ಷನ್ ರೂಪದಲ್ಲಿ ಕೊಟ್ಟಾಗ, ಪ್ಯಾಂಕ್ರಿಯಾಸ್ ತೆಗೆದಾಗ ಹೆಚ್ಚಾಗಿದ್ದ ಸಕ್ಕರೆಯ ಅಂಶ ಕೆಳಗಿಳಿದಿತ್ತು. ಆ ಯಶಸ್ಸಿನ ಉತ್ಸಾಹದಲ್ಲಿ, ಬಹುಬೇಗ ದನಗಳ, ಕರುಗಳ ಪ್ಯಾಂಕ್ರಿಯಾಸ್ ನಿಂದ ಇನ್ಸುಲಿನ್ ತೆಗೆದು, 11 ಜನವರಿ 1922ಕ್ಕೆ, ಮೊದಲ ಬಾರಿಗೆ ಪ್ರಾಣಿಜನ್ಯ ಇನ್ಸುಲಿನ್, 14 ವರ್ಷದ ಥಾಮ್ಸನ್ ಎನ್ನುವ ಮಧುಮೇಹವಿದ್ದ ಹುಡುಗನೊಬ್ಬನ ದೇಹ ಸೇರಿ, ಮನುಷ್ಯ ಕುಲಕ್ಕೆ ಅತಿ ಹಳೆಯ ಖಾಯಿಲೆಯೊಂದಕ್ಕೆ ಚಿಕಿತ್ಸೆ ಸಿಕ್ಕ ಸಂಭ್ರಮವಾಯಿತು.

ನಂತರದ 50 ವರ್ಷಗಳಲ್ಲಿ, ದನಗಳ ಮತ್ತೆ ಹಂದಿಗಳ ಪ್ಯಾಂಕ್ರಿಯಾಸ್ ಗಳಿಂದ ತೆಗೆದು ಶುದ್ಧಗೊಳಿಸಿದ ಇನ್ಸುಲಿನ್ ಲಕ್ಷಾಂತರ ಜನರ ಜೀವ ಉಳಿಸಿ ಬೆಳೆಸಿತ್ತು. ಈ ಇನ್ಸುಲಿನ್ ಒಮ್ಮೆ ತೆಗೆದುಕೊಂಡರೆ ನಾಲ್ಕರಿಂದ ಆರು ಗಂಟೆ ಕೆಲಸ ಮಾಡುತ್ತಿದ್ದರಿಂದ ಅದನ್ನ ದಿನಕ್ಕೆ ಮೂರರಿಂದ ನಾಲ್ಕು ಬಾರಿ ತೆಗೆದುಕೊಳ್ಳಬೇಕಾಗಿತ್ತು. 1950ರ ದಶಕದಲ್ಲಿ, ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುವ ಇನ್ಸುಲಿನ್ಗಳ ಅವಿಷ್ಕಾರವಾಯಿತು. ನಂತರ, ತಕ್ಷಣ ಮತ್ತೆ ನಿಧಾನ ಕೆಲಸ ಮಾಡುವ ಎರಡು ಇನ್ಸುಲಿನ್ಗಳನ್ನ ಬೇರೆ ಬೇರೆ ಪ್ರಮಾಣದಲ್ಲಿ ಮಿಕ್ಸ್ ಮಾಡಿ ದಿನಕ್ಕೆ ಎರಡು ಅಥವಾ ಮೂರು ಬಾರಿ ಕೊಡುವದು ಪ್ರಧಾನವಾಯಿತು.

1969ರಲ್ಲಿ ಇಂಗ್ಲೆಂಡಿನ ಡೊರೊಥಿ ಹಾಜ್ಕಿನ್ ಇನ್ಸುಲಿನ್ನಿನ ಪ್ರೋಟೀನಿನ ಸಂರಚನೆ ಮತ್ತು ಸ್ವರೂಪದ ವಿವರ ಪತ್ತೆ ಹಚ್ಚಿದ್ದು, ಇನ್ಸುಲಿನ್ನಿನ ಪಯಣಕ್ಕೆ ಮತ್ತೊಂದು

ತಿರುವು ಕೊಟ್ಟಿತು. ಇನ್ಸುಲಿನ್ನಿನ ಸಂರಚನೆ ತಿಳಿದ ಒಂದು ದಶಕದ ಒಳಗೆ, ಲ್ಯಾಬುಗಳಲ್ಲಿ ಮಾನವ ಇನ್ಸುಲಿನ್ನನ್ನು ತಯಾರಿಕೆ ಶುರುವಾಗಿತ್ತು. ಅಲ್ಲಿಂದ ಇಲ್ಲಿವರೆಗೆ ಈ ಹೊಸ ಇನ್ಸುಲಿನ್ಗಳದ್ದೇ ಪ್ರಾಬಲ್ಯ. ಇತ್ತೀಚಿನ 20 ವರ್ಷಗಳಲ್ಲಿ, ಇನ್ಸುಲಿನ್ನಿನ ಪ್ರೋಟೀನಿಗೆ ಒಂದಿಷ್ಟು ಬದಲಾವಣೆ ಮಾಡಿ ಅದನ್ನು 24–36 ಘಂಟೆ ಕೆಲಸ ಮಾಡುವಂತೆಯೋ, ಇಲ್ಲ ಇಂಜೆಕ್ಷನ್ ಕೊಟ್ಟ ಕೆಲವು ನಿಮಿಷಗಳಲ್ಲೇ ಕೆಲಸ ಮಾಡುವಷ್ಟು ಅದರ ಗುಣವನ್ನು ಬದಲಾಯಿಸಿದ ತರತರದ ಇನ್ಸುಲಿನ್ಗಳು ಲಭ್ಯವಾಗಿವೆ. ಇನ್ಸುಲಿನ್ ಹೊಟ್ಟೆಯ ಮೂಲಕ ರಕ್ತಕ್ಕೆ ಸೇರಲಾಗದಷ್ಟು ದೊಡ್ಡ ಕಣವಾದ ಕಾರಣ, ಅದು ಇಂಜೆಕ್ಷನ್ ರೂಪದಲ್ಲೇ ಉಳಿದುಕೊಂಡಿದೆ. ತೀರಾ ಇತ್ತೀಚಿಗೆ, ಶ್ವಾಸಕೋಶದ ಮೂಲಕ ರಕ್ತಕ್ಕೆ ತಲುಪಿಸುವ ಇನ್ಹೇಲರ್ ರೂಪದಲ್ಲಿ ಇನ್ಸುಲಿನ್ ಅಮೆರಿಕಾದಲ್ಲಿ ಮಾರ್ಕೆಟ್ಟಿಗೆ ಬಂದಿದೆ. ಅದು ಬೇರೆಡೆ ಬೆಳೆಯುವ ಸಾಧ್ಯತೆ ಸದ್ಯಕ್ಕೆ ಕಮ್ಮಿ.

ಕೆನಡಾದಲ್ಲಿ ಮೊದಲು ತಯಾರಾದ ಇನ್ಸುಲಿನ್ನನ್ನು ಹೆಚ್ಚಿನವರಿಗೆ ತಲುಪುವಂತೆ ತಯಾರಿಸಿದ, ಹಂಚಿದ ಶ್ರೇಯ ಅಮೆರಿಕೆಯ ಎಲ್ಲೈ ಲಿಲ್ಲಿ ಕಂಪನಿಗೆ ಸೇರಬೇಕು. 1922ರಲ್ಲೇ ಬ್ಯಾಂಟಿಂಗ್ ಮತ್ತು ಟೊರಾಂಟೊ ಯೂನಿವರ್ಸಿಟಿ ಜೊತೆ ಕೈಗೂಡಿಸಿದ ಈ ಕಂಪನಿ, ಇನ್ಸುಲಿನ್ನನ್ನು ಶುದ್ದೀಕರಿಸುವಲ್ಲಿ, ಹೆಚ್ಚು–ಹೆಚ್ಚು ಪ್ರಮಾಣದಲ್ಲಿ ತಯಾರಿಸುವಲ್ಲಿ ಯಶಸ್ವಿಯಾಯಿತು. ಮೊದಮೊದಲು ಒಂದು ಡಾಲರ್ ಬೆಲೆಗೆ ಮಾರಾಟವಾದ ಇನ್ಸುಲಿನ್ ಬೆಲೆ, ತಯಾರಿಕೆ ಹೆಚ್ಚಿದಂತೆ ಕಡಿಮೆಯಾಯಿತು. ವಿಶೇಷವೆಂದರೆ, ಬ್ಯಾಂಟಿಂಗ್ ಮತ್ತು ಮ್ಯಾಕ್ಲೌಡ್ ಕೇವಲ ಔಪಚಾರಿಕ ಒಂದು ಡಾಲರ್ ಹಣಕ್ಕೆ ಟೊರೊಂಟೊ ಯೂನಿವೆರ್ಸಿಟಿಯ ಇನ್ಸುಲಿನ್ ಸಮಿತಿಗೆ ತಮ್ಮ ಹಕ್ಕನ್ನ ಹಸ್ತಾಂತರಿಸಿದ್ದರು. ಆ ಸಮಿತಿ, ಎಲ್ಲೈ ಲಿಲ್ಲಿ, ಕೆನಡಾದ ಒಂದು ಕಂಪನಿ ಮತ್ತು ಡೆನ್ಮಾರ್ಕಿನ ನಾರ್ಡಿಸ್ಕ್ ಕಂಪನಿಗೆ ಇನ್ಸುಲಿನ್ ತಯಾರಿಸುವ ಲೈಸೆನ್ಸ್ ಕೊಟ್ಟಿತ್ತು. ನಂತರದ ವರ್ಷಗಳಲ್ಲಿ, ಪ್ರಪಂಚದ ಹಲವೆಡೆ ಪ್ರಾಣಿಜನ್ಯ ಇನ್ಸುಲಿನ್ಗಳ ತಯಾರಿ ಮತ್ತು ಮಾರಾಟ ಆರಂಭವಾಯಿತು. ಆದರೆ, 80ರ ದಶಕದಿಂದ ಶುರುವಾದ ಲ್ಯಾಬುಗಳಲ್ಲಿ ಬೆಳೆದ ಕೃತಕ ಮಾನವ ಇನ್ಸುಲಿನ್ ಮತ್ತವುಗಳ ಪೇಟೆಂಟುಗಳ ಭರಾಟೆಯಲ್ಲಿ, ಈ ಶತಮಾನದ ಆರಂಭದ ಹೊತ್ತಿಗೆ, 20 ಬಿಲಿಯನ್ ಡಾಲರ್ ಮೌಲ್ಯದ ಇನ್ಸುಲಿನ್ ಮಾರುಕಟ್ಟೆಯ ಶೇ 96 ಭಾಗ ಕೇವಲ ಮೂರು ದೊಡ್ಡ ಕಂಪನಿಗಳ ಬುಟ್ಟಿಯಲ್ಲಿದೆ: ನೋವೋ–ನೊರ್ಡಿಸ್ಕ್ (ಶೇ 50); ಎಲ್ಲೈ ಲಿಲ್ಲಿ (ಶೇ 25); ಸನೋಫಿ (ಶೇ 25).

ತಮ್ಮ ಈ ಮೊನೊಪೊಲಿಯನ್ನು ದುರುಪಯೋಗಪಡಿಸಿಕೊಂಡ ಈ ಕಂಪನಿಗಳು ತಮ್ಮಿಷ್ಟದಂತೆ ಹೊಸ ಇನ್ಸುಲಿನ್ಗಳ ದರ ಹೆಚ್ಚಿಸುತ್ತಲೇ ಹೋಗಿವೆ. ಉದಾಹರಣೆಗೆ, ಎಲ್ಲೈ ಲಿಲ್ಲಿಯ ಹುಮಲೋಗ್ ಎನ್ನುವ ಇನ್ಸುಲಿನ್ನಿನ ಬೆಲೆ 1999 ರಲ್ಲಿ $21 ಇದ್ದದ್ದು 2019ಕ್ಕೆ $322 ಕ್ಕೇರಿತ್ತು – ಬರೋಬ್ಬರಿ ಶೇ 1500 ಪಟ್ಟು ಹೆಚ್ಚು. ಸಮಾಧಾನವೆಂದರೆ, ಕೃತಕ ಮಾನವ ಇನ್ಸುಲಿನ್ಗಳ ಬೆಲೆ ಅಷ್ಟು ಹೆಚ್ಚಾಗದಿದ್ದು. ಅಲ್ಲದೆ, ಸುಮಾರು ದೇಶಗಳಲ್ಲಿ, ಸರ್ಕಾರಗಳು ಸಬ್ಸಿಡಿಯ ದರ ಅಥವಾ ಉಚಿತವಾಗಿ ಇನ್ಸುಲಿನ್ ಒದಗಿಸುತ್ತಿರುವದು ಲಕ್ಷಾಂತರ ಜನರ ಜೀವ ಉಳಿಸುತ್ತಿದೆ. ಹಾಗೆಯೇ, ಈಗೀಗ ಬರುತ್ತಿರುವ ಬಯೋ–ಸಿಮಿಲರ್ ಇನ್ಸುಲಿನ್ಗಳು, ದೊಡ್ಡ ತಿಮಿಂಗಲ ಕಂಪನಿಗಳ ಹೊಸ ಇನ್ಸುಲಿನ್ಗಳನ್ನು ಕಡಿಮೆ ಬೆಲೆಗೆ ತಯಾರಿಸುವ ದಾರಿಯನ್ನ ಬೇರೆ ಕಂಪನಿಗಳಿಗೆ ತೆರೆದುಕೊಟ್ಟಿದೆ. ಇದರ ಲಾಭವನ್ನ ಭಾರತದ ಕೆಲವು ಕಂಪನಿಗಳೂ ಪಡೆಯುತ್ತಿವೆ.

ಇನ್ಸುಲಿನ್ ಬೆಳೆದ ಈ ನೂರು ವರ್ಷಗಳಲ್ಲಿ ವ್ಯಾಪಾರೀ ಬುದ್ಧಿಯ ಜನಗಳು ಬೆಳೆದ ಇನ್ನೊಂದು ಮೌನ ದುರಂತ ಇನ್ಸುಲಿನ್ನಿನ ಬೇಡಿಕೆಯನ್ನ ಹಲವು ಪಟ್ಟು ಹೆಚ್ಚಿಸಿದೆ. ಅದೇನಂದರೆ, ಇಪ್ಪತ್ತನೆಯ ಶತಮಾನದ ಆರಂಭದಿಂದ ಶುರುವಾದ 'ಕೊಲೊನಿಯಲ್ ಮಾಸ್ಟರ್' ಗಳ ದುಡ್ಡಿನ ಹಸಿವಿನ ಸಕ್ಕರೆ ವ್ಯಾಪಾರ. ಸಿಕ್ಕಾಪಟ್ಟೆ ಬೆಳೆದ ಸಕ್ಕರೆಯನ್ನ ಜನಗಳ ಬಾಯಿಗೆ ಚಾಕಲೇಟ್ ಮತ್ತಿತರ ಮಿಠಾಯಿಗಳ ರೂಪದಲ್ಲಿ, ಅದು ಆರೋಗ್ಯಕರ ಆಹಾರವೆಂದು ನಂಬಿಸುವ 'ವೈಜ್ಞಾನಿಕ' ಸುಳ್ಳು ಸಂಶೋಧನೆಗಳ ಮೂಲಕ ಮರುಳುಮಾಡಿ, ತಿನ್ನಿಸಿ–ತಿನ್ನಿಸಿ, ಜನಗಳ ದೇಹದ ತುಂಬಾ ಕೊಬ್ಬು ತುಂಬಿಸಿ, ಹಾಗೆ ಬೆಳೆದ ದೇಹಗಳ ಇನ್ಸುಲಿನ್ ಉತ್ಪನ್ನ ಸಾಕಾಗದೆ ಹೆಚ್ಚಾದ ಟೈಪ್ 2 ಮಧುಮೇಹ. 1958ರಲ್ಲಿ ಶೇ 0.93 ಇದ್ದ ಅದು 2015ಕ್ಕೆ ಶೇ 7.4 ಕ್ಕೇರಿತ್ತು. ಹೀಗಾಗಿ, 1991ರಿಂದ 2021ಕ್ಕೆ ಇನ್ಸುಲಿನ್ ಉಪಯೋಗಿಸುವವರ ಸಂಖ್ಯೆಯಲ್ಲಿ ಟೈಪ್ 2 ಮಧುಮೇಹ ಇರುವವರ ಸಂಖ್ಯೆ ಆರು ಪಟ್ಟು ಹೆಚ್ಚಾಗಿದೆ. ಭಯವೆಂದರೆ, ಆ ಸಂಖ್ಯೆ ಹೆಚ್ಚುತ್ತಲೇ ಇದೆ. ಅದರಲ್ಲೂ, 12–14ರ ವಯಸ್ಸಿಗೆ ಇನ್ಸುಲಿನ್ ಬೇಕಾಗುವ ಟೈಪ್ 2 ಮಧುಮೇಹ ಇರುವವರ ಸಂಖ್ಯೆ ಹೆಚ್ಚುತ್ತಿರುವದು ಆಘಾತಕಾರಿ.

ಇನ್ಸುಲಿನ್ನಿನ ಹೊಸ ರೂಪಗಳು, ಉಚಿತ ವಿತರಣೆ ಇವ್ಯಾವುದೂ ಸಾಲದು, ಉಕ್ಕುತ್ತಿರುವ ಮಧುಮೇಹದ ನೆರೆಗೆ. ಸಕ್ಕರೆಯ ಆಮಿಷದಲ್ಲಿ ಕೊಬ್ಬಿರುವ ಸಿರಿವಂತರ 'ಮಿಠಾಯಿ'ಗಳ ನಶೆಯಲ್ಲಿ ಕಾನೂನು ತಿದ್ದುತ್ತಿರುವ ಸರ್ಕಾರಗಳ ವರ್ತನೆ ಆದಷ್ಟು ಬೇಗ ಬದಲಾಗಬೇಕಿದೆ. ಬಹುಷಃ, ಅದು ಇನ್ಸುಲಿನ್ ಕಂಡು ಹಿಡಿದಷ್ಟು ಸುಲಭದಲ್ಲಿ ಆಗುವಂತಹದ್ದಲ್ಲ! ಆ ವರ್ತನೆಯ ಮೂಲದ ದುರಾಶೆಯ ಹುಟ್ಟಡಗಿಸಲು ಯಾವುದಾದರೂ ದೇವ ಶಕ್ತಿಯ ಅಥವಾ ದೈವ ಶಕ್ತಿಯ ಅವತಾರವೇ ಆಗಬೇಕೇನೋ?



**ಡಾ। ಜೇ ಎನ್ ಭಟ್.**
ವೈದ್ಯಾಧಿಕಾರಿಗಳು, ಭಾರತೀಯ ರೆಡ್‌ಕ್ರಾಸ್ ಸೊಸೈಟಿ
ಮಂಗಳೂರು

## ಅಧ್ಯಾತ್ಮ ಮತ್ತು ಆರೋಗ್ಯ

# ಅರಿವಿನ ಆರೋಹಣ



**ಡಾ. ವೀಣಾ ಎನ್ ಸುಳ್ಯ**
ವಿಭಾಗೀಯ ಸಂಪಾದಕರು

ವೈದ್ಯರ ಬಳಿ ಔಷಧಕ್ಕಾಗಿ ಹೋಗುವವರೊಬ್ಬರು ಇದಿರಾದಾಗ "ದೂರ ಹೊರಟಿರಿ?" ಎಂತ ಪ್ರಶ್ನಿಸುತ್ತೇವೆ. ಆಗ ಅವರ ಉತ್ತರ : "ಮೈ ಚೆನ್ನಾಗಿಲ್ಲ, ಡಾಕ್ಟರ ಕಾಣಬೇಕು" ಎನ್ನುತ್ತಾರೆ.

ಕಾಲಿಗೆ ಮುಳ್ಳು ಚುಚ್ಚಿದರೆ ಕಣ್ಣಲ್ಲಿ ನೀರು ಬರುತ್ತದೆ. ಸಹಜ. ದಾರಿಹೋಕನೋ ಪ್ರಾಣಿಯೋ ರಸ್ತೆ ಬದಿ ನರಳಿದಾಗ ನಾವೂ ಅನುಕಂಪದಿಂದ ಆ ನೋವನ್ನ ಸ್ವಲ್ಪ ಅನುಭವಿಸುತ್ತಾ ಬದುಕ ಹರಿಯ ಬಿಡುತ್ತೇವೆ. ಹಾಗಾದರೆ ಈ ತಾತ್ಕಾಲಿಕ ಅಯೋಮಯ ದೇಹ ಮೀರಿದ ಪ್ರಕ್ರಿಯೆ ಅಲ್ಲವೇ? ಕಾಣುವ ದೇಹದಲ್ಲಿ ಕಣ್ಣಿಗೆ ಕಾಣದ ಮನಸ್ಸು ಸದಾ ಕದಡುತ್ತಿರುತ್ತದೆ!

ಅದಕ್ಕಾಗಿಯೇ ವಿಶ್ವ ಸಂಸ್ಥೆಯ ವ್ಯಾಖ್ಯಾನ "Health is a state of well being of physical, mental, social and spiritual well being and not merely the absence of the disease."

ನಾವುಗಳೆಲ್ಲ ಅದೆಷ್ಟೋ ಬಾರಿ sicknes, fitness certificate ಕೊಟ್ಟೇ ಇರುತ್ತೇವೆ.

ವಿದ್ಯಾಲಯ ಪ್ರವೇಶಕ್ಕೆ ಮೀಸಲಾತಿ ದಾಖಲಾತಿ ಏನೇ ಇದ್ದರೂ " candidate is physically fit" ಅಂತ ಕೊಡುತ್ತೇವಲ್ಲ. ದಷ್ಟ ಪುಷ್ಟ ದೇಹ ಸಾಕೇ? ಮಂದಹಾಸ ಮೀರುವ ಮನದ ನೆಮ್ಮದಿ ಅತ್ಯಗತ್ಯ. ಇಂಟರ್ವ್ಯೂಗಳಲ್ಲೀಗ PQ, IQ, EQ ಜೊತೆ,SQ ( spiritual quotient) ಜೊತೆಯಾಗಿದೆ. ಈ ಮೂರು ಉಳ್ಳವರೇ ಕಾರ್ಯದಕ್ಷರು.

ದೇಹ ರೋಗಮಯ, ಮನಸ್ಸು ದು:ಖಮಯ, ಆತ್ಮ ಆನಂದಮಯ ಎಂಬ ಮಾತಿದೆ.



ಹಾಗಾಗಿ ಸುಖ (pleasure) / ಸಂತೋಷ (happiness) ಎಂದರೇನೆಂಬುದರ ಅರಿಯೋಣ.

ಶರೀರದ ಇಂದ್ರಿಯಗಳು ಬಯಸಿದ್ದು ಲಭ್ಯವಾದಾಗ ಸುಖಪಡುತ್ತೇವೆ. ಅದರ ಬಳಸುವಿಕೆ, ಹಂಚುವಿಕೆ ಇತಿಮಿತಿಯೊಳಗೆ ಇಷ್ಟವಾದವರ ಜೊತೆ ಸುಖಮಯವೇ. ಅದೂ ಅತಿಯಾದರೆ ಅದೇ ದುಃಖ

ತಂದೊಡ್ಡುತ್ತದೆ. ಇದು ಬರೇ ದೈಹಿಕ.

ಸಂತೋಷ ಎಂದೂ ಮಾನಸಿಕ ಮೌಲ್ಯ ಉಳ್ಳದ್ದು. ಅದೊಂದು ನೆನಪಿನ ಮೂಟೆ. ಅದರೊಳಗೆ ಅಸಂತೋಷದ ಸುಳಿವುಗಳೂ ಕಳಚಿಕೊಳ್ಳುತ್ತವೆ. ದೇಹದ ಆರೋಗ್ಯಕ್ಕೆ ಮಾನಸಿಕ ಒತ್ತು, ಮನದ ನೆಮ್ಮದಿಗೆ ದೇಹದ ಸೊತ್ತು , ಪರಸ್ಪರ.

ಇವೆರಡರಲ್ಲಿ ಯಾವುದಾದರೂ ಒಂದು ಸಹಕರಿಸದಿದ್ದರೆ



ಅನಾರೋಗ್ಯಕ್ಕೆ ನಾಂದಿ. ಮೊಳಕೆ ಒಡೆಯುತ್ತಲೇ ಮತ್ತೆ ಚಿಗುರೊಡೆಯುತ್ತವೆ. ಸಾಮರಸ್ಯದ ಬದುಕು ಹೊಯಿದಾಟವೇ ಸರಿ.

ಅದನ್ನೇ ಸ್ವಾಸ್ಥ್ಯ/ ಅಸ್ವಸ್ಥತೆ ಎಂಬುದಾಗಿಯೂ ಹೇಳುತ್ತೇವೆ. Happiness is a state of mind. so much so health also.

ದೇಹ ಕೈ ಕೊಟ್ಟರೆ ಮನ ಕೆಡುತ್ತದೆ. ಮನಸ್ಸು ಕೆಟ್ಟರೆ ದೇಹಾರೋಗ್ಯವೇ ಕೆಡುತ್ತದೆ.

ಹಾಗಾಗಿ "BMH" Body, Mind, Heart= ದೈಹಿಕ, ಮಾನಸಿಕ ಆಧ್ಯಾತ್ಮಿಕ ಸಮತೋಲನ ಕಾಪಾಡಿಕೊಂಡಾಗ ಮಾತ್ರ ಆರೋಗ್ಯ ಉಲ್ಲಾಸ ಸಾಧ್ಯ.

ನಾವೆಲ್ಲ ದಿನಕ್ಕೆ ಸರಾಸರಿ 21600 ಬಾರಿ ಉಸಿರಾಡುತ್ತೇವೆ. ಉಸಿರಾಟದ 4 ಬಾರಿ ಹೃದಯ ಬಡಿಯತ್ತ ರಕ್ತ ಸಂಚಲನ ನಡೆಸುತ್ತದೆ. ಉದ್ವೇಗಕ್ಕೊಳಗಾದಾಗ, ಕೋಪಿಸಿಕೊಂಡ ವೇಳೆ ಎಲ್ಲಾ ಉಸಿರಾಟದ ವೇಗ ಹೆಚ್ಚಾಗುವುದು ನಾವೆಲ್ಲ ಬಲ್ಲೆವು. ತತ್ಪರಿಣಾಮ ಹೃದಯವೂ ತ್ವರಿತ ಗತಿಯಿಂದ ಮಿಡಿಯುತ್ತದೆ. ನಾವೆಲ್ಲ ಎಷ್ಟು ಅಸಹಾಯಕರೆಂದರೆ, ದೇಹದ 90% ಚಟುವಟಿಕೆಗಳೆಲ್ಲ ನಮ್ಮ ನಿರ್ದೇಶನ ಇಲ್ಲದೆಯೇ ನಿರಂತರ ನಡೆದು ಶರೀರ ಸ್ವಾಸ್ಥ್ಯ ದ ಕಾಳಜಿ ವಹಿಸುತ್ತದೆ. ಎಲ್ಲವೂ ಸ್ವಯಮ್ ಚಾಲಿತ autonomic/ automatic nervous system ! ಈ ಅನೈಚ್ಛಿಕತೆ ಆಶ್ಚರ್ಯ ಎನಿಸುವುದಿಲ್ಲವೇ? ಇದರ ಕಾರೋಭಾರ ನಮ್ಮ ಕೈಯ್ಯಲ್ಲೇ ಇದ್ದಿದ್ದರೆ ದಿನಂಪ್ರತಿ ಏನೇನಾಗಬಹುದಿತ್ತೊ. ವೈದ್ಯಕೀಯ ದೃಷ್ಟಿಯಿಂದ ಅದೆಷ್ಟು ವಿಸ್ಮಯ!

ಅದರೆಡೆ ನಾವು ಉಚ್ವಾಸ ನಿಶ್ವಾಸಗಳನ್ನು ಮಾತ್ರ ಸ್ವೇಚ್ಛೆಯಿಂದ ಬದಲಿಸಬಲ್ಲೆವು. ಅದೇ "ಪ್ರಾಣಾಯಾಮ" ದ ಪ್ರಯೋಗ. ಉಸಿರಾಟ: ಹೃದಯಬಡಿತದ ದಾಮಾಶಯವನ್ನ ಪ್ರಯೋಗಶೀಲರಾಗಿ ಹಿಡಿತದಲ್ಲಿರಿಸಿದಾಗ ಯೋಗಾಭ್ಯಾಸದಲ್ಲಿ ತೊಡಗಿದಾಗ ಆರೋಗ್ಯದ ನೆಲೆಯಲ್ಲಿ ಗಮನಾರ್ಹ ಪ್ರಗತಿ ಸಾಧ್ಯ. ದೈಹಿಕ ಆರೋಗ್ಯಕ್ಕೆ ದವಸ ಧಾನ್ಯವಾದರೆ ಮಾನಸಿಕ ಆರೋಗ್ಯ ಕ್ಕೆ ಧ್ಯಾನ ಬಹಳ ಚೇತೋಹಾರಿ. ಸದಾ ಸಮಚಿತ್ತ ಕಾಯಿದುಕೊಳ್ಳುವಲ್ಲಿ ಪ್ರಾಣಾಯಾಮ ಅತ್ಯಂತ ಪರಿಣಾಮಕಾರಿ.

ದಿನಚರಿಯಲ್ಲಿ ಆಧ್ಯಾತ್ಮಿಕತೆಯ ಅಗತ್ಯ ಅರಿವಾದಾಗಲಷ್ಟೆ ನಾವು ಚಟುವಟಿಕೆಗಳ ನಿಭಾಯಿಸುವಲ್ಲಿ ಸಮರ್ಥರಾಗುತ್ತಾ ಉನ್ನತ ಮಟ್ಟದ ಸಂತೋಷ / ಅಸಂತೋಷ & ಸುಖ/ ದು:ಖಗಳ ದ್ವಂದ ಮೀರಿದ ಏರುಪೇರಿಲ್ಲದ ಆನಂದದ ಸ್ಥಿತಿಯಲ್ಲಿ ಮಗ್ನರಾಗುತ್ತೇವೆ. ಇದೇ ಬದುಕಿನ ಸಹಜ ತಿರುಳು. ಧ್ಯಾನದಲ್ಲಿ " ಭ್ರಮಿಸದ ಮನಸ್ಸು ಚಲಿಸದ ದೃಷ್ಟಿ" ಕರಗತವಾಗಬೇಕಾದರೆ ಸಾಧನೆ ಬೇಕು.

ಆರೋಗ್ಯಮಯ ದೇಹದೊಳಗೆ ಆನಂದಮಯ ಮನ ಭ್ರಮಿಸುತ್ತಲಿರಲಿ. ಅದೇ ಸಹಜ ಸ್ಥಿತಿಯ ಅರಿವಿನ ಆರೋಹಣದ ಆರಂಭ.

ವೈದ್ಯರು ಮತ್ತು ಕಾನೂನು

# ವೈದ್ಯಕೀಯ ಗರ್ಭಪಾತ ಮಸೂದೆ (MTP) ತಿದ್ದುಪಡಿ ಕಾಯಿದೆ, ೨೦೨೧

**ಡಾ|| ಕೆ. ಶಿವರಾಜ ಎಂ. ಡಿ**
ಮಕ್ಕಳ ತಜ್ಞರು
ಸಹನಾ ಮಕ್ಕಳ ಆಸ್ಪತ್ರೆ ಸಿಂಧನೂರು
ವಿಭಾಗೀಯ ಸಂಪಾದಕರು ಮತ್ತು ಲೇಖಕರು

● ಏಕೆ ಸುದ್ದಿಯಲ್ಲಿ ?

● ಇತ್ತಿಚೆಗೆ, 22 ವಾರಗಳ ಗರ್ಭಾವಸ್ಥೆಯನ್ನು ಪೂರ್ಣಗೊಳಿಸಿದ ಭ್ರೂಣವು ಬಹು ಅಸಹಜತೆಗಳಿಂದ ಬಳಲುತ್ತಿರುವ ಕಾರಣ ಆಕೆಯ ಗರ್ಭಧಾರಣೆಯನ್ನು ವೈದ್ಯಕೀಯವಾಗಿ ಮುಕ್ತಾಯಗೊಳಿಸಲು ದೆಹಲಿ ಹೈಕೋರ್ಟ್ ಅನುಮತಿ ನೀಡಿದೆ.

● ಗರ್ಭಾವಸ್ಥೆಯು ಗರ್ಭಧಾರಣೆಯ ಸಮಯದಿಂದ ಜನನದವರೆಗೆ ಭ್ರೂಣದ ಬೆಳವಣಿಗೆಯ ಅವಧಿಯಾಗಿದೆ.

● ಭಾರತದಲ್ಲಿ, ಮೆಡಿಕಲ್ ಟರ್ಮಿನೇಷನ್ ಆಫ್ ಪ್ರೆಗ್ನೆನ್ಸಿ (MTP) ಕಾಯಿದೆಯು ಗರ್ಭಧಾರಣೆಯ ಮುಕ್ತಾಯಕ್ಕೆ 20 ವಾರಗಳ ಸೀಲಿಂಗ್ ಅನ್ನು ನಿಗದಿಪಡಿಸುತ್ತದೆ, ಅದನ್ನು ಮೀರಿ ಭ್ರೂಣದ ಗರ್ಭಪಾತವನ್ನು ಶಾಸನಬದ್ಧವಾಗಿ ಅನುಮತಿಸಲಾಗುವುದಿಲ್ಲ.

MTP ಕಾಯಿದೆಯ ಬಗ್ಗೆ ಮುಖ್ಯ ಅಂಶಗಳು

● ಸುರಕ್ಷಿತ ಗರ್ಭಪಾತಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ವಿಜ್ಞಾನ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಯಿಂದಾಗಿ ವೈದ್ಯಕೀಯ ಗರ್ಭಪಾತ ಮಸೂದೆ 1971 ("MTP") ಅಂಗೀಕರಿಸಲಾಯಿತು.

● ಸಾರ್ವತ್ರಿಕ ಪ್ರವೇಶ ಸಂತಾನೋತ್ಪತ್ತಿ ಆರೋಗ್ಯ ಸೇವೆಗಳನ್ನು ಒದಗಿಸುವ ಐತಿಹಾಸಿಕ ಕ್ರಮದಲ್ಲಿ, ಭಾರತವು ಎಲ್ಲರಿಗೂ ಸಮಗ್ರ ಗರ್ಭಪಾತದ ಆರೈಕೆಯನ್ನು ಒದಗಿಸುವ ಮೂಲಕ ಮಹಿಳೆಯರನ್ನು ಮತ್ತಷ್ಟು ಸಬಲೀಕರಣಗೊಳಿಸಲು MTP ಕಾಯಿದೆ 1971 ಅನ್ನು ತಿದ್ದುಪಡಿ ಮಾಡಿದೆ.

● ಹೊಸ ವೈದ್ಯಕೀಯ ಗರ್ಭಪಾತ (ತಿದ್ದುಪಡಿ) ಕಾಯಿದೆ 2021 ಸಮಗ್ರ ಆರೈಕೆಗೆ ಸಾರ್ವತ್ರಿಕ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಚಿಕಿತ್ಸಕ, ಮಾನವೀಯ ಮತ್ತು ಸಾಮಾಜಿಕ ಆಧಾರದ ಮೇಲೆ ಸುರಕ್ಷಿತ ಮತ್ತು ಕಾನೂನುಬದ್ಧ ಗರ್ಭಪಾತ ಸೇವೆಗಳಿಗೆ ಪ್ರವೇಶವನ್ನು ವಿಸ್ತರಿಸುತ್ತದೆ.



● ಗರ್ಭನಿರೋಧಕ ವಿಧಾನ ಅಥವಾ ಸಾಧನದ ವೈಫಲ್ಯವಾದಾಗ ಗರ್ಭಪಾತ:

● ಕಾಯಿದೆಯಡಿಯಲ್ಲಿ, ಗರ್ಭನಿರೋಧಕ ವಿಧಾನ ಅಥವಾ ಸಾಧನದ ವ್ಯಫಲ್ಯದ ಸಂದರ್ಭದಲ್ಲಿ ವಿವಾಹಿತ ಮಹಿಳೆ 20 ವಾರಗಳವರೆಗೆ ಗರ್ಭಧಾರಣೆಯನ್ನು ಕೊನೆಗೊಳಿಸಬಹುದು. ಈ ಕಾರಣಕ್ಕಾಗಿ ಅವಿವಾಹಿತ ಮಹಿಳೆಯರಿಗೆ ಗರ್ಭಧಾರಣೆಯನ್ನು ಅಂತ್ಯಗೊಳಿಸಲು ಇದು ಅನುಮತಿಸುತ್ತದೆ.

● ಗರ್ಭಧಾರಣೆಯ ಮುಕ್ತಾಯಕ್ಕೆ ಅಗತ್ಯವಿರುವ ಅಭಿಪ್ರಾಯ:

● ಗರ್ಭಾವಸ್ಥೆಯ 20 ವಾರಗಳವರೆಗೆ ಗರ್ಭಧಾರಣೆಯ

ಮುಕ್ತಾಯಕ್ಕೆ ಒಬ್ಬ ನೋಂದಾಯಿತ ವೈದ್ಯಕೀಯ ವೈದ್ಯರ (RMP) ಅಭಿಪ್ರಾಯ.

- 20–24 ವಾರಗಳ ಗರ್ಭಾಧಾರಣೆಯ ಮುಕ್ತಾಯಕ್ಕೆ ಎರಡು RMP ಗಳ ಅಭಿಪ್ರಾಯ.

- ಗಣನೀಯ ಪ್ರಮಾಣದ ಭ್ರೂಣದ ಅಸಹಜತೆಗಳ ಸಂದರ್ಭದಲ್ಲಿ 24 ವಾರಗಳ ನಂತರ ಗರ್ಭಾವಸ್ಥೆಯನ್ನು ಅಂತ್ಯಗೊಳಿಸಲು ರಾಜ್ಯ ಮಟ್ಟದ ವೈದ್ಯಕೀಯ ಮಂಡಳಿಯ ಅಭಿಪ್ರಾಯವು ಅತ್ಯಗತ್ಯವಾಗಿರುತ್ತದೆ.

- ವಿಶೇಷ ವರ್ಗಗಳಿಗೆ ಹೆಚ್ಚಿನ ಗರ್ಭಾವಸ್ಥೆಯ ಮಿತಿ:

- ಅತ್ಯಾಚಾರದಿಂದ ಬದುಕುಳಿದವರು, ಸಂಭೋಗದ ಬಲಿಪಶುಗಳು ಮತ್ತುಇತರ ದುರ್ಬಲ ಮಹಿಳೆಯರು (ವಿಭಿನ್ನ ಸಾಮರ್ಥ್ಯವುಳ್ಳ ಮಹಿಳೆಯರು, ಅಪ್ರಾಪ್ತ ವಯಸ್ಕರು, ಇತರರು) ಸೇರಿದಂತೆ ವಿಶೇಷ ವರ್ಗದ ಮಹಿಳೆಯರಿಗೆ ಗರ್ಭಾವಸ್ಥೆಯ ಮೇಲಿನ ಮಿತಿಯನ್ನು 20ರಿಂದ 24 ವಾರಗಳವರೆಗೆ ಹೆಚ್ಚಿಸುತ್ತದೆ.




**ಗೌಪ್ಯತೆ:**

- ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಧಿಕಾರ ಹೊಂದಿರುವ ವ್ಯಕ್ತಿಯನ್ನು ಹೊರತುಪಡಿಸಿ, "ಗರ್ಭಧಾರಣೆಯನ್ನು ಅಂತ್ಯಗೊಳಿಸಿರುವ ಮಹಿಳೆಯ ಹೆಸರು ಮತ್ತು ಇತರ ವಿವರಗಳನ್ನು ಬಹಿರಂಗಪಡಿಸಲಾಗುವುದಿಲ್ಲ".

**ಮಹತ್ವ:**

- ಹೊಸ ಕಾನೂನು ಸುಸ್ಥಿರ ಅಭಿವೃದ್ಧಿ ಗುರಿಯನ್ನು (SDGs) 3.1, 3.7 ಮತ್ತು 5.6 ಪೂರೈಸಲು ಸಹಾಯ ಮಾಡಲು ತಡೆಗಟ್ಟಬಹುದಾದ ತಾಯಿಯ ಮರಣವನ್ನು ಕೊನೆಗೊಳಿಸಲು ಕೊಡುಗೆ ನೀಡುತ್ತದೆ.

- ತಿದ್ದುಪಡಿಗಳು ಸುರಕ್ಷಿತ ಗರ್ಭಪಾತ ಸೇವೆಗಳಿಗೆ ಮಹಿಳೆಯರ ವ್ಯಾಪ್ತಿಯನ್ನು ಮತ್ತು ಪ್ರವೇಶವನ್ನು ಹೆಚ್ಚಿಸುತ್ತವೆ ಮತ್ತು ಗರ್ಭಧಾರಣೆಯನ್ನು ಅಂತ್ಯಗೊಳಿಸಲು ಅಗತ್ಯವಿರುವ ಮಹಿಳೆಯರಿಗೆ ಘನತೆ, ಸ್ವಾಯತ್ತತೆ, ಗೌಪ್ಯತೆ ಮತ್ತು ನ್ಯಾಯವನ್ನು ಖಚಿತಪಡಿಸುತ್ತದೆ.

**The MTP Act 1971 and The MTP Act Amendments 2021**

| | MTP Act 1971 | The MTP Amendment Act 2021 |
|---|---|---|
| Indications<br>(Contraceptive failure)<br>Gestational Age Limit | Only applies to married women<br>20 weeks for all indications | Unmmaried women are also covered<br>24 weeks for rape survivors<br>Beyond 24 weeks for substantial fetal abnormalities |
| Medical Practitioner opinions required brfore termination | One RMP till 12 weeks<br>Two RMPs tiil 20 weeks | One RMP till 20 weeks<br>Two RMPs 20-24 weeks<br>Medical Board approval after 24 weeks |
| Breach of the women's Confidentiality | Fine up to Rs 1000 | Fine and/or Imprisonment of 1 year |

ಸಮಸ್ಯೆಗಳು

● ಗರ್ಭಪಾತ (MTP) ಮುಕ್ತಾಯದ ಬಗ್ಗೆ ವಿಭಿನ್ನ ಅಭಿಪ್ರಾಯಗಳು:

● ಒಂದು ಅಭಿಪ್ರಾಯವೆಂದರೆ ಗರ್ಭಾವಸ್ಥೆಯನ್ನು ಕೊನೆಗೊಳಿಸುವುದು ಗರ್ಭಿಣಿ ಮಹಿಳೆ ಆಯ್ಕೆ ಮತ್ತು ಅವಳ ಸಂತಾನೋತ್ಪತ್ತಿ ಹಕ್ಕುಗಳ ಒಂದು ಭಾಗವಾಗಿದೆ,ಆದರೆ ಇನ್ನೊಂದು ಅಭಿಪ್ರಾಯವೆಂದರೆ ಜೀವವನ್ನು ರಕ್ಷಿಸಲು ರಾಜ್ಯವು ಬಾಧ್ಯತೆಯನ್ನು ಹೊಂದಿದೆ ಮತ್ತು ಆದ್ದರಿಂದ ಭ್ರೂಣದ ರಕ್ಷಣೆಯನ್ನು ಒದಗಿಸಬೇಕು.

● ಪ್ರಪಂಚದಾದ್ಯಂತ, ಭ್ರೂಣದ ಆರೋಗ್ಯ ಮತ್ತು ಗರ್ಭಿಣಿ ಮಹಿಳೆ ಅಪಾಯದ ಆಧಾರದ ಮೇಲೆ ಗರ್ಭಪಾತವನ್ನು ಅನುಮತಿಸಲು ದೇಶಗಳು ವಿಭಿನ್ನ ಪರಿಸ್ಥಿತಿಗಳು ಮತ್ತು ಸಮಯದಮಿತಿಯನ್ನು ನಿಗದಿಪಡಿಸುತ್ತವೆ.

● 24 ವಾರಗಳ ನಂತರ ಅನುಮತಿಸಲಾಗುವುದಿಲ್ಲ:

● ವೈದ್ಯಕೀಯ ಮಂಡಳಿಯು ಗಣನೀಯ ಪ್ರಮಾಣದ ಭ್ರೂಣದ ಅಸಹಜತೆಗಳನ್ನು ಪತ್ತೆಹಚ್ಚಿದ ಸಂದರ್ಭಗಳಲ್ಲಿ ಮಾತ್ರ 24 ವಾರಗಳ ನಂತರ ಗರ್ಭಪಾತವನ್ನು ಕಾಯಿದೆಯು ಅನುಮತಿಸುತ್ತದೆ.

● 24–ವಾರಗಳನ್ನು ಮೀರಿದ ಅತ್ಯಾಚಾರದ ಕಾರಣದಿಂದ ಗರ್ಭಪಾತದ ಅಗತ್ಯವಿರುವ ಪ್ರಕರಣಕ್ಕೆ, ರಿಟ್ ಅರ್ಜಿಯ ಮೂಲಕ ಮಾತ್ರ ಅವಲಂಬನೆಯು ಉಳಿದಿದೆ ಎಂದು ಇದು ಸೂಚಿಸುತ್ತದೆ.

● ವೈದ್ಯರು ನಡೆಸಬೇಕಾದ ಗರ್ಭಪಾತ:

● ಗ್ರಾಮೀಣ ಪ್ರದೇಶದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಶೇ.75ರಷ್ಟು ವೈದ್ಯರ ಕೊರತೆ ಇರುವುದರಿಂದ ಗರ್ಭಿಣಿಯರು ಸುರಕ್ಷಿತ ಗರ್ಭಪಾತದ ಸೌಲಭ್ಯಗಳನ್ನು ಪಡೆಯುವುದು ಕಷ್ಟವಾಗಬಹುದು.

● ಮುಂಬರುವ ದಿನಗಳಲ್ಲಿ ನಮ್ಮ ದೇಶವು ನಿರ್ವಹಿಸುತ್ತಿರುವ ವೈವಿಧ್ಯಮಯ ಸಂಸ್ಕೃತಿಗಳು, ಸಂಪ್ರದಾಯಗಳು ಮತ್ತು ಚಿಂತನೆಯ ಶಾಲೆಗಳನ್ನು ಸಮತೋಲನಗೊಳಿಸುವಾಗ ಕೇಂದ್ರ ಸರ್ಕಾರವು ಇಂತಹ ದಿಟ್ಟ ನಿಲುವನ್ನು ತೆಗೆದುಕೊಂಡಿರುವುದು ಶ್ಲಾಘನೀಯವಾಗಿದೆ, ಆದಾಗ್ಯೂ, ತಿದ್ದುಪಡಿಯು ಮಹಿಳೆಯರಿಗೆ ಹಲವಾರು ಷರತ್ತುಗಳನ್ನು ನೀಡುತ್ತದೆ, ಇದು ಅನೇಕ ಸಂದರ್ಭಗಳಲ್ಲಿ ಸುರಕ್ಷಿತ ಪ್ರವೇಶಕ್ಕೆ ಅಡ್ಡಿಯಾಗಿದೆ.

● ನ್ಯಾಯಮೂರ್ತಿ ಕೆ.ಎಸ್.ಪುಟ್ಟಸ್ವಾಮಿ (ನಿವೃತ್ತ.) v/s ಯೂನಿಯನ್ ಆಫ್ ಇಂಡಿಯಾ ಮತ್ತು ಇತರರ (2017) ಪ್ರಕರಣದಲ್ಲಿ, ಭಾರತೀಯ ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ವೈಯಕ್ತಿಕ ಸ್ವಾತಂತ್ರ್ಯದ ಭಾಗವಾಗಿ ಸಂತಾನೋತ್ಪತ್ತಿ ಆಯ್ಕೆಗಳನ್ನು ಮಾಡುವ ಮಹಿಳೆಯರಸಾಂವಿಧಾನಿಕ ಹಕ್ಕನ್ನು ನ್ಯಾಯಾಲಯವು ಗುರುತಿಸಿದೆ. ಸಂತಾನೋತ್ಪತ್ತಿ ಹಕ್ಕುಗಳು ಮತ್ತು ಮಹಿಳೆಯ ಗೌಪ್ಯತೆಯ ಮೇಲೆ ದೃಢವಾದ ನ್ಯಾಯಶಾಸ್ತ್ರವನ್ನು ಹಾಕುವುದು, ವೈದ್ಯರಿಂದ ಗರ್ಭಪಾತವನ್ನು ಬಯಸುವ ಮಹಿಳೆಗೆ ಅಧಿಕಾರದ ಮೂಲಭೂತ ಬದಲಾವಣೆಗೆ ಅನುವಾದಿಸುವುದಿಲ್ಲ.



● ಗರ್ಭಪಾತಕ್ಕೆ ಅನುಕೂಲವಾಗುವಂತೆ ಕ್ಲಿನಿಕಲ್ ಅಭ್ಯಾಸದಲ್ಲಿ ಎಲ್ಲಾ ಮಾನದಂಡಗಳು ಮತ್ತು ಪ್ರಮಾಣಿತ ಮಾರ್ಗಸೂಚಿಗಳನ್ನು ದೇಶಾದ್ಯಂತದ ಆರೋಗ್ಯ ಸಂಸ್ಥೆಗಳಲ್ಲಿ ಅನುಸರಿಸಲಾಗಿದೆ ಎಂದು ಸರ್ಕಾರ ಖಚಿತಪಡಿಸಿಕೊಳ್ಳಬೇಕು.

● ಅದರೊಂದಿಗೆ, ಗರ್ಭಪಾತದ ಪ್ರಶ್ನೆಯನ್ನು ಮಾನವ ಹಕ್ಕುಗಳು, ಘನ ವಿಜ್ಞಾನದ ತತ್ವಗಳ ಆಧಾರದ ಮೇಲೆ ಮತ್ತು ತಂತ್ರಜ್ಞಾನದ ಪ್ರಗತಿಯೊಂದಿಗೆ ಹಂತವಾಗಿ ನಿರ್ಧರಿಸುವ ಅಗತ್ಯವಿದೆ.

● ಇದು ಈಗ ಕಾಯಿದೆಯಾಗಿ ಮಾರ್ಪಟ್ಟಿರುವುದರಿಂದ, ದೇಶವು ಪ್ರಗತಿಯ ಹಾದಿಯಲ್ಲಿದೆ, ಮಹಿಳಾ ಸಮಸ್ಯೆಗಳನ್ನು ಎಂದಿಗಿಂತಲೂ ಹೆಚ್ಚು ತೀವ್ರವಾಗಿ ಪರಿಹರಿಸುತ್ತದೆ ಎಂದು ಭರವಸೆ ನೀಡಬಹುದು.



**ಡಾ. ನಾ. ಸೋಮೇಶ್ವರ**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಬೆಂಗಳೂರು

### ವೈದ್ಯ ಲೋಕದ ವಿಸ್ಮಯಗಳು...

# ಭೂಲೋಕದ ದೇವತೆಗಳೋ? ಯಮನ ಸಹೋದರರೋ ಅಥವ ಸಾಮಾನ್ಯ ಮನುಷ್ಯರೋ?

What I always believe

First see the patient medicolegally, then medically, then technically, then comes empathy. I suggest to do work honestly and sincerely but never allow the honesty to get in to your head.

Consider ourselves like any other profession. We don't have any extra privilege in our country and in fact we are more vulnerable and are easy targets than anyone else.

Don't get fooled by terminologies like noble profession, God life saver and doing charity and feeling good. Those words were apt in past years, not now. Be honest but accept reality.

ಸೋಮವಾರ, 26 ಡಿಸೆಂಬರ್ 2022ರಂದು, ನಮ್ಮ ವೈದ್ಯ ಬರಹಗಾರರ ವ್ಯಾಟ್ಸಪ್ ತಂಡದಲ್ಲಿ ಡಾ.ವೀರಗಂಗಾಧರ ನಿಟಾಲಿಯವರು ಮೇಲ್ಕಂಡ ಸ್ಲೈಡ್‌ನ್ನು ಜಾಹೀರು ಮಾಡಿದ್ದರು. ನ್ಯಾಯ–



ವೈದ್ಯಕೀಯ ಸಮಾವೇಶದಲ್ಲಿ ಚರ್ಚೆಯಾದ ಒಂದು ಸ್ಲೈಡ್ ಅದಾಗಿತ್ತು. ಈ ಸ್ಲೈಡ್ ವಾಸ್ತವತೆಯನ್ನು ನಮ್ಮ ಕಣ್ಣಮುಂದೆ ನೇರವಾಗಿ ಇರಿಸಿದೆ. ವೈದ್ಯಕೀಯವೂ ಸಹ ಒಂದು ವೃತ್ತಿ. ಎಲ್ಲ ವೃತ್ತಿಗಳಂತೆ ನಾವೂ ಆದಾಯ ತೆರಿಗೆಯನ್ನು ಕಟ್ಟುತ್ತೇವೆ. ಎಲ್ಲ ವೃತ್ತಿಗಳ ವೃತ್ತಿಪರರಿಗೆ ಗ್ರಾಹಕರ ಕಾಯಿದೆ ಅನ್ವಯವಾಗುವ ಹಾಗೆ, ವೈದ್ಯರಿಗೂ ಅನ್ವಯವಾಗುತ್ತದೆ. ಈ ಕಟು ವಾಸ್ತವದ ಹಿನ್ನೆಲೆಯಲ್ಲಿ ನಮ್ಮ ಬಳಿಬರುವ ಪ್ರತಿಯೊಬ್ಬ ರೋಗಿಯೂ ಸಹ 'ನಮ್ಮ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಬಲ್ಲ' ಎನ್ನುವುದನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಬಲು ಎಚ್ಚರಿಕೆಯಿಂದ ಚಿಕಿತ್ಸೆಯನ್ನು ಆರಂಭಿಸುವುದು ಸೂಕ್ತವೆನಿಸುತ್ತದೆ. ನಮ್ಮ ಸಮಾಜದಲ್ಲಿ ಮಾತ್ರವಲ್ಲ, ಜಗತ್ತಿನ ಯಾವುದೇ ಕಾಲದ, ಯಾವುದೇ ದೇಶದ, ಯಾವುದೇ ಸಮಾಜದಲ್ಲಿ ವೈದ್ಯರಿಗೆ ಅಂತಹ ಗೌರವ ಇದ್ದಹಾಗೆ ಕಾಣುವುದಿಲ್ಲ. ವೈದ್ಯರನ್ನು 'ಭೂಮಿಯ ಮೇಲೆ ನಡೆದಾಡುವ

ದೇವರು' ಎಂದು ಹೊಗಳಿ ಗೌರೀಶಂಕರಕ್ಕೇರಿಸುವುದು ಅಥವ 'ಯಮಧರ್ಮನ ಸಹೋದರ' ಎಂದು ಹಿಯಾಳಿಸುವುದು, ಈ ಎರಡೂ ಅತಿರೇಕಗಳು ವೈದ್ಯರಿಗೆ ಅನಗತ್ಯ. ವೈದ್ಯರನ್ನೂ ಸಹ, ಉಪ್ಪು, ಖಾರ, ಹುಳಿಯನ್ನು ತಿನ್ನುವ ಎಲ್ಲ ಮನುಷ್ಯರನ್ನು ಕಾಣುವಂತೆ, ನಡೆಸಿಕೊಂಡರೆ ಸಾಕಾಗುತ್ತದೆ.

ಸಮಕಾಲೀನ ಭಾರತದಲ್ಲಿ ವೈದ್ಯರ ಮೇಲೆ ಆಗುತ್ತಿರುವ ಹಲ್ಲೆ ಹಾಗೂ ನ್ಯಾಯಾಲಯಗಳು ವಿಧಿಸುತ್ತಿರುವ ದುಬಾರಿ ದಂಡ/ಪರಿಹಾರ ಧನವನ್ನು ನೆನೆಸಿಕೊಂಡರೆ, ಬಹುಶಃ ಅನಾದಿ ಕಾಲದಿಂದ ವೈದ್ಯರಿಗೆ ದೊರೆಯುತ್ತಿದ್ದ ದಂಡ/ಶಿಕ್ಷೆಯಲ್ಲಿ ಅಂತಹ ದೊಡ್ಡ ಬದಲಾವಣೆಯಾಗಿಲ್ಲ ಎಂದೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಮಾನವ ಇತಿಹಾಸದ ಲಭ್ಯ ಪ್ರಪ್ರಥಮ ದಾಖಲೆಯಾದ 'ಹಮುರಬಿ ಶಾಸನ'ವು ನೆನಪಿಗೆ ಬಂದಿತು. ಹಾಗಾಗಿ ಅದನ್ನು ಒಮ್ಮೆ ಅವಲೋಕಿಸುವುದು ಸೂಕ್ತವಾದೀತು.

'ಹಮುರಬಿ ಶಾಸನ'ವು ಬ್ಯಾಬಿಲೋನಿಯನ್ ಸಂಸ್ಕೃತಿಗೆ ಸೇರಿದ, ಮನುಕುಲದ ಪ್ರಪ್ರಥಮ ನ್ಯಾಯ–ವೈದ್ಯಕೀಯ ಶಾಸನ. ಪ್ರಾಚೀನ ಜಗತ್ತಿನ ಅತ್ಯಂತ ದೀರ್ಘವಾದ, ಕ್ರಮಬದ್ಧವಾದ ಹಾಗೂ ಸಂರಕ್ಷಿತ ಶಾಸನವಾಗಿದೆ. ಇದನ್ನು ಬ್ಯಾಬಿಲೋನಿಯದ ಅಕ್ಕಾಡಿಯನ್ನು ಭಾಷೆಯ ಕ್ಯೂನಿಫಾರಮ್ ಲಿಪಿಯಲ್ಲಿ ಬರೆಯಲಾಗಿದೆ. ಬ್ಯಾಬಿಲೋನ್ ಸಾಮ್ರಾಜ್ಯವನ್ನು ಆಳಿದ ಮೊದಲ ವಂಶದ ಆರನೆಯ ಅರಸ ಹಮ್ಮುರಬಿ (ಕ್ರಿ.ಪೂ.1810–ಕ್ರಿ.ಪೂ.1750) ಈ ಶಾಸನದ ಕರ್ತೃ. ಕ್ರಿ.ಪೂ.1755–ಕ್ರಿ.ಪೂ.1750 ಅವಧಿಯಲ್ಲಿ ಈ ಶಾಸನವು ರೂಪುಗೊಂಡಿರಬಹುದು. ಇದನ್ನು ಬೆಸಾಲ್ಟ್ ಶಿಲಾ ಫಲಕದ (ಬೆಸಾಲ್ಟ್ ಸ್ಟೀಲ್) ಮೇಲೆ ಕೆತ್ತಲಾಗಿದೆ. ಬೆಸಲಾಟ್ ಶಿಲಾಫಲಕವು ಸುಮಾರು 2.25 ಮೀಟರ್ ಎತ್ತರವಿದೆ. ಈ ಶಿಲಾಫಲಕದ ಮೇಲೆ 282 ಸಿವಿಲ್ (ಕೌಟುಂಬಿಕ ಕಾನೂನು, ಆಸ್ತಿ ಕಾನೂನು ಮತ್ತು ವಾಣಿಜ್ಯ ಕಾನೂನು) ಮತ್ತು ಕ್ರಿಮಿನಲ್ ವಿಷಯಗಳಿಗೆ ಸಂಬಂಧಿಸಿದ ಶಾಸನಗಳನ್ನು 4130 ಸಾಲುಗಳಲ್ಲಿ ಕೆತ್ತಲಾಗಿದೆ. ಮೂಲ ಶಾಸನವನ್ನು ಪ್ಯಾರಿಸ್ಸಿನ ಲೂವ್ರ್ ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಇದರ ಹಲವು ಪ್ರತಿಗಳು ಜಗತ್ತಿನ ಹಲವು ಕಡೆ ದೊರೆಯುತ್ತದೆ.

ವೈದ್ಯಕೀಯಕ್ಕೆ ಸಂಬಂಧಿಸಿದಂತೆ, 215–223ರವರೆಗೆ, ಒಂಬತ್ತು ಶಾಸನಗಳಿವೆ. ಈ ಶಾಸನಗಳನ್ನು ಒಂದೊಂದಾಗಿ ಗಮನಿಸೋಣ.

215. ಒಬ್ಬ ವೈದ್ಯನು ರೋಗಿಯ ಕಣ್ಣಿನ ಶಸ್ತ್ರಚಿಕಿತ್ಸೆಯನ್ನು ಮಾಡಿ, ಅವನ ಕಣ್ಣನ್ನು ಉಳಿಸಿದರೆ, ಅವನಿಗೆ ಹತ್ತು ಶೆಕೆಲ್ ಹಣ (ಬೆಳ್ಳಿ ನಾಣ್ಯಗಳು) ಸಂದಾಯವಾಗಬೇಕು.

216. ಶಸ್ತ್ರಚಿಕಿತ್ಸೆಯನ್ನು ಪಡೆದ ವ್ಯಕ್ತಿಯು ಹೀನ ಕುಲದವನಾಗಿದ್ದರೆ, ಅವನು ಐದು ಶೆಕೆಲ್ ಹಣವನ್ನು ವೈದ್ಯರಿಗೆ ಸಂದಾಯ ಮಾಡಬೇಕು.

217. ಚಿಕಿತ್ಸೆಯನ್ನು ಪಡೆದವನು ಗುಲಾಮನಾಗಿದ್ದರೆ, ಆ ಗುಲಾಮನ ಯಜಮಾನನು ಎರಡು ಶೆಕೆಲ್ ಹಣವನ್ನು ವೈದ್ಯರಿಗೆ ಸಂದಾಯ ಮಾಡಬೇಕು.



218. ಒಬ್ಬ ವೈದ್ಯನು ಚಿಕಿತ್ಸೆಯನ್ನು ನೀಡುವಾಗ ರೋಗಿಯು ಸತ್ತರೆ ಅಥವ ಕಣ್ಣಿನ ದೃಷ್ಟಿಯು ನಾಶವಾದರೆ, ವೈದ್ಯನ ಕೈಗಳನ್ನು ಛೇದಿಸಬೇಕು.

219. ಒಬ್ಬ ವೈದ್ಯನು ಹೀನ ಕುಲದವನ ಗುಲಾಮನಿಗೆ ಶಸ್ತ್ರಚಿಕಿತ್ಸೆಯನ್ನು ನೀಡುವಾಗ, ಆ ಗುಲಾಮನು

ಮರಣಿಸಿದರೆ, ವೈದ್ಯನು ಮತ್ತೊಬ್ಬ ಗುಲಾಮನನ್ನು ಬದಲಿಯನ್ನಾಗಿ ಹೀನಕುಲದವನಿಗೆ ನೀಡಬೇಕು.

220. ಒಬ್ಬ ವೈದ್ಯನು ತನ್ನ ಶಸ್ತ್ರದಿಂದ ಒಂದು ಗಂತಿಯನ್ನು (ಟ್ಯೂಮರ್) ಛೇದಿಸುವಾಗ, ಅವನ ಕಣ್ಣನ್ನು ಛೇದಿಸಿದರೆ, ಆಗ ವೈದ್ಯನು ಗುಲಾಮನ ಬೆಲೆಯ ಅರ್ಧವನ್ನು ನೀಡಬೇಕು.



221. ಒಬ್ಬ ವೈದ್ಯನು ರೋಗಿಯ ಮುರಿದ ಮೂಳೆಯನ್ನು ಸರಿಪಡಿಸಿದರೆ ಅಥವ ರೋಗಗ್ರಸ್ತ ಮೃದು ಅಂಗವನ್ನು ಗುಣಪಡಿಸಿದರೆ, ಆಗ ರೋಗಿಯು ವೈದ್ಯನಿಗೆ ಐದು ಶೆಕೆಲ್ ಹಣವನ್ನು ನೀಡಬೇಕು.

222. ರೋಗಿಯು ಹೀನ ಕುಲದವನಾಗಿದ್ದರೆ, ಅವನು ವೈದ್ಯನಿಗೆ ಮೂರು ಶೆಕೆಲ್ ಹಣವನ್ನು ನೀಡಬೇಕು.

223. ರೋಗಿಯು ಗುಲಾಮನಾಗಿದ್ದರೆ, ಆ ಗುಲಾಮನ ಯಜಮಾನನು ವೈದ್ಯನಿಗೆ 2 ಶೆಕೆಲ್ ಹಣವನ್ನು ಕೊಡಬೇಕು.

ಪ್ರಾಚೀನ ಮೆಸೊಪೊಟೋಮಿಯನ್ ಸಂಸ್ಕೃತಿಯಲ್ಲಿ ಬಳಕೆಯಲ್ಲಿದ್ದ ನಾಣ್ಯವನ್ನು 'ಶೆಕೆಲ್' ಎಂದು ಕರೆಯುತ್ತಿದ್ದರು. ಚಿನ್ನ ಮತ್ತು ಬೆಳ್ಳಿಯಿಂದ ಮಾಡಿದ ಶೆಕೆಲ್ ನಾಣ್ಯಗಳನ್ನು ಠಂಕಿಸುತ್ತಿದ್ದರು. ಆದರೆ ಸರ್ವ ಸಾಮಾನ್ಯವಾಗಿ ಬೆಳ್ಳಿ ಶೆಕೆಲ್ ಮಾತ್ರ ದಿನನಿತ್ಯದ ವ್ಯವಹಾರದಲ್ಲಿ ಬಳಕೆಯಲ್ಲಿತ್ತು. ಒಂದು ಶೆಕೆಲ್ ಸರಿ ಸುಮಾರು 11 ಗ್ರಾಂ ತೂಗುತ್ತಿತ್ತು. 10 ಶೆಕೆಲ್ ಎಂದರೆ 110 ಗ್ರಾಂ ಬೆಳ್ಳಿಯಾಯಿತು. ಈ ಲೇಖನವನ್ನು ಬರೆಯುತ್ತಿರುವ ದಿನದಂದು (28.12.2022) ಭಾರತದಲ್ಲಿ 110 ಗ್ರಾಂ ಬೆಳ್ಳಿಗೆ ರೂ.8,207 ಬೆಲೆಯಿದೆ. ಇದರಿಂದ ಪ್ರಾಚೀನ ಮೆಸಪೊಟೋಮಿಯನ್ ಸಂಸ್ಕೃತಿಯಲ್ಲಿದ್ದ ವೈದ್ಯರು ಎಷ್ಟು ಹಣವನ್ನು ಸಂಪಾದನೆ ಮಾಡುತ್ತಿದ್ದರು ಎನ್ನುವ ಬಗ್ಗೆ ನಮಗೆ ಒಂದು ಪರಿಕಲ್ಪನೆಯು ದೊರೆಯುತ್ತದೆ.

ಹಮ್ಮುರಬಿಯು ತನ್ನ ಶಾಸನಗಳನ್ನು ರೂಪಿಸುವಾಗ, ಆತನು ಅನೇಕ ಅಂಶಗಳನ್ನು ಪರಿಗಣಿಸಿಲ್ಲ ಎನ್ನುವುದನ್ನು ಮನಗಾಣಬಹುದು.

- ವೈದ್ಯಕೀಯ ವಿಜ್ಞಾನವು ಒಂದು ಅಪರಿಪೂರ್ಣ ವಿಜ್ಞಾನ. ವೈದ್ಯಕೀಯದಲ್ಲಿ 2+2=4 ಆಗಲೇಬೇಕೆಂಬ ನಿಯಮವೇನೂ ಇಲ್ಲ.

- ವೈದ್ಯಕೀಯ ವಿಜ್ಞಾನದಲ್ಲಿ ಇಂದಿಗೂ ಸಹ ಸಂಶೋಧನೆಗಳು ನಡೆಯುತ್ತಿವೆ. ಪ್ರತಿ ದಿನವೂ ಹೊಸ ಹೊಸ ವಿಚಾರಗಳು ತಿಳಿದುಬರುತ್ತಿವೆ. ಮನುಷ್ಯನಿಗೆ ದೇಹದ ಬಗ್ಗೆ ವೈದ್ಯರು ತಿಳಿದಿರುವುದಕ್ಕಿಂತ, ತಿಳಿಯಬೇಕಾದದ್ದು ಇನ್ನೂ ತುಂಬಾ ಇದೆ.

- ಪ್ರತಿಯೊಬ್ಬ ಮನುಷ್ಯನ ಶರೀರವು ವಿಶಿಷ್ಟವಾದದ್ದು. ಒಬ್ಬನ ಶರೀರದ ಹಾಗೆ ಮತ್ತೊಬ್ಬನ ಶರೀರವೂ ಇರಲೇಬೇಕೆಂಬ ನಿಯಮವೇನೂ ಇಲ್ಲ. ನ್ಯಾಯಾಧೀಶರು ತೀರ್ಮಾನವನ್ನು ನೀಡುವಾಗ ಈ ವ್ಯಕ್ತಿ ವೈಲಕ್ಷಣತೆಯನ್ನು (ಈಡಿಯೊಸಿಂಕ್ರಸಿ) ಗಮನದಲ್ಲಿ ಇಟ್ಟುಕೊಳ್ಳಬೇಕು.

- ಸಾಕ್ಷ್ಯಾಧಾರಿತ ಚಿಕಿತ್ಸೆಯನ್ನು ನೀಡಿದರೂ ಸಹ, ಕೆಲವು ಸಲ ರೋಗಿಯು ಮರಣಿಸುವುದುಂಟು. ಇದಕ್ಕೆ ವೈಜ್ಞಾನಿಕ ವಿವರಣೆಯನ್ನು ನೀಡಲು ಅಗತ್ಯವಾದ ಜ್ಞಾನವು ಪ್ರಸ್ತುತ ವೈದ್ಯಕೀಯಕ್ಕೆ ಇಲ್ಲ.

- ವೈದ್ಯನೂ ಸಹ ಮನುಷ್ಯನೆ! ಹಾಗಾಗಿ ಎಲ್ಲ ರೀತಿಯ ವೃತ್ತಿಗಳಲ್ಲಿರುವ ಮನುಷ್ಯರು ಹೇಗೆ ಒಂದಲ್ಲ ಒಂದು ಸಲ ತಪ್ಪನ್ನು ಮಾಡಬಹುದೋ, ಹಾಗೆ ವೈದ್ಯರಿಂದಲೂ ತಪ್ಪುಗಳು ಆಗಿರುವ ಸಾಧ್ಯತೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

- ಅನಾರೋಗ್ಯ ಪೀಡಿತ ವ್ಯಕ್ತಿಯು ಶೀಘ್ರ ಗುಣಮುಖನಾಗಬೇಕಾದರೆ, ಅವನ ಮನಸ್ಸಿನ ಆರೋಗ್ಯವು ಉತ್ತಮವಾಗಿರಬೇಕು. ಕೆಲವು ರೋಗಿಗಳಲ್ಲಾದರೂ ಸರಿ, ಬದುಕುವ ಉತ್ಸಾಹವೇ ಇರುವುದಿಲ್ಲ. ರೋಗಿಯಿಂದ ಇತ್ಯಾತ್ಮಕ ಸಹಕಾರವು ದೊರೆಯದೆ ರೋಗಿಯು ಮರಣಿಸಿದರೆ, ಅದಕ್ಕೂ ವೈದ್ಯರನ್ನೇ ಹೊಣೆ ಮಾಡುವ ಪದ್ಧತಿಯು ಇಂದಿದೆ.

ಹಮ್ಮುರಬಿಯು ಶಸ್ತ್ರವೈದ್ಯನ ಕೈಗಳನ್ನು ಕತ್ತರಿಸುತ್ತಿದ್ದ. ಕೈಗಳಿಲ್ಲದ ವೈದ್ಯ (ಶಸ್ತ್ರವೈದ್ಯ) ಹೇಗೆ ತಾನೆ ತನ್ನ ವೃತ್ತಿಯಲ್ಲಿ ಮುಂದುವರೆಯಬಲ್ಲ? ಅವನ ವೈದ್ಯಕೀಯ ಬದುಕೇ ಮುಗಿದಂತೆ. ಅವನು ಬದುಕಿದ್ದೂ ಸತ್ತಂತಾಗಿರುತ್ತಾನೆ. ಈಗಿನ ನ್ಯಾಯಾಲಯಗಳು ಕೆಲವು ಪ್ರಕರಣಗಳಲ್ಲಿ ರೋಗಿಯ ಕಡೆಯವರು ಅಥವ ನ್ಯಾಯಾಲಯವು ವಿಧಿಸುವ ದಂಡ/ಪರಿಹಾರವನ್ನು ನೆನೆಸಿಕೊಂಡರೆ, ಹಮ್ಮುರಬಿಯ ಕಾಲಕ್ಕೇ ನಮ್ಮ ನ್ಯಾಯಪದ್ಧತಿಯು ಹಿಮ್ಮರಳಿದೆ ಎಂದೆನಿಸುತ್ತದೆ.

ಸಾಂಸ್ಕೃತಿಕ



**ಡಾ. ವೀಣಾ ಭಟ್**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಸ್ತ್ರೀರೋಗ ತಜ್ಞರು, ನಯನ ಆಸ್ಪತ್ರೆ ಭದ್ರಾವತಿ

# ಸಮಿತಿಯ ಮತ್ತು ಶಾಖೆಗಳ ಕನ್ನಡ ಕಾರ್ಯಕ್ರಮಗಳ ವರದಿ

"ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ" ಎನ್ನುವ ಚೆನ್ನವೀರಕಣವಿಯವರ ವಾಕ್ಯವನ್ನು ನೆನಪಿಸಿಕೊಳ್ಳುತ್ತಾ, ಕನ್ನಡವು ಇಂದಿಗೂ ಎಲ್ಲಾ ಕನ್ನಡಿಗರ ಉಸಿರಾಗದಿದ್ದರೂ ಕನ್ನಡನಾಡು–ನುಡಿಪರ ಕಾರ್ಯಚಟುವಟಿಕೆಗಳು ಈ ನವೆಂಬರ್ ಮತ್ತು ಡಿಸೆಂಬರ್ ಮಾಹೆಯಲ್ಲಿ ಕರ್ನಾಟಕದಾದ್ಯಂತ




ಗರಿಗೆದರಿರುವುದಂತೂ ಸತ್ಯ. ಸದಾ ತಮ್ಮ ವೃತ್ತಿಜೀವನದಲ್ಲಿ ಕಾರ್ಯನಿರತರಾಗಿದ್ದರೂ ಕನ್ನಡ ರಾಜ್ಯೋತ್ಸವದ ಆಸುಪಾಸಿನಲ್ಲಿ ನಮ್ಮ ವೈದ್ಯ ಬರಹಗಾರರ ಬಳಗದ ಕಾರ್ಯಚಟುವಟಿಕೆ ಕೂಡಾ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುತ್ತಾ ತನ್ನ ಅಸ್ತಿತ್ವವನ್ನು ಸಾಬೀತು ಪಡಿಸುತ್ತಿರುವುದು ಹೆಮ್ಮೆಯ ಸಂಗತಿ.

ವೈದ್ಯ ಬರಹಗಾರರ ಸಮಿತಿಯ ಪ್ರಪ್ರಥಮ ದತ್ತಿ ಕಾರ್ಯಕ್ರಮವು, ಭಾರತೀಯ ವೈದ್ಯಕೀಯ ಸಂಘದ ಬರಹಗಾರರ ಸಮಿತಿ, ಭಾರತೀಯ ವೈದ್ಯಕೀಯ ಸಂಘ, ಶಿವಮೊಗ್ಗ ಶಾಖೆ ಮತ್ತು ಸಹ್ಯಾದ್ರಿ ಕಾಲೇಜು, ಶಿವಮೊಗ್ಗ ಇವರುಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ 29/11/2022ರಂದು ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮದ ನಿರ್ವಹಣೆಯನ್ನು ವೈದ್ಯ ಬರಹಗಾರರ ಸಮಿತಿಯ ಸದಸ್ಯೆ ಡಾ ವಿನಯ ಶ್ರೀನಿವಾಸ್‌ರವರು ವಹಿಸಿ ತಮ್ಮ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ಭಾರತೀಯ ವೈದ್ಯಕೀಯ ಸಂಘ, ರಾಜ್ಯ ಶಾಖೆಯ ಅಂಗಸಂಸ್ಥೆಯಾಗಿ ವೈದ್ಯ ಬರಹಗಾರರ ಸಮಿತಿ ಕಾರ್ಯ ನಿರ್ವಹಿಸುತ್ತಿದ್ದು, ಇದರ ಪ್ರಪ್ರಥಮ ದತ್ತಿಕಾರ್ಯಕ್ರಮವನ್ನು ಕೆ.ಎಂ.ಸಿ.ಹುಬ್ಬಳ್ಳಿಯ 1990ನೇ ಬ್ಯಾಚಿನ ವಿದ್ಯಾರ್ಥಿಪ್ರತಿನಿಧಿಗಳ ದತ್ತಿದಾನದಿಂದ ನಡೆಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ತಿಳಿಸಿದರು. ಅದೇ ಬ್ಯಾಚ್‌ನ ವಿದ್ಯಾರ್ಥಿಯೂ ಜೊತೆಗೆ ಪ್ರತಿಷ್ಠಿತ ಮೆಗ್ಗಾನ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರೂ ಆದ ಡಾ. ಶ್ರೀಧರ್ ಅವರು ಕಾರ್ಯಕ್ರಮ ಉದ್ಘಾಟಿಸಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ನಗರದ ಜೆ.ಎನ್.ಎನ್.ಸಿ.ಇ ಕಾಲೇಜಿನ ನಿರ್ವಹಣಾ ಅಧ್ಯಯನಗಳ ವಿಭಾಗದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿ ಸಲಹೆಗಾರರಾದ ಪ್ರೊಫೆಸರ್ ಸಿ.ಕೆ.ಅನುರಾಧರವರು 'ಹೊರೆಯಾಗದಿರಲಿ ಹರೆಯ' ಎಂಬ ವಿಷಯದ ಕುರಿತಾಗಿ ಸೊಗಸಾಗಿ ಮಾತನಾಡಿದರು. ಹರೆಯದ ದಿನಗಳಲ್ಲಿ ತುಸು ಎಚ್ಚರದಿಂದಿದ್ದರೆ ಜೀವನದಲ್ಲಿ ಸಾಕಷ್ಟು ಸಾಧನೆಯನ್ನು ಮಾಡಲು ಸಾಧ್ಯ ಎಂದ ಅವರು ವಿದ್ಯಾರ್ಥಿಗಳಿಗೆ ಸಮಯ ನಿರ್ವಹಣೆಯ ಕೌಶಲ್ಯವನ್ನು ಬೆಳೆಸಿಕೊಳ್ಳಲು ಕರೆ ನೀಡಿದರು. ಬದುಕಿನಲ್ಲಿ ಬರುವ ಸಣ್ಣ ಪುಟ್ಟ ತೊಂದರೆಗಳನ್ನೇ ವೈಭವೀಕರಿಸದೆ ಲಭ್ಯವಿರುವ ಸೌಲಭ್ಯ ಸವಲತ್ತುಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವ ಜಾಣ್ಮೆಯನ್ನು ವಿದ್ಯಾರ್ಥಿಗಳು ಹೊಂದಿರಬೇಕು ಎಂದರು. ವಿದ್ಯಾರ್ಥಿಯಾಗಿಯೂ ಮತ್ತೊಬ್ಬರಿಗೆ ಸಹಾಯ ಮಾಡುವ ಅವಕಾಶಗಳು ಖಂಡಿತ ಇರುತ್ತವೆ, ಆ ಬಗ್ಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ವಿಚಾರ ಮಾಡಬೇಕು. ಸರಿಯಾಗಿ ನಿಭಾಯಿಸಿದಾಗ ಹರೆಯ ಹೊರೆಯಾಗದೆ ಹರ್ಷದಾಯಕವಾಗಿರಬಲ್ಲದು, ಅದು ವಿದ್ಯಾರ್ಥಿಗಳಾದ ನಿಮ್ಮ ಕೈಯಲ್ಲಿಯೇ ಇದೆ ಎನ್ನುವ ಕಿವಿ ಮಾತನ್ನು ಹೇಳಿದರು.

ಈ ಕಾರ್ಯಕ್ರಮದ ದತ್ತಿದಾನಿಗಳಾದ ಕೆ.ಎಂ.ಸಿ ಹುಬ್ಬಳ್ಳಿಯ 1990ನೆ ಬ್ಯಾಚಿನ ವಿದ್ಯಾರ್ಥಿಗಳ ಪ್ರತಿನಿಧಿಗಳಾಗಿ ಮಕ್ಕಳ ತಜ್ಞೆ ಡಾ. ಜಯಲಕ್ಷ್ಮಿ ನಾಯಕ್ ಮತ್ತು ಶಿವಮೊಗ್ಗ ಜಿಲ್ಲಾ ತರಬೇತಿ ಕೇಂದ್ರದ ಮುಖ್ಯಸ್ಥ ಡಾ ಕಿರಣ್ ಎಸ್. ಕೆ ಹಾಜರಿದ್ದರು. ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲರಾದ ಡಾ.ರಾಜೇಶ್ವರಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಐ.ಎಂ.ಎ ಕಾರ್ಯದರ್ಶಿ ಡಾ.ರಕ್ಷಾರಾವ್ ಹಾಗೂ ಡಾ.ಶುಭ್ರತಾ ಉಪಸ್ಥಿತರಿದ್ದರು.

ಖ್ಯಾತ ಪ್ರದ್ರೋಗತಜ್ಞರು ಹಾಗೂ ನಮ್ಮೆಲ್ಲರ ಹೆಮ್ಮೆಯ ವೈದ್ಯಸಂಪದದ ಪ್ರಧಾನ ಸಂಪಾದಕರೂ ಆದ ಡಾ.ಸುರೇಶ್ ಸಗರದರವರು ರಾಯಚೂರು ತಾಲೂಕಿನ ಐದನೆಯ ಕನ್ನಡಸಾಹಿತ್ಯ ಸಮ್ಮೇಳನದಲ್ಲಿ ಕವನ ವಾಚನಮಾಡಿ ಸನ್ಮಾನಿಸಲ್ಪಟ್ಟರು.

ಖ್ಯಾತ ವೈದ್ಯರೂ ಎನ್.ಆರ್.ಎಂ.ಹೆಚ್. ಪ್ರಕಾಶನದ ಸಂಸ್ಥಾಪಕರೂ, ಹಾಗೂ ವೈದ್ಯಸಾಹಿತ್ಯ ಮತ್ತು ಸೃಜನಶೀಲ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡುತ್ತಿರುವ ಡಾ.ಭಾಸ್ಕರ್ ಆಚಾರ್ಯರು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಗೆ ಮೀಸಲಾದ "ಸ್ಥಿತಿಗತಿ" ತ್ರೈಮಾಸಿಕ ಪತ್ರಿಕೆಯನ್ನು ಕಳೆದ 11ವರ್ಷಗಳಿಂದ ನಿರಂತರವಾಗಿ ಸಂಪಾದಿಸಿ ಪ್ರಕಟಿಸುತ್ತಿದ್ದಾರೆ. ಕಳೆದ 14ವರ್ಷಗಳಿಂದ ಸೂರ್ಯನಾರಾಯಣ ಚಡಗ ಸ್ಮಾರಕ, ಜೀವಮಾನದ ಸಾಧನೆ ಪ್ರಶಸ್ತಿಯನ್ನು ಹಾಗೂ ವರ್ಷದ ಶ್ರೇಷ್ಠ ಕಾದಂಬರಿ ಪ್ರಶಸ್ತಿಯನ್ನು ನೀಡುತ್ತಾ ಬಂದಿದ್ದಾರೆ. ಈ ಬಾರಿ ಡಾ.ಶ್ರೀಧರ್ ಹೆಚ್.ಪಿ. ಹಾಗೂ ಶ್ರೀ ಅಂಬ್ರಯ್ಯ ಮಠರವರಿಗೆ ಪ್ರಶಸ್ತಿ ಪ್ರದಾನವನ್ನು ಕೋಟಾದಸರ್ಕಾರಿ ಹಿರಿಯ ಪ್ರಾಥಮಿಕಶಾಲೆ ಸಭಾಂಗಣದಲ್ಲಿ 27/11/2022ರಂದು ಹಮ್ಮಿಕೊಂಡ ಸಮಾರಂಭದಲ್ಲಿ ನೆರವೇರಿಸಲಾಯಿತು.



ಆರೋ ಪ್ರಕಾಶನ ಹಾಗೂ ಚಿಂತನಸಿರಿಮುಧೋಳ ಇವರ ಸಂಯುಕ್ತಾಶ್ರಯದಲ್ಲಿ ಕನ್ನಡ ಸಾಹಿತ್ಯ/ ವಚನ ಸಾಹಿತ್ಯಪರಿಷತ್ತು ಹಾಗೂ ಇನ್ನಿತರ ಸಂಘಸಂಸ್ಥೆಗಳ ಸಹಯೋಗದೊಂದಿಗೆ ಐ.ಎಂ.ಎ ಬರಹಗಾರರ ಬಳಗದ ಹೆಮ್ಮೆಯ ಅಧ್ಯಕ್ಷರಾದ ಡಾ.ಶಿವಾನಂದ ಕುಬಸದರವರ "ಎಂಟುಬಣ್ಣದ ಕೌದಿ" ಎಂಬ ಕವನಸಂಕಲನವು, ಖ್ಯಾತ ನಾಟಕಗಾರ ಹಾಗೂ ಕಥೆಗಾರ ಸೇತುರಾಮ್‌ರವರಿಂದ 27/11/2022ರಂದು ಡಾ.ಕುಬಸದ್‌ರವರ ಕಾರ್ಯಸ್ಥಳ ಮುಧೋಳದಲ್ಲಿ ಲೋಕಾರ್ಪಣೆಗೊಂಡಿತು.

ದಿನಾಂಕ 3 ಮತ್ತು 4ನೇ ಡಿಸೆಬಂರ್‌ರಂದು ಮುಧೋಳ್ ತಾಲ್ಲೂಕು 6ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾ.ವೈ.ಸಂ.ಕನ್ನಡಬರಹಗಾರರ ಸಮಿತಿಯ ಅಧ್ಯಕ್ಷರಾದ ಡಾ.ಶಿವಾನಂದ ಕುಬಸದ್ ಸರ್ವಾಧ್ಯಕ್ಷರಾಗಿದ್ದರು. ಸರ್ವಾಧ್ಯಕ್ಷರ ಭಾಷಣದಲ್ಲಿ ಕನ್ನಡಬರಹಗಾರರ ಬಳಗದಿಂದ ಜರುಗುತ್ತಿರುವ ಹಲವು ಕಾರ್ಯಕ್ರಮಗಳನ್ನು ಉಲ್ಲೇಖ ಮಾಡಿ, "ವೈದ್ಯಕೀಯ ಶಿಕ್ಷಣವನ್ನು ಕನ್ನಡಮಾಧ್ಯಮದಲ್ಲಿ ಕಲಿಸುವತ್ತ ಪ್ರಯತ್ನಗಳು ಸಾಗಿವೆ", ಎಂದು ಹೇಳಿದರು. ಅವರ ಅಧ್ಯಕ್ಷೀಯ ಭಾಷಣ ಎಲ್ಲರ ಮನ್ನಣೆಗೆ ಪಾತ್ರವಾಯಿತು.



ರಾಯಚೂರಿನ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ರಮೇಶ್ ಸಿ.ಸಾಗರ್‌ರವರ"ಕೇಜಿಗಟ್ಟಲೇ ತೂಕದ ಪುಸ್ತಕಗಳ ಮಧ್ಯೆ" ಎನ್ನುವ ಕವನ ಸಂಕಲನ ಬಿಡುಗಡೆಯಾಗಿದೆ.

ಐ.ಎಂ.ಎ ಬರಹಗಾರರ ಬಳಗದ ನಿಕಟಪೂರ್ವ ಅಧ್ಯಕ್ಷರಾದ ಡಾ.ಅರವಿಂದ ಪಟೇಲ್‌ರವರು, ಬಳ್ಳಾರಿಯಲ್ಲಿ ಡಾ. ದಯಾನಂದ




ಖಿನ್ನಾಳರ "ಧರ್ಮೋಜಯ" ಎನ್ನುವ ಕಥಾಸಂಕಲನದ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ನವಂಬರ್ 17ರಂದು ಭಾರತೀಯ ವಿಧ್ಯಾಭವನ ಹಾಗೂ ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ನಿರಂತರ ನಡೆಸುತ್ತಿರುವ ಕಾವ್ಯೋತ್ಸವದಲ್ಲಿ ನಮ್ಮ ವೈದ್ಯಬರಹಗಾರರ ಬಳಗದ ಖ್ಯಾತ ಕವಿ ಡಾ. ಶ್ರೀಶೈಲಮಾದಣ್ಣನವರ ಕವನವಾಚನವಿತ್ತು. ಅವರು ಡಾ. ಹಂಪಿಹೊಳಿ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿಯೂ ಭಾಗವಹಿಸಿದ್ದರು.

ಚನ್ನಪಟ್ಟಣದ ಖ್ಯಾತ ವೈದ್ಯರಾದ ಡಾ.ಕೆ.ನಾಗೇಶ್‌ರವರು ಅಲ್ಲಿನ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಕನ್ನಡ ನಾಡುನುಡಿಯ ಬಗ್ಗೆ ಅತ್ಯಂತ ಮನೋಜ್ಞವಾಗಿ ಮಾತನಾಡಿ ಜನಮನ ತಲುಪಿದರು.

ಹುಬ್ಬಳಿಯ ಡಾ.ಗೋವಿಂದ್ ಹೆಗಡೆಯವರು ಪ್ರಜಾವಾಣಿ–75–ಅಮೃತಮಹೋತ್ಸವದ ಅಂಗವಾಗಿ 30/11/2022ರಂದು ಧಾರವಾಡದ ರಂಗಾಯಣದಲ್ಲಿ ಏರ್ಪಡಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಮತ್ತು ಕಾವ್ಯಗಾನ ಲಹರಿ ಕಾರ್ಯಕ್ರಮದಲ್ಲಿ ಸ್ವರಚಿತ ಕವನಗಳನ್ನು ಪ್ರಸ್ತುತಪಡಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಲೇಖಕರಾದ ಡಾ.ಬಸು ಬೇವಿನಗಿಡದ, ಶ್ರೀಮತಿ ಸುನಂದಾ ಕಡಮೆ, ಶ್ರೀಮತಿ ನಿರ್ಮಲ ಶೆಟ್ಟರ್, ಶ್ರೀಮತಿ ರಶ್ಮಿ ಎಸ್ ಮತ್ತು ಇನ್ನಿತರರು ಇದ್ದರು.

ನಿಕಟ ಪೂರ್ವ ರಾಜ್ಯಾಧ್ಯಕ್ಷರು ಹಾಗೂ ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತು ಸಿರಗುಪ್ಪ ಘಟಕದ ಅಧ್ಯಕ್ಷರಾದ ಡಾ.ಮಧುಸೂದನ ಕಾರಿಗನೂರುರವರ ನೇತೃತ್ವದಲ್ಲಿ ಕನ್ನಡನಾಡು ನುಡಿ, ನೆಲಜಲದ ಕುರಿತು ರಸಪ್ರಶ್ನೆ ಕಾರ್ಯಕ್ರಮ ನಡೆಸಲಾಯಿತು.ಸಿರಗುಪ್ಪಾದ ಮಕ್ಕಳ ತಜ್ಞರಾದ ಡಾ.ಮನೋಜ್ ಕುಮಾರ್ ಉಪಸ್ಥಿತರಿದ್ದರು.ಸಂಪನ್ಮೂಲ ವ್ಯಕ್ತಿಗಳಾಗಿ ನಿವೃತ್ತ ಶಿಕ್ಷಕರಾದ ಶ್ರೀ ಚನ್ನವೀರ ಸ್ವಾಮಿಯವರು ನಡೆಸಿಕೊಟ್ಟರು.ಸ್ಪರ್ಧಾ ವಿಜೇತರಿಗೆ ಪ್ರಶಂಸಾ ಪತ್ರಗಳ ಜೊತೆಗೆ ಕನ್ನಡ ಪದಕೋಶದ ಪುಸ್ತಕಗಳನ್ನು ಬಹುಮಾನವಾಗಿ ಕೊಡಲಾಯಿತು.

ಐ.ಎಂ.ಎ ಸಿರಸಿ ಕನ್ನಡ ಬಳಗದಿಂದ ನವಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಬಳಗದ ಅಧ್ಯಕ್ಷರಾದ ಡಾ.ಡಿ.ಎಂ.ಹೆಗಡೆಯವರ ಸ್ವಾಗತದಿಂದ ಆರಂಭವಾದ ಕಾರ್ಯಕ್ರಮದಲ್ಲಿ ಡಾ.ರವಿಕಿರಣ್‌ಪಟುವರ್ಧನ್‌ಅವರು "ಕನ್ನಡರಾಜೋತ್ಸವದ ಸುತ್ತಮುತ್ತ" ಎಂಬ ವಿಷಯದಮೇಲೆ ಮಾತನಾಡಿದರು. ಡಾ.ಕೃಷ್ಣಮೂರ್ತಿ ರಾಯ್ಸದ್‌ರವರು ಕನ್ನಡನಾಡಿನ ಸೊಬಗನ್ನ ಬಣ್ಣಿಸಿದರೆ,ಡಾ. ಆಶಾಪ್ರಭು ಹಾಗೂ ಡಾ. ರಮೇಶ್‌ಹೆಗ್ಡೆರವರಿಂದ ಗೀತಗಾಯನ ನಡೆಯಿತು. ಡಾ. ರಾಮಾಹೆಗ್ಡೆ ಹಾಗೂ ಡಾ.ಶಾಂತಾಭಟ್‌ರವರು ಆಶಯ ನುಡಿಗಳನ್ನು ಹಂಚಿಕೊಂಡರು. ಡಾ.ತನುಶ್ರೀ ಹೆಗಡೆರವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.

ನವಂಬರ್ 11ರಂದು ಸಿರಸಿ ಐ.ಎಂ.ಎ ಕನ್ನಡಬಳಗ ಹಾಗೂ ಐ.ಎಂ.ಎ ಸಿರಸಿ ಹಾಗೂ ನಯನಫೌಂಡೇಶನ್ ಸಹಯೋಗದಲ್ಲಿ "ಸಾಹಿತ್ಯ ಮೆರಗು ಬೆರಗು" ಎಂಬ ವಿಶಿಷ್ಟ ಸರಣಿ ಉಪನ್ಯಾಸದ ಕಾರ್ಯಕ್ರಮದಮೊದಲನೆಯ ಕಾರ್ಯಕ್ರಮ ಚುಟುಕು ಬ್ರಹ್ಮ ದಿನಕರ ದೇಸಾಯಿ ಅವರ ಬಗೆಗಿತ್ತು.ಖ್ಯಾತ ಸಾಹಿತಿ ಹಾಗೂ ವಾಗ್ಮಿಗಳಾದ ಸುಬ್ಬರಾಯ



ಹೆಗಡೆಯವರು ಚುಟುಕುಬ್ರಹ್ಮ ದಿನಕರ ದೇಸಾಯಿ ಅವರ ಬದುಕುಬರಹವನ್ನು ಚರ್ಚಿಸಿದರು. ಬಳಗದ ಅಧ್ಯಕ್ಷರಾದ ಡಾ.ಡಿ.ಎಂ.ಹೆಗಡೆಯವರು ಅಧ್ಯಕ್ಷತೆವಹಿಸಿದರೆ ಡಾ.ಶಿವರಾಮ್ ಕೆ.ವಿ ಅವರು ದಿನಕರ ದೇಸಾಯಿಅವರ ಸೊಗಸಾದ ಚುಟುಕುಗಳನ್ನ ವಾಚಿಸಿದರು. ಡಾ. ರಾಧಿಕ

ಎಲ್ಲರನ್ನೂ ವಂದಿಸಿ, ಡಾ.ತನುಶ್ರೀ ಅವರು ಕಾರ್ಯಕ್ರಮ ನಿರೂಪಣೆ ಮಾಡಿದರು.

ಭಾ.ವೈ.ಸಂಘ, ಕರ್ನಾಟಕಶಾಖೆ, ಕನ್ನಡಬರಹಗಾರರ ಸಮಿತಿ, ಐ.ಎಂ.ಎ ವಿದ್ಯಾರ್ಥಿಜಾಲ (ಎಂ.ಎಸ್.ಎನ್) ಇವುಗಳ ಆಶ್ರಯದಲ್ಲಿ ದಿನಾಂಕ 4/12/22ರಂದು ಬೆಂಗಳೂರಿನಲ್ಲಿ ನಡೆದ ವೈದ್ಯಕೀಯ ವಿದ್ಯಾರ್ಥಿಗಳೊಂದಿಗೆ ಒಂದುದಿನ ಕಾರ್ಯಕ್ರಮ ಉತ್ತಮವಾಗಿ ಮೂಡಿಬಂದಿತು. ಉದ್ಘಾಟನೆ ಮಾಡಿ ಮಾತನಾಡಿದ ಬೆಂಗಳೂರು ವೈದ್ಯಕೀಯ ವಿದ್ಯಾಲಯದ ನಿರ್ದೇಶಕರಾದ ಡಾ. ರವಿ ಇವರು, ವೈದ್ಯರ ಪ್ರವೃತ್ತಿಗಳಿಗೆ ಐ.ಎಂ.ಎ ನೀಡುತ್ತಿರುವ ಪ್ರೋತ್ಸಾಹವನ್ನು ಶ್ಲಾಘಿಸುತ್ತ ಅದರ ಸದುಪಯೋಗ ಪಡೆಯಲು ವಿದ್ಯಾರ್ಥಿಗಳಿಗೆ ಕರೆನೀಡಿದರು.

ಆ ದಿನ ಬೆಳಿಗ್ಗೆ ನಾಡಿನ ಖ್ಯಾತ ನ್ಯಾಯವಾದಿ ಪ್ರೊಫೆಸರ್ ನಂದೀಶ ಮಠ, ವಾಸ್ತವ ದಿನಗಳಲ್ಲಿ ಕುಸಿಯುತ್ತಿರುವ ಮೌಲ್ಯಗಳು ಮತ್ತು ವೈದ್ಯ ವೃತ್ತಿಯ ನಿರೀಕ್ಷೆಗಳ ಬಗ್ಗೆಬೆಳಕು ಚೆಲ್ಲಿದರು.ಮೆಡಿಕಲ್ ಕೌನ್ಸಿಲ್ ಇಂದು ಎನ್.ಎಮ್.ಸಿ ಯಾಗಿ ಮಾರ್ಪಾಡಾಗಿ ವೈದ್ಯರನ್ನು ವೈದ್ಯೇತರರು ನಿರ್ವಹಿಸುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಹಾಗೆಯೇ ವಿವಿಧ ಹಂತದಲ್ಲಿ ಒಗ್ಗಟ್ಟಾಗಿ ನೈತಿಕ ಮೌಲ್ಯಗಳನ್ನು ಕಾಪಾಡಿಕೊಳ್ಳುತ್ತಾ ಘನತೆಯ ಬದುಕಿನ ಹಾದಿ ನೆಮ್ಮದಿಯ ನೀಡುವುದರಲ್ಲಿ ಸಂದೇಹವಿಲ್ಲವೆನ್ನುವ ಸಂದೇಶವಿತ್ತರು. ಕಾನೂನುಗಳ ವ್ಯಕ್ತಿಗತ ನೆಲೆಯಲ್ಲಿ ಮಾನವೀಯ ಅಂಶವನ್ನು ಒಳಗೊಂಡರೆ ಸಮಾಜಕ್ಕೆ ಉಪಯೋಗಕಾರಿ ಎಂದರು.ಕಲ್ಕತ್ತಾದಿಂದ ಆಗಮಿಸಿದ್ದ ಖ್ಯಾತ ಅಂಕಣಕಾರದ ಡಾ.ದಯಾನಂದ ಲಿಂಗೇಗೌಡರು ಅಂಕಣ ಬರೆಯುವ ವಿಧಾನವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಭಾಷೆ, ವ್ಯಾಕರಣ, ಶೀರ್ಷಿಕೆ, ವಸ್ತು ಹಾಗೂ ಮುಕ್ತಾಯವೆಲ್ಲವು ಮುಖ್ಯವೆನ್ನುತ್ತ ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆಯಬೇಕಾದ ಅವಶ್ಯಕತೆಯನ್ನು ಒತ್ತಿಹೇಳಿದರು.

ಈ ಕಾರ್ಯಕ್ರಮದಲ್ಲಿ ಡಾ.ಕಿರಣ್ ರವರು ವಿದ್ಯಾರ್ಥಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ ಬೇರೆ ಬೇರೆ ವಿಷಯಗಳನ್ನು ಕೊಟ್ಟು 15ನಿಮಿಷಗಳ ನಂತರ ವಿದ್ಯಾರ್ಥಿಗಳಿಗೆ ವಿಷಯ ಮಂಡನೆಗೆ ಅವಕಾಶ ಕಲ್ಪಿಸಿದರು. ವಿಷಯ ಮಂಡನೆಯ ನಂತರ ಇತರೆ ಗುಂಪಿನವರಿಗೆ ವಿಮರ್ಶೆ ಮಾಡಲು ಅವಕಾಶ ಮಾಡಿಕೊಟ್ಟರು. ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆ, ಲವಲವಿಕೆಯ ಮಂಡನೆ, ವಿಮರ್ಶೆ ಕೇಳುಗರ ಗಮನ ಸೆಳೆದವು.

ಮಧ್ಯಾಹ್ನದಲ್ಲಿ ಕಥೆಕಟ್ಟುವ ರೀತಿ, ಒಂದು ವಿಷಯವನ್ನು ಕಥೆಯಾಗಿಸುವ ಬಗೆಯನ್ನು ಡಾ.ಸಲೀಂ ಹಾಗೂ ಶ್ರೀ ನಾಗೇಶ್ ಹೆಗಡೆಯವರು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದ ಡಾ.ಆರ್.ಕೆ

**3ನೇ ಪುಟದಿಂದ**

ಮತ್ತು ನಮ್ಮ ವೈದ್ಯ ಸಂಪದದ ವಿಭಾಗೀಯ ಸಂಪಾದಕರಾದ ಡಾ ಕವಿತಾ ಸದಾಶಿವ ಅವರ ಅಕಾಲಿಕ ನಿಧನ ನಮಗೆಲ್ಲರಿಗೂ ಆಘಾತದ ವಿಷಯ. ಅವರ ಜೀವನೋತ್ಸಾಹ ನಮಗೆಲ್ಲಾ ಪ್ರೇರಣೆಯ ಸಂಗತಿ.

ರಾಜ್ಯ ಸರಕಾರ ಡಿಸೆಂಬರ್ ನಲ್ಲಿ 80 ಕ್ಕೂ ಅಧಿಕ ನಮ್ಮ ಕ್ಲಿನಿಕ್ ಗಳನ್ನು ಆರಂಭಿಸಿರುವುದು ಸ್ವಾಗತಾರ್ಹ. ಜನವರಿ ಅಂತ್ಯದೊಳಗೆ 400ಕ್ಕೂ ಅಧಿಕ ನಮ್ಮ ಕ್ಲಿನಿಕ್‌ಗಳು ಪ್ರಾರಂಭವಾಗಲಿವೆ. ಇದರಿಂದ ಅಸಾಂಕ್ರಾಮಿಕ ರೋಗಗಳ ಪತ್ತೆ ಮತ್ತು ಚಿಕಿತ್ಸೆಗೆ ಸಹಕಾರಿಯಾಗಲಿದೆ. ಈ ಕ್ಲಿನಿಕ್ ಗಳಲ್ಲಿ ಔಷಧಿ ಮತ್ತು ಮಾನವ ಸಂಪನ್ಮೂಲಗಳ ಕೊರತೆಯಾಗದಂತೆ ಕಾಳಜಿ ವಹಿಸಬೇಕಿದೆ.

ಕೆಲವು ದೇಶಗಳಲ್ಲಿ ಈಗಾಗಲೇ ಕೊರೊನಾದ ಹೊಸ ತಳಿಯಿಂದಾಗಿ ಸಾವುನೋವುಗಳು ಹೆಚ್ಚಾಗಿರುವುದು ಕಂಡು ಬಂದಿದೆ. ಈ ಕುರಿತು ಕೇಂದ್ರ ಮತ್ತು ರಾಜ್ಯ ಸರಕಾರಗಳು ಕ್ರಮಗಳನ್ನು ಕೈಗೊಳ್ಳಬೇಕು. ಭಾರತೀಯ ವೈದ್ಯಕೀಯ ಸಂಘವೂ ತನ್ನ ಸಂಪೂರ್ಣ ಸಹಕಾರ ನೀಡುವುದಾಗಿ ಈಗಾಗಲೇ ಘೋಷಿಸಿದೆ ಮತ್ತು ತನ್ನ ಎಲ್ಲಾ ಸದಸ್ಯರು ಸಕ್ರಿಯವಾಗಿ ಭಾಗವಹಿಸಲು ಕರೆ ನೀಡಿದೆ. ಸಾರ್ವಜನಿಕರು ಸಹ ಸರಕಾರದ ಮತ್ತು ವೈದ್ಯರ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿದೆ.

ಶ್ರೀಮತಿ ನಿರ್ಮಲ ಸೀತಾರಾಮನ ಅವರು ಇತ್ತೀಚಿಗೆ ಎಂ ಜಿ ಆರ್ ವಿಶ್ವ ವಿದ್ಯಾಲಯದ ಘಟಿಕೋತ್ಸವದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತು ಮಾತನಾಡುತ್ತಾ ತಮಿಳುನಾಡಿನಲ್ಲಿ ತಮಿಳಿನಲ್ಲಿ ಉನ್ನತ ಶಿಕ್ಷಣ ನೀಡಲು ಕ್ರಮ ಕೈಗೊಳ್ಳಲು ಕರೆ ನೀಡಿದರು. ಇದು ಎಲ್ಲಾ ರಾಜ್ಯಗಳಿಗೂ ಅನ್ವಯವಾಗಿ ಕನ್ನಡದಲ್ಲಿ ಉನ್ನತ ಶಿಕ್ಷಣ ನೀಡುವ ಕುರಿತು ಸ್ಪಷ್ಟ ಯೋಜನೆ ಮಾಡಬೇಕಿದೆ. ಈ ಕುರಿತು ಎಲ್ಲಾ ಪಾಲುದಾರರ ಅಭಿಪ್ರಾಯ ಮುಖ್ಯ.

2023 ಎಲ್ಲರಿಗೂ ಸಂತಸದಾಯಕವಾಗಿರಲಿ ಎಂಬ ಆಶಯದೊಂದಿಗೆ

ನಿಮ್ಮ ಅಭಿಪ್ರಾಯಗಳಿಗಾಗಿ ಕಾದಿರುವ

ಸರೋಜರವರು ಕಾವ್ಯವನ್ನು ಆಸ್ವಾಧಿಸಿ ಬರೆಯುವ ಕಲೆಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳುವ ಸಲಹೆ ಇತ್ತರು. ವಿದ್ಯಾರ್ಥಿ ದೀಪಿಕಾರವರ ಕವನ ಪ್ರಬುದ್ಧವಾಗಿದೆ ಎಂದು ಬೆನ್ನುತಟ್ಟಿದರು.

ಬಿ.ಜಿ.ಎಸ್.ಕಾಲೇಜಿನ ವಿದ್ಯಾರ್ಥಿಗಳು ಹಾಡಿದ ಗುಂಪುಗಾಯನ ಎಲ್ಲರ ಗಮನಸೆಳೆಯಿತು.ಬರಹಗಾರರ ಸಮಿತಿಯವತಿಯಿಂದ 200ಕನ್ನಡ ಪುಸ್ತಕಗಳನ್ನು ಐ.ಎಂ.ಎ ರಾಜ್ಯ ಶಾಖೆಗೆ ನೀಡಲಾಯಿತು.

ಕಾರ್ಯಕ್ರಮ ಆಯೋಜನೆಗೆ ಶ್ರಮಿಸಿದಡಾ. ಮಧುಸೂದನ ಕಾರಿಗನೂರು, ಡಾ.ವೀಣಾ ಎನ್, ಡಾ.ಶುಭ್ರತಾ ಕೆ.ಎಸ್, ಡಾ.ಅರ್ಜುನ್ ಮಿಥುನ್, ನಿತಿನ್‌ರವರನ್ನು ಸಭೆಎದ್ದುನಿಂತು ಅಭಿನಂದನೆಗಳನ್ನು ಸಲ್ಲಿಸಿದರು.

ವಿಕ್ರಮ್ ಪ್ರಕಾಶನದಿಂದ ಬೆಂಗಳೂರಿನ ಸೇವಾಸದನದಲ್ಲಿ ಡಾ. ನಾ.ಸೋಮೇಶ್ವರ್‌ರವರ "ನುಡಿದರೆ ಮುತ್ತಿನ ಹಾರದಂತಿರಬೇಕು" ಎಂಬ ಪುಸ್ತಕವೂ ಸೇರಿ ಒಟ್ಟು ಐದು ಪುಸ್ತಕಗಳು ದಿನಾಂಕ 26/11/2022 ರಂದು ಬಿಡುಗಡೆಯಾಗಿದೆ. ಸಮಾರಂಭದಲ್ಲಿ ಡಾ.ನಾ. ಸೋಮೇಶ್ವರ್‌ಅವರು ಮಾತನಾಡಿ ಸಂವಹನ ಸರಿಯಾದ ರೀತಿಯಲ್ಲಿ ನಡೆಯದಿದ್ದರೆ ತಪ್ಪಾಗಿ ಅರ್ಥೈಸಿಕೊಳ್ಳುವ ಸಾಧ್ಯತೆಗಳು ಇರುತ್ತವೆ. ಮಾತನಾಡುವ ಕಲೆಯನ್ನು ಮಕ್ಕಳಿಗೆ ಬಾಲ್ಯದಿಂದಲೇ ಕಲಿಸಬೇಕು ಎನ್ನುವ ಬಗ್ಗೆಯೇ ಪುಸ್ತಕ ಬರೆದಿದ್ದೇನೆಂದು ತಿಳಿಸಿದರು. ಸಾವಣ್ಣಪ್ರಕಾಶನದಿಂದ ಬೆಂಗಳೂರಿನ ವಾಡಿಯಾ ಸಭಾಂಗಣದಲ್ಲಿ ಡಾ. ನಾ.ಸೋಮೇಶ್ವರ್‌ರವರ ಇನ್ನೊಂದು ಪುಸ್ತಕ "ನಂಬಿದರೆನಂಬಿ ಬಿಟ್ಟರೆಬಿಡಿ" ಎಂಬ ಪುಸ್ತಕ ಸೇರಿದಂತೆ ಒಟ್ಟು ಹತ್ತು ಪುಸ್ತಕಗಳು ಬಿಡುಗಡೆಯಾದವು. ಡಾ.ನಾ.ಸೋಮೇಶ್ವರ್‌ರವರು ಪುಸ್ತಕಬಿಡುಗಡೆಯ ಸಮಾರಂಭದಲ್ಲಿ ದೇಹದ ಆರೋಗ್ಯಕ್ಕೆ ಆಹಾರದ ಅವಶ್ಯವಿದ್ದ ಹಾಗೇ ಮನಸ್ಸು, ಮೆದುಳು, ಆತ್ಮಕ್ಕೆ ಸೂಕ್ತ ವ್ಯಾಯಾಮ ನೀಡುವುದು ಕೇವಲ ಪುಸ್ತಕಗಳು ಮಾತ್ರ





ಎಂದು ಕಿವಿಮಾತು ಹೇಳಿದರು.

ಡಾ.ನಾ.ಸೋಮೇಶ್ವರ್‌ರವರ "ಪೂರ್ವಸೂರಿಗಳ ಹೆಗಲೇರಿ" ಅನ್ನುವ ಪುಸ್ತಕ ಸ್ವಪ್ನ ಬುಕ್‌ಹೌಸ್‌ನಿಂದ ಇತ್ತೀಚಿಗೆ ಬಿಡುಗಡೆ ಆಯಿತು.ಈ ಪುಸ್ತಕದ ಹಸ್ತಪ್ರತಿಗೆ ಈಗಾಗಲೇ ಐ.ಎಂ.ಎ ಬರಹಗಾರರ ಬಳಗದ ಡಾ.ಸುನಂದ ಕುಲಕರ್ಣಿ ಹಸ್ತಪ್ರತಿ ದತ್ತಿಪ್ರಶಸ್ತಿ ದೊರೆತಿರುವುದನ್ನು ಇಲ್ಲಿ ಸ್ಮರಿಸಬಹುದು.

ದಿನಾಂಕ 16/12/2022ರಂದು ತುಮಕೂರಿನ ವೈದ್ಯಾಧಿಕಾರಿಗಳಾದ ಡಾ.ತಿಮ್ಮರಾಜುರವರು ಜಿಲ್ಲಾಮಟ್ಟದ ಸಾಹಿತ್ಯಸಮ್ಮೇಳನದ ಕವಿಗೋಷ್ಠಿಯಲ್ಲಿ ಕವಿತೆ ವಾಚನಮಾಡಿ ಅಭಿನಂದಿಸಲ್ಪಟ್ಟರು.

ದಿನಾಂಕ 12/11/2022ರಂದು ಐ.ಎಂ.ಎ ಶಿವಮೊಗ್ಗ ಕನ್ನಡಬಳಗದಿಂದ ಕನ್ನಡರಾಜ್ಯೋತ್ಸವ ಆಚರಿಸಲಾಯಿತು. ಡಾ.ಗುರುದತ್ ಕೆ.ಎನ್.ರವರು ಕನ್ನಡನಾಡಿನ ಹಿರಿಮೆ–ಗರಿಮೆ, ಸಂಗೀತ, ವಿಜ್ಞಾನ ಹಾಗೂ ಬಾಹ್ಯಾಕಾಶದ ಕ್ಷೇತ್ರಗಳಿಗೆ ಕರ್ನಾಟಕದ ಕೊಡುಗೆಯ ಬಗ್ಗೆ ಸೊಗಸಾಗಿ ವಿವರಿಸಿದರು. ಡಾ.ವಿನಯ ಶ್ರೀನಿವಾಸ್‌ರವರು ನೆರೆದಿರುವ ಸದಸ್ಯರಿಗೆ ಕನ್ನಡ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಅಧ್ಯಕ್ಷರಾದ ಡಾ.ಅರುಣ್ ಎಂ.ಎಸ್ ಹಾಗೂ ಕಾರ್ಯದರ್ಶಿ ಡಾ.ರಕ್ಷಾರಾವ್ ಉಪಸ್ಥಿತರಿದ್ದರು.

ಭದ್ರಾವತಿಯ ಐ.ಎಂ.ಎ ಕನ್ನಡ ಬಳಗದಿಂದ ದಿನಾಂಕ:20/11/2022ರಂದು ಭೂಮಿಕಾ ಸಂಸ್ಥೆಯ ಸಹಯೋಗದೊಂದಿಗೆ ಕನ್ನಡ ರಾಜ್ಯೋತ್ಸವವನ್ನು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ರಸಪ್ರಶ್ನೆಯೊಂದಿಗೆ ಆಚರಿಸಲಾಯಿತು.

ಐ.ಎಂ.ಎ.ಸುಳ್ಯದಿಂದ ದಿನಾಂಕ 19/11/2022ರಂದು ಸುಳ್ಯದ ಸರ್ಕಾರಿ ಪದವಿಪೂರ್ವ ವಿದ್ಯಾಲಯದಲ್ಲಿ ಕನ್ನಡ ರಸಪ್ರಶ್ನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸರಿಉತ್ತರಕ್ಕೆ ಕನ್ನಡ ಪುಸ್ತಕಗಳನ್ನ ಬಹುಮಾನವನ್ನಾಗಿ ನೀಡಲಾಯಿತು. 100ಕ್ಕೂ ಹೆಚ್ಚು ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಖ್ಯಾತ ನೇತ್ರತಜ್ಞ ಹಾಗೂ ಪ್ರಾಧ್ಯಾಪಕರಾದ ಡಾ.ಪರಸಪ್ಪ ಬಳ್ಳಾರೆಯವರ ನೇತೃತ್ವದಲ್ಲಿ ಬಳ್ಳಾರಿ ವೈದ್ಯಕೀಯ ಕಾಲೇಜಿನ ಕನ್ನಡಸಂಘದಲ್ಲಿ ಈಬಾರಿ ಕನ್ನಡರಾಜೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದ್ದು ಅದರಲ್ಲೂ ಖ್ಯಾತಸಾಹಿತಿ ಹಾಗೂ ಹೋರಾಟಗಾರ್ತಿಯಾದ ಡಾ.ಹೆಚ್.ಎಸ್. ಅನುಪಮಾರವರು ಸಂಪನ್ಮೂಲ ವ್ಯಕ್ತಿಯಾಗಿ ಅತ್ಯುತ್ಕೃಷ್ಟ ರೀತಿಯಲ್ಲಿ ತಮ್ಮ ವಿಷಯ ಮಂಡಿಸಿದ್ದು ಚಿರಸ್ಮರಣೀಯ. ಡಾ.ಮಧುಸೂದನ್ ಕರಗಿನೂರ್‌ಅವರು ಉಪಸ್ಥಿತರಿದ್ದರು.




ನವಂಬರ್ ತಿಂಗಳ 67 ನೇ ಕನ್ನಡರಾಜೋತ್ಸವದ ಪ್ರಯುಕ್ತವಾದ ಬಳಗದ ಕಾರ್ಯಕ್ರಮಗಳ ವರದಿ ವಾಸವಿ ಸಾಹಿತ್ಯ ಕಲಾವೇದಿಕೆ ಸುಳ್ಯ ಹಾಗೂ ರಾಜ್ಯ ಐ.ಎಂ.ಎ ಬರಹಗಾರರ ಸಮಿತಿ ಆಯೋಜಿಸಿರುವ ಸಾಹಿತಿಗಳೊಂದಿಗೆ ಒಂದು ಸಂಜೆ ವಿಶೇಷ ಆನ್‌ಲೈನ್ ಕಾರ್ಯಕ್ರಮದ ನವೆಂಬರ್ ತಿಂಗಳ ವರದಿಯನ್ನು ಪ್ರಸ್ತುತಪಡಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಕನ್ನಡರಾಜ್ಯೋತ್ಸವದ ಹಿನ್ನೆಲೆ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಸೇರಿದಂತೆ ಕನ್ನಡ ಹಾಗೂ ಕರ್ನಾಟಕದ ಇತಿಹಾಸದ ಹಲವಾರು ವಿಚಾರಗಳನ್ನು ಚರ್ಚಿಸಲಾಯಿತು.

ದಿನಾಂಕ 6/11/2022 ರಂದು ಸಂಶೋಧಕರು, ಸಾಹಿತ್ಯಾಸಕ್ತರು ಹಾಗೆಯೇ ಸಂಗೀತವನ್ನೂ ತಮ್ಮ ಆಸಕ್ತಿಯನ್ನಾಗಿ ಮಾಡಿಕೊಂಡು, ಕನ್ನಡ, ಹಿಂದಿ ಹಾಗೂ ಸಂಸ್ಕೃತ ಸೇರಿದಂತೆ ಹಲವು ಭಾಷೆಗಳ ಪರಿಣತಿಯ ಜೊತೆಗೆ ಉತ್ತಮ ಸಂಶೋಧನಾ ಸಂಪನ್ಮೂಲ ವ್ಯಕ್ತಿಯಾಗಿ ಸಮಾಜದಲ್ಲಿ ಗುರುತಿಸಿಕೊಂಡಿರುವ ಡಾ.ಎಸ್.ಕಾರ್ತಿಕ್ ರವರು 72ನೇ ಸಂಚಿಕೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು "ಕನ್ನಡ ಶಾಸನಗಳು, ಮಹತ್ವ ಮತ್ತು ಹಿನ್ನೆಲೆ" ಬಗ್ಗೆ ಸಾಕಷ್ಟು ವಿಚಾರಗಳನ್ನು ತಿಳಿಸಿಕೊಟ್ಟರು. ಕರ್ನಾಟಕದ ಹಲವಾರು ಶಾಸನಗಳ ಮಾಹಿತಿ ಸರಿಯಾಗಿ ಸಿಗದೇ ಇರೋದಕ್ಕೆ ಪ್ರಮುಖ ಕಾರಣ ಏನು ಅನ್ನೋದರ ಜೊತೆಗೆ ಹಲವಾರು ಶಾಸನಗಳನ್ನು ಹೇಗಿದ್ದವು ಅನ್ನೋದರ ಮಾಹಿತಿಯನ್ನು ನೀಡಿದರು.

ದಿನಾಂಕ 13/11/2022ರಂದು ಹಲವಾರು ಭಾಷೆಗಳ ಪರಿಣತಿಯ ಜೊತೆಗೆ ಗಾಯನವನ್ನು ತಮ್ಮ ಹವ್ಯಾಸವನ್ನಾಗಿ ಮಾಡಿಕೊಂಡಿರುವ ಹಾಗೂ ಗಾಯನದಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್ ಮತ್ತು ಏಷ್ಯಾಬುಕ್ ಆಫ್ ರೆಕಾರ್ಡ್‌ಗಳಲ್ಲಿ ದಾಖಲೆ ಮಾಡಿರುವ ಮೂಲತಃ ದಕ್ಷಿಣ ಕನ್ನಡದವರಾದ ಹರೀಶ್ ನಾಯಕ್ ಆಜೇರು ರವರು 73ನೇ ಸಂಚಿಕೆಯ ಕಾರ್ಯಕ್ರಮದಲ್ಲಿ "ಕನ್ನಡ ನಾಡು ನುಡಿ-ಗಾನ ವೈಭವ" ಎಂಬ ವಿಷಯದ ಬಗ್ಗೆ ಮನಬಿಚ್ಚಿ ಮಾತನಾಡಿದರು. ಭಾಷೆ ಅನ್ನೊದು ನಿತ್ಯ ಶಿಶು ಎಂಬ ಮೂಲಕ ತಮ್ಮ ಮಾತನ್ನು ಪ್ರಾರಂಭಿಸಿದ ಹರೀಶ್‌ರವರು ಕನ್ನಡ ಭಾಷೆಯನ್ನು ಮಗುವಿನ ರೀತಿ ಪೋಷಿಸಬೇಕು ಎನ್ನುವ ಮೂಲಕ ಕನ್ನಡ ಭಾಷೆ ಎಷ್ಟು ಸೂಕ್ಷ್ಮವಾಗಿದೆ ಅನ್ನೋದರ ಅಂಶವನ್ನು ತಿಳಿಸಿದರು. ನಾಡಗೀತೆಯನ್ನು ಹಾಡುವ ಮೂಲಕ ಇದರ ಉದ್ದೇಶ ಏನು ಎಂಬುದರ ವಿಶೇಷವನ್ನು ತಿಳಿಸಿಕೊಟ್ಟರು. ಕನ್ನಡ ಭಾಷೆಯಲ್ಲಿ ಆಂಗ್ಲರ ಭಾಷೆಯನ್ನು ಬಳಸುವವರಿಗೆ ಕಿವಿಮಾತುಗಳನ್ನು ಹೇಳುವ ಮೂಲಕ ಕನ್ನಡದ ಶ್ರೇಷ್ಠತೆಯನ್ನು ಕನ್ನಡದ ಹಾಡುಗಳ ಮೂಲಕ ಕೇಳುಗರ ಕಿವಿ ನಿಮಿರುವಂತೆ ಮಾಡಿದರು.

ದಿನಾಂಕ 20/11/2022 ರಂದು ಪ್ರಾಧ್ಯಾಪಕರು, ಸಂಯೋಜಕರು, ಶಿಕ್ಷಣ ರತ್ನ ಪ್ರಶಸ್ತಿ ವಿಜೇತರು ಹಾಗೂ ಉತ್ತಮ ಬರಹಗಾರರು ಆದ ಡಾ.ಲಲಿತಾಂಬ ಎನ್. ಆರ್ ರವರು 74ನೇಸಂಚಿಕೆಯ ಕಾರ್ಯಕ್ರಮದಲ್ಲಿ "ಕನ್ನಡ ನಾಡಿನ ವೀರಪರಂಪರೆ" ಎಂಬ ವಿಷಯದ ಕುರಿತು ಹಲವಾರು ವಿಚಾರಗಳನ್ನು ವಿನಿಮಯ ಮಾಡಿಕೊಂಡರು. ಕನ್ನಡದ ಭಾಷೆ ಹಾಗೂ ಅದರ ವೈಭವ ಹಲವಾರು ವರ್ಷಗಳಿಂದ ಅನ್ಯ ಸಂಸ್ಕೃತಿಗೆ ಸಿಕ್ಕಿ ನಾಶವಾಗದಂತೆ ಕಾಪಾಡಿಕೊಂಡು ಬರುವಲ್ಲಿ ರಕ್ಷಣಾ ವ್ಯವಸ್ಥೆ ಎಷ್ಟು ಪ್ರಮುಖ ಪಾತ್ರವಹಿಸುತ್ತದೆ ಎಂಬುದರ ಅಂಶಗಳನ್ನು ತಿಳಿಸಿದರು. ನಮ್ಮ ಕನ್ನಡನಾಡನ್ನು ವೀರರನಾಡು ಎಂದು ಸುಮ್ಮನೆ ಕರೆಯುವುದಿಲ್ಲ ಕನ್ನಡದ ಉಳಿವಿಗಾಗಿ ಹೋರಾಟ ಮಾಡಿದ ಅದೆಷ್ಟೋ ಕನ್ನಡಿಗರ ಸಾಹಸವನ್ನು ನಮ್ಮ ಕವಿಗಳು ಸಾಹಿತ್ಯದಲ್ಲಿ ಸಾಕಷ್ಟು ಬಾರಿ ತಿಳಿಸಿದ್ದಾರೆ ಹಾಗಾಗಿ ಕನ್ನಡ ನಾಡಿನ ವೀರಪರಂಪರೆ ಕೇವಲ ನಿನ್ನೆ ಮೊನ್ನೆಯದಲ್ಲ ಇದಕ್ಕೆ ಹಲವಾರು ವರ್ಷಗಳ ಇತಿಹಾಸದ ದಾಖಲೆಗಳೇ ಸಾಕ್ಷಿಯಾಗಿದೆ ಎಂದು ಕನ್ನಡದ ವೀರಪರಂಪರೆ ಪ್ರಬುದ್ಧತೆಯನ್ನು ಎತ್ತಿಹಿಡಿದರು.

ದಿನಾಂಕ 27/11/2022ರಂದು ಹೊಸ ತಲೆಮಾರಿನ ಗಂಭಿರ ವಿಮರ್ಶಕರು ಹಾಗೂ ಕನ್ನಡಕಾವ್ಯಗಳು, ಜೈನ, ಬೌದ್ಧ ಮತ್ತು ಶಾಸ್ತ್ರ ಸಾಹಿತ್ಯ ವಿಷಯದಲ್ಲಿ ಪರಿಣಿತಿ ಪಡೆದಿರುವ ಶ್ರೀಯುತ ಜಿ.ಬಿ. ಹರೀಶ್‌ರವರು

75ನೇ ಸಂಚಿಕೆಯ ಕಾರ್ಯಕ್ರಮದಲ್ಲಿ "ಮ.ಗೋವಿಂದ ಪೈಅವರ ಕರ್ನಾಟಕ ಕನ್ನಡ ದರ್ಶನ" ಎಂಬ ವಿಷಯದ ಕುರಿತಾಗಿ ಮಾತನಾಡಿದರು. ಗೋವಿಂದ ಪೈ ರವರು ತಮ್ಮ ಕಾಲಾವಧಿಯಲ್ಲಿ ಒಪ್ಪುವ ಜೊತೆಗೆ ಒಪ್ಪಲಾಗದ ವಿಚಾರಗಳ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿದ ಕೆಲವು ಉದಾಹರಣೆಗಳನ್ನು ಕೊಡುವ ಮೂಲಕ ಗೋವಿಂದ ಪೈರವರು ವ್ಯಕ್ತಿತ್ವ ಹೇಗಿತ್ತು ಅನ್ನೋದರ ಸತ್ಯಾಸತ್ಯತೆಯನ್ನು ತೆರೆದಿಟ್ಟರು. 2ಸಾವಿರ ವರ್ಷಗಳ ಇತಿಹಾಸವನ್ನು ಕನ್ನಡ ಹೊಂದಿದೆ ಅನ್ನೋ ವಿಚಾರ ಗೋವಿಂದ ಪೈಗಳು ಸಾಕಷ್ಟು ಬಾರಿ ತಮ್ಮ ಬರಹದ ಮೂಲಕ ಯಾವ ರೀತಿ ಅದನ್ನು ತೋರ್ಪಡಿಸಿದರು ಅನ್ನೋದನ್ನು ಸ್ಪಷ್ಟೀಕರಿಸಿದರು. ಅವರು ಕರ್ನಾಟಕ ಕನ್ನಡ ದರ್ಶನದಲ್ಲಿ ಕನ್ನಡದ ಅಸ್ತಿತ್ವವನ್ನು ಯಾವರೀತಿ ಬಿಂಬಿಸಿದ್ದಾರೆ ಹಾಗೂ ಕನ್ನಡಭಾಷೆ ಅನ್ಯಭಾಷೆಗಳಿಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಯಾವ ರೀತಿ ಚಿತ್ರೀಕರಿಸಿದ್ದಾರೆ ಎನ್ನುವುದನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ದಿನಾಂಕ 18/12/2022ರಂದು 76ನೇ ಕಾರ್ಯಕ್ರಮದಲ್ಲಿ ರೋಗ ನಿಧಾನ ಶಾಸ್ತ್ರದ ಪ್ರಾಧ್ಯಾಪಕರು ಹಾಗೂ ಕರ್ನಾಟಕ ಹಿಮೋಫಿಲಿಯ ಸೊಸೈಟಿಯ ಸ್ಥಾಪಕರಾದ ಡಾ.ಸುರೇಶ ಹನಗವಾಡಿಯವರು ಕುಸುಮ ರೋಗ (ಹಿಮೋಫಿಲಿಯ)ದ ಬಗ್ಗೆ ಮಾತನಾಡಿದರು. ಸುರೇಶ್‌ರವರು ಮೂಲತಃ ದಾವಣಗೆರೆಯವರಾಗಿದ್ದು, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಹಿಮೋಫಿಲಿಯ ಅಂದರೆ ಏನು ಹಾಗೂ ಇದರಿಂದ ಯಾವ ರೀತಿಯ ತೊಂದರೆಗಳಾಗುತ್ತವೆ ಅನ್ನೋದನ್ನು ಕೆಲವು ನಿದರ್ಶನಗಳ ಮೂಲಕ ತಿಳಿಸಿಕೊಟ್ಟರು.







ಅದೇ ರೀತಿ ಸುರೇಶ್ ಹನಗವಾಡಿಯವರು ಕೂಡಾ ಹಿಮೋಫಿಲಿಯಾದಿಂದ ಅನುಭವಿಸಿದ ಕಷ್ಟದ ದಿನಗಳನ್ನು ನೆನೆಯುವ ಮೂಲಕ ರೋಗದ ಲಕ್ಷಣ ಹೇಗಿತ್ತು ಅನ್ನೋದನ್ನು ತಿಳಿಸಿಕೊಟ್ಟರು. ಇದರ ಜೊತೆಗೆ ಇವರು ಹಿಮೋಫಿಲಿಯ ರೋಗಕ್ಕೆ ಬೇಕಾದ ಔಷಧಿಗಳ ಬೆಲೆ ಜಾಸ್ತಿ ಇದ್ದು ಅದನ್ನು ಬಡವರಿಗೆ ಉಚಿತವಾಗಿ ಒದಗಿಸುವ ಕಾರ್ಯಕ್ಕೆ ಮುಂದಾದ ಪ್ರಸಂಗವನ್ನು ನೆನಪಿಸಿಕೊಂಡರು. ಅದಕ್ಕೆ ಅಂದಿನ ಸರ್ಕಾರ ಹಾಗೂ ವಿಶ್ವ ಆರೋಗ್ಯ ಸಂಸ್ಥೆ ಯಾವರೀತಿ ಸಹಾಯ ಹಸ್ತ ಚಾಚಿತ್ತು ಎನ್ನುವುದರ ಬಗ್ಗೆ ಮಾಹಿತಿ ನೀಡಿದರು.

ತಾನು ಸಮಸ್ಯೆಯಿಂದ ಬಳಲುತ್ತಿದ್ದಾಗಲೂ ಅದನ್ನು ಲೆಕ್ಕಿಸದೇ ತನ್ನದೇ ಸಮಸ್ಯೆಯಿಂದ ಬಳಲುತ್ತಿರುವ ಮಾನವ ಬಂಧುಗಳಿಗೆ ದಾರಿದೀಪವಾಗುವಂತೆ ಬಳಲುತ್ತಿರುವ ಸುರೇಶ್ ಸರ್ ಎಲ್ಲರಿಗೂ ಆದರ್ಶ ವೈದ್ಯ ಸಹೃದಯಿ, ವಿಶ್ವಮಾನವ. ಅವರ ಈ ಸೇವೆ ಇನ್ನಷ್ಟು, ಮತ್ತಷ್ಟು ಅವಶ್ಯವಿದ್ದವರಿಗೆ ತಲುಪಲಿ ಎಂದು ಬಳಗದ ಎಲ್ಲರ ಆಶಯ.

ಡಾ ಎಚ್ ಎಸ್ ಅನುಪಮಾ ಅವರು ಭಾರತದ ಪ್ರಪ್ರಥಮ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರ ಸ್ಮರಣಾರ್ಥ ನೀಡಲಾಗುವ "ಅಕ್ಷರದವ್ವ" ರಾಜ್ಯ ಪ್ರಶಸ್ತಿ ಮತ್ತು ಈ ಸಾಲಿನ ಡಾ ಪಿ ಎಸ್ ಶಂಕರ್ ಪ್ರಶಸ್ತಿಗೆ ಭಾಜನರಾಗಿರುವುದು ಅಭಿನಂದನೀಯ.

ಇಷ್ಟೇ ಕಾರ್ಯಕ್ರಮಗಳಲ್ಲದೆ ಬಳಗದ ಹಲವು ಹಿರಿಯ-ಕಿರಿಯ ವೈದ್ಯ ಸಾಹಿತಿಗಳು ನಾಡಿನ ಪ್ರಸಿದ್ಧ ನಿಯತಕಾಲಿಕಗಳಲ್ಲಿ ತಮ್ಮ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಾ ಕನ್ನಡ ವೈದ್ಯ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನು ನೀಡುತ್ತಲೇ ಬಂದಿರುತ್ತಾರೆ. ಹಲವಾರು ಕನ್ನಡ ಪರ ಸಾಹಿತ್ಯ, ಸಂಗೀತ, ನೃತ್ಯ ಚಟುವಟಿಕೆಗಳಲ್ಲಿ ತಮ್ಮ ಸೇವೆಯನ್ನು ಮುಂದುವರಿಸುತ್ತಿದ್ದಾರೆ. ಕನ್ನಡ ಭಾಷೆ ಎಲ್ಲರ ಉಸಿರಾಗಲಿ.

## ಕಾವ್ಯ ಸಂಪದ



**ಡಾ. ಮೃದುಲ ಬಸವರಾಜ.**
ನವಜಾತ ಶಿಶು ತಜ್ಞೆ
ಇ ಎಸ್ ಐ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.



**ಡಾ. ಗೋವಿಂದ ಹೆಗಡೆ**
ವಿಭಾಗೀಯ ಸಂಪಾದಕರು

### ನೀನೊಂದು ನೆನಪಷ್ಟೇ

ತಂಗಾಳಿ ಸುಳಿವಾಗ,
ಜಡಿಮಳೆಯು ಸುರಿವಾಗ,
ಅರೆಘಳಿಗೆ ಬಂದ್ಹೋಗೋ
ಸಣ್ಣ ನಡುಕದ ಹಾಗೆ –
ಬಲು ಚಿಕ್ಕ ನೆನಪಷ್ಟೇ.

ಮುಂಗಾರ ಮಳೆಯಲ್ಲಿ,
ಮೋಡಗಳ ಮರೆಯಿಂದ,
ಒಮ್ಮೊಮ್ಮೆ ಇಣುಕುತಿಹ
ಸೂರ್ಯ ಕಿರಣದ ಹಾಗೆ,
ಬೆಚ್ಚನೆಯ ನೆನಪಷ್ಟೇ.

ಮನದಲ್ಲೇ ಅಡಗಿದ್ದು,
ನಾನೆಷ್ಟೇ ನೆನೆಸಿದರು,
ಸ್ವರವಾಗಿ ಹೊರಬರದ
ಆ ಹಳೆಯ ಹಾಡಂತೆ,
ಮರೆತ್ಹೋದ ನೆನಪಷ್ಟೇ.

ಹಳೇ ಅಜ್ಜಿ ಕಥೆಯಲ್ಲಿ,
ರಾಜಕುವರಿಯ ಉಳಿಸೆ,
ಹಯವೇರಿ ಬಂದಂಥ
ವೀರಕುವರನ ಹಾಗೆ
ಕಾಲ್ಪನಿಕ ನೆನಪಷ್ಟೇ.

ಇದ್ದರೂ ಇರದಂಥ,
ಕಂಡರೂ ಸಿಗದಂಥ,
ಕ್ಷಣದಲ್ಲಿ ಮರೆಯಾಗೋ
ಮಾಯಾಮೃಗದ ಹಾಗೆ,
ಮನದ ಮರೀಚಿಕೆಯಷ್ಟೇ !

ಕನಸೋ ಕಲ್ಪನೆಯೋ,
ಬಿಸಿಲೋ ಚಳಿಮಳೆಯೋ,
ಮರೆತರೂ ನೆನಪಿರುವ ಆ
ಮೊದಲ ಪ್ರೇಮದ ಹಾಗೆ
ನೀ– ಕೈಗೆಟುಕದ ಕನಸಷ್ಟೇ

ನೀನೊಂದು ನೆನಪಷ್ಟೇ !



**ಡಾ ಶ್ರೀನಿವಾಸ ಹರಪನಹಳ್ಳಿ**
ಅರಿವಳಿಕೆ ತಜ್ಞರು
ತತ್ವದರ್ಶ ಆಸ್ಪತ್ರೆ ಹುಬ್ಬಳ್ಳಿ –23

### ಮಳೆ-ಇಳೆ

ಇಷ್ಟೊಂದು ಪ್ರೀತಿಯನು ಸುರಿಸದಿರು ಮಾರಾಯ
ಪ್ರೀತಿಯಲಿ ತೊಯ್ದು ತೊಪ್ಪೆಯಾಗಿಹೆನು

ನಿಜ, ಮೇಘಸಂದೇಶಗಳಿಗೆ ಕಾದಿದ್ದೆ
ನನ್ನ ಬಿಸಿಯುಸಿರ ನಿನಗೆ ಸೋಕಿಸಿದ್ದೆ

ಅರಳಿ, ನಲಿದು ನನ್ನೆದೆಯನ್ನು ಬರಿದಾಗಿಸಿಕೊಂಡು
ನಿನ್ನ ಬರುವಿಕೆಯಲ್ಲೇ ಬೆವರಿದ್ದೆ

ಕೊನೆಗೂ ನೀ ಬಂದಾಗ ಎಂತಹ ನಾಚಿಕೆ ನನ್ನಲ್ಲಿ!
ನನ್ನ ಮೈಯೆಲ್ಲಾ ಪರಿಮಳ, ಮನದಲ್ಲಿ ಮಿಂಚು
ಆಷಾಢದ ಮಿಲನ, ಮಿತವಾದರೂ ಹಿತ
ಇಂದ್ಯಾಕೋ ನೆನಪಾಗುತ್ತಿವೆ ಮತ್ತೆ

ಕಾಲದ ಮಹಿಮೆಯೇನೋ ನಾ ಕಾಣೆ
ನಿತ್ಯನೂತನ ಸುಂದರಿಯಾಗಿ ಉಳಿದಿಲ್ಲ ನಾನು
ಸಿಂಗರಿಸುವ ಸಖಿಯರೆಲ್ಲ ತುಂಡಾಗಿ ಬರಡಾಗಿದ್ದಾರೆ.
ತನುವೆಲ್ಲ ಮಕ್ಕಳಾಟದಿಂದ ಘಾಸಿಯಾಗಿದೆ

ಇಷ್ಟೊಂದು ಪ್ರೀತಿಯನು ಸುರಿಸದಿರು ಮಾರಾಯ
ಪ್ರೀತಿಯಲಿ ತೊಯ್ದು ತೊಪ್ಪೆಯಾಗಿಹೆನು.



**ಡಾ.ಸುನೀಲಚಂದ್ರ ಅವರಾದಿ**
ಬೆಂಗಳೂರು

## ನಿಸರ್ಗ ವೈಭವ...

ಸಖಿಯೆ ನೋಡು ಸೊಬಗಿನ ಭಾನು
ಸಾಗರ ತೆರೆಗಳು ನಲಿಯಲು ತಾನು
ಸಿಡಿಲಿನ ಗುಡುಗನು ಕೇಳುತಲಿ
ಸೀಮೆಯ ಅಂಚಲಿ ರಂಗನು ನೋಡು

ಸುರಿದಿದೆ ಮಳೆಯನು ಕಪ್ಪನೆ ಮುಗಿಲು
ಸೂಡನು ಕಟ್ಟಿ ರೈತನು ನಡೆಯಲು
ಸೃಷ್ಟಿಯ ಸುಂದರ ದೃಶ್ಯವ ಕಾಣು
ಸೆಳೆದಿದೆ ಎಲ್ಲರ ಕಣ್ಮನಗಳನು

ಸೇರಿದ ನೇಸರ ಪಡುವಣ ಕಡಲು
ಸೈನಿಕ ತೆರಳಿಹ ನಾಡನು ಕಾಯಲು
ಸೊಗಸು ಎನಿತು ಭುವಿಯ ಮಡಿಲು
ಎಲ್ಲವನು ಸೋಜಿಗ ತಂದವನು?

ಸೌರಭ ಸೂಸುವ ಸುಮಗಳು ಅಲ್ಲಿ
ಸಂಜೆಯ ಸೊಬಗು ಮೆರೆದಿದೆ ಇಲ್ಲಿ....



**ಡಾ. ಶ್ರೀಶೈಲ ಮಾದಣ್ಣವರ**
ಯಲ್ಲಾಪುರ

## ಮಧು ಚಂದ್ರ

ಚಂದ್ರ ಹೊಳೆದು ಸಿಕ್ಕರೇನು?
ಅವನು ನಲ್ಲ ಅಲ್ಲ ಗೆಳತಿ:
ಇಂದ್ರನಂತೆ ನಕ್ಕರೇನು?
ಅವನ ಹೃದಯ ಕಲ್ಲು ಒಡತಿ!

ಕಾಯ ಬೇಕು ಘಳಿಗೆ ಘಳಿಗೆ
ಮೋಡ ಹಿಂದೆ ಅವನ ನಡಿಗೆ:
ತಾರೆ ಜೊತೆಗೆ ಅವನ ಸಲುಗೆ
ಸವತಿ ನೆರಳು ನಿನ್ನ ಎದೆಗೆ!

ಬಯಸಿ ನೀನು ಅವನ ಸರಸ
ಕಾಲ ಕಳೆದೆ ವರುಷ ವರುಷ:
ಇರುವೆ ನಾನು ಬೆರೆಸಿ ಹರುಷ
ಇಣುಕು ಹೃದಯ ಏಕೆ ವಿರಸ?!

ಹಗಲು ಇರುಳು ನಿನ್ನ ಬಳಿಗೆ
ಸುಳಿದು ಮನದ ಒಳಗೆ ಹೊರಗೆ,
ಬೆಳದಿಂಗಳು ಸುರಿದು ನಿನಗೆ
ಮಧುಚಂದ್ರ ಆದೆ ಕೊನೆಗೆ!

## ವೈದ್ಯಕೀಯ ಕನ್ನಡ ಪಾರಿಭಾಷಿಕ ಪದಗಳು

**1.ಅಪೆಂಡಿಕ್ಸ್ :**

ಇದು 16 ನೇ ಶತಮಾನದಲ್ಲಿ ಠಂಕಿಸಿದ ಲ್ಯಾಟಿನ್ ಪದವಾಗಿದ್ದು, 'ಅಪೆಂಡಿರಿ'– 'ತೂಗು ಹಾಕು' ಎಂದು ಇದರರ್ಥ.

## ಕನ್ನಡ ಪಾರಿಭಾಷಿಕ ಪದಗಳು :

**ಕರುಳ ಬಾಲ,** (ಕರುಳುವಾಳ, ನಾಳದ ಹುಳ, ಹುಳುಗರುಳು, ಅಂಟುಗಂತಿ)

**2. ರೆಫೆರಲ್ ವೆಲ್ಯುಸ್:** ಉಲ್ಲೇಖಿತ ಮೌಲ್ಯಗಳು.

**3. ರೆಫೆರಲ್ ರೆಂಜ್ :** ಉಲ್ಲೇಖಿತ ಶ್ರೇಣಿಗಳು (ಉಲ್ಲೇಖಿತ ಮಧ್ಯಂತರ)

**4. ಡಿಹೈಡ್ರೆಶನ್ :** ನಿರ್ಜಲೀಕರಣ.

**5. ಲಾಕ್ರಿಮೆಟ್ :** ಅಶ್ರುಕರಿಸು.



**ಡಾ ಸೌಮ್ಯ ಕೆ.ವಿ.**
ನೇತ್ರ ತಜ್ಞರು, ತಾಲೂಕು ಆಸ್ಪತ್ರೆ
ಯಲ್ಲಾಪುರ, 9449148264

## ಮತ್ತೆ ಭೇಟಿಯಾದ ಕವಿತೆ!

ದೋಸೆ ಹೆಂಚು ಚುಂಯ್‌ಗುಟ್ಟಿದಾಗ
ನನ್ನ ಕವನದ ಸಾಲೊಂದು
ಆವಿಯಾಯಿತೆಂದುಕೊಂಡೆ;
ಕುಕ್ಕರಿನ ಸೀಟಿ ಸರ್ರೆಂದಾಗ
ನನ್ನ ಕವನದ ಸಾಲೊಂದು
ಕರಗಿತೆಂದುಕೊಂಡೆ;
ಮುಸುರೆ ತಿಕ್ಕಿದ ನೀರು ಮೋರಿಯೊಳಗಿಳಿದಾಗ
ನನ್ನ ಕವನದ ಸಾಲೊಂದು
ಹರಿದೇಹೋಯಿತೆಂದುಕೊಂಡೆ;

ಇನ್ನುಳಿದಿದ್ದು ನಾಕಾರು ಪದಗಳು...

ಹೀಗೇ..ಶವಾಗಾರದ ಹೊರಮೆಟ್ಟಿಲಲ್ಲಿ
ಕುಕ್ಕರಿಸಿದವರ ಬಿಕ್ಕುಗಳಲಿ
ರವರವ ಹೊಡಕೊಂಬ
ಅಂಬ್ಯೂಲೆನ್ಸ್ ಸೈರನ್ನುಗಳಲಿ
ಕಣ್ರೆಪ್ಪೆ ಬಡಿತಗಳಲಿ ನಿಟ್ಟುಸಿರ ನೋವುಗಳಲಿ
ಪದಗಳೆಲ್ಲ ಪಕಳೆಗಳಾಗಿ ಉದುರಿದವೆಂದುಕೊಂಡೆ;

ಕಳೆದುಕೊಂಡಿದ್ದ ಕವಿತೆ ಸಾಲುಗಳು
ಮುಖಾಬಿಲೆಯಾದವು ಗುಹೆಯೊಡಲಲಿ!!
ಝೇಂಕರಿಸುತ್ತ ಶಿಲ್ಪದೊಳು!
ಕೆತ್ತಿದವನ ಕೈಚಾಣ ಕಿಣಿಕಿಣಿಗುಟ್ಟಿತೇ?
ಕಣ್ನೋಟ ಬೆರೆತಾಗ ಗೆಜ್ಜೆ ಝಲ್ಲೆಂದಿತೆ?
ಯೋಧ ಮಗನ ನೆನಹಲಿ
ಹೆತ್ತೊಡಲು ಗಂಟೆ ಢಣಗುಡಿಸಿತೇ??
ಕವಿತೆಯೇ ಕತೆ ಹೇಳಿತ್ತು!
ಮೌನ ಅನುಸಂಧಾನದಿ..



**ಡಾ. ಕವಿತಾ ಸದಾಶಿವ**
ಭದ್ರಾವತಿ

## ಸೂಕ್ಷ್ಮದರ್ಶಕ

**ಮೇಷ್ಟ್ರು** : ರಾಮು ಚಿತ್ರ ಬಿಡಿಸಿಲ್ವಾ ?
**ರಾಮು** : ಬಿಡಿಸಿದ್ದೇನೆ ಸರ್, ನೋಡಿ.
**ಮೇಷ್ಟ್ರು** : ಬರೇ ಖಾಲಿ ಪೇಪರ್ ಇದೆ...ಏನೂ ಕಾಣ್ತಾ ಇಲ್ವಲ್ಲೋ!
**ರಾಮು** : ಸೂಕ್ಷ್ಮದರ್ಶಕದಲ್ಲಿ ನೋಡಿ ಸರ್.
**ಮೇಷ್ಟ್ರು** : ಏನೋ ಅದು?
**ರಾಮು** : ಸರ್, ಅದು ಬ್ಯಾಕ್ಟೀರಿಯಾ ಚಿತ್ರ... ಬರೀ ಕಣ್ಣಿಗೆ ಕಾಣೋದಿಲ್ಲ. ಸೂಕ್ಷ್ಮದರ್ಶಕದಲ್ಲಿ ಕಾಣುತ್ತೆ!

## ಚಿಣ್ಣರ ಲೋಕ




**ಕುಮಾರಿ. ಭೂಮಿಕಾ**
9 ನೆ ತರಗತಿ
ಭದ್ರಾವತಿ.
ತಾಯಿ: ಡಾ. ಅನುಪಮ ಶೆಣೈ
ತಂದೆ : ಡಾ. ರಾಮಚಂದ್ರ ಕಾಮತ್



ಡಾ.ರಮೇಶಬಾಬು ಕೆ
ಹುಬ್ಬಳ್ಳಿ

# ವೈದ್ಯಕೀಯ ಪದಬಂಧ–7

ಡಾ. ರಮೇಶ ಬಾಬು ಕೆ
ಹುಬ್ಬಳ್ಳಿ



**ಸೂಚನೆ: ಸುಳಿವುಗಳಲ್ಲಿ ಇಂಗ್ಲೀಷ್ ಪದಗಳನ್ನು ಬಳಸಿದ್ದರೂ ಸರಿಯುತ್ತರಗಳೆಲ್ಲವೂ ಕನ್ನಡದಲ್ಲಿಯೇ ಇವೆ.**

**ಸುಳಿವುಗಳು**

**ಎಡದಿಂದ ಬಲಕ್ಕೆ:**

1.Resuscitation ನ್ನು ಹೀಗೆ ಕರೆಯಬಹುದಲ್ಲವೇ? (5)
3. ಇತ್ತೀಚೆಗೆ ತೆಲಂಗಾಣದಲ್ಲಿ ಕಾಣಿಸಿಕೊಂಡ 'ಪಾನಿಪುರಿ ಜ್ವರ' ದ ಸರಿಯಾದ ಹೆಸರು – – – – – – ಜ್ವರ (5)
5. Hirudotherapyಯಲ್ಲಿ ಬಳಸಲಾಗುವ ಜೀವಿ (3)
6. Trophic hormone ನ್ನು ಹೀಗೆ ಕರೆಯಬಹುದು (4)
7. Inner ear ನ್ನು ಹೀಗೂ ಕರೆಯಬಹುದೇ? (4)
8 ಮತ್ತು 9 ಇದು Trigeminal nerve ಗೆ ವ್ಯಾಪಿಸಿದರೆ ಕಣ್ಣಿಗೆ ಹಾನಿಯಾಗಬಹುದು (2,2)
10. ಅಡುಗೆಯಲ್ಲಿಯೂ ಬಳಸುವ ಈ ಔಷಧೀಯ ಸಸ್ಯವನ್ನು Galen ಕೂಡಾ ಗುರುತಿಸಿದ್ದನಂತೆ (4)
13. ಅಂಗದ ನೀಡಿದ ದಾನವೇ? (4)
14. ಇದು ಪಿತ್ತಕೋಶದಲ್ಲಿಯಾಗಲೀ ಮೂತ್ರಕೋಶದಲ್ಲಿಯಾಗಲೀ ಉಂಟಾಗಬಹುದು (3)
16. ಸಾವಿನಂಚಿನಲ್ಲಿರುವ ರೋಗಿಗೆ ಕೇವಲ ಈ ಬಗೆಯ ಚಿಕಿತ್ಸೆಯನ್ನು ಮಾತ್ರ ನೀಡಬಹುದು (5)
17. ಅಪಸ್ವರವಲ್ಲ ಈ ಮಿದುಳಿನ ಕಾಯಿಲೆ (4)
18. Microbe ಗೆ ಸಂವಾದಿ ಕನ್ನಡ ಪದ (4)
20. ಜ್ಞಾನೇಂದ್ರಿಯಗಳನ್ನು ಹೀಗೂ ಕರೆಯುತ್ತಾರೆ (4)
22. ವೈದ್ಯನಿಗೆ ರೋಗಿಯ ಬಗ್ಗೆ ಇರಲೇಬೇಕಾದ ಮನೋಭಾವ (4)
23. ಹದಿವಯಸ್ಸಿನವರ ಹಳವಂಡ ಈ ಚರ್ಮದ ಸಮಸ್ಯೆ (3)
24. Tinea corporis ಕೂಡಾ ಇಂತಹ ಪರಿಸ್ಥಿತಿಯನ್ನು ಉಂಟುಮಾಡಬಹುದಂತೆ (5)
25. ಚಿಕ್ಕಮಕ್ಕಳ ಕತ್ತು ಹಿಸುಕುತ್ತಿದ್ದ ಈ ಮಾರಿ ಇತ್ತೀಚೆಗೆ ಕಾಣಿಸುತ್ತಿಲ್ಲ (5)

**ಮೇಲಿನಿಂದ ಕೆಳಕ್ಕೆ:**

1. Re-entry phenomenon ಎಂಬುದನ್ನು – – – – – ವಿದ್ಯಮಾನವೆನ್ನಬಹುದು (5)
2. ಈ ಬಹುಪರಿಚಿತ ಕೀಟ ಚಾಗಾ (Chaga) ಕಾಯಿಲೆಯನ್ನು ಹರಡಬಲ್ಲದು (3)
4. Genetics ನ್ನು ಕನ್ನಡದಲ್ಲಿ ಹೀಗೆ ಕರೆಯಬಹುದೇ? (5)
11. ಸೀಸದ (Lead) ವಿಷಪರಿಣಾಮದಲ್ಲಿ ಇದರ ಅಂಚಿನಲ್ಲಿ ನೀಲಿಗೆರೆ ಕಾಣಿಸಬಹುದು (3)
12. ಕೇಸಾನ್ (Caisson) ಪರಿಸ್ಥಿತಿಯಲ್ಲಿ ರೋಗ ಲಕ್ಷಣಗಳನ್ನುಂಟು ಮಾಡುವ ಅನಿಲ (5)
15. – – – ಎಣ್ಣೆ ಸಾಮಾನ್ಯವಾಗಿ ವಿಷವೆಂದು ಪರಿಗಣಿಸದಿದ್ದರೂ, ಚಿಕ್ಕಮಕ್ಕಳಲ್ಲಿ ಇದರ ಸೇವನೆ ಪ್ರಾಣಾಂತಿಕವಾಗ ಬಲ್ಲದು (3)
17. ಮೂಳೆಗಳಿಂದಾದ ಹಂದರ (5)
19. ವಿಷಸೇವನೆಯಲ್ಲಿ ಸಚೇತನಗೊಳಿಸಿದ (Activated) ಇದ್ದಿಲನ್ನು – – – – ಯಾಗಿ ಬಳಸುತ್ತಾರೆ.(5)
21. ಬಹಳಷ್ಟು ಜನರು ಸೇವಿಸುವ ಈ ವಸ್ತುವಿನಲ್ಲಿArecholineಅಂಶ ಇರುತ್ತದೆ (3)

**ಪದಬಂಧ 6ರ ಸರಿಯುತ್ತರಗಳು:**

ಎಡದಿಂದ ಬಲಕ್ಕೆ: 1. ಅರಿವಳಿಕೆ 2.ಏಕಾಣುಜೀವಿ 5. ಪಕ್ಷವಾತ 6. ಹರಿತ್ತು 7. ಪಾದರಸ 8. ಲಸಿಕೆ 10. ಅಂಗರಚನೆ 11. ಅರ್ಬುದ 12. ಮಲಿನ 14. ಆತಂಕ 15 ಮತ್ತು 16. ಗಂಡಮಾಲೆ 17. ಚರಕ 20. ಜನ್ಮಜಾತ 21. ಪಾಲಕ್ 22. ಹಿಮ್ಮೆದುಳು 23. ಕಲಬೆರಕೆ 24. ಮಿದುಳುರಿತ
ಮೇಲಿನಿಂದ ಕೆಳಕ್ಕೆ: 1. ಅಕ್ಷಿಪಟಲ 3. ವಿಕಾಸವಾದ 4. ಪರಿಸರ ಮಾಲಿನ್ಯ 9. ಸಿಡುಬು 13. ದಡಾರ 14. ಆಮ್ಲಜನಕ 18. ಕರುಳುರಿತ 19. ಚಲನೆ



ಹನಿಗವನ

**ಡಾ. ಚಂದ್ರಕಲಾ ಸಿ**
ಅರಿವಳಿಕೆ ತಜ್ಞರು, ಬೆಂಗಳೂರು

## ‘ಟೆಕ್‘ ಪತಿ

ಗಣತಂತ್ರ ಸ್ವಾತಂತ್ರ್ಯ
ಎಷ್ಟೋ ದಿನ ಬಂದವೋ
ಗಣಕಯಂತ್ರದಿಂದ ರಜೆ
ಪತಿರಾಯಂಗೆ ಇಲ್ಲವೋ!

“ಶಾಪಿಂಗ್” ಎಂದರೆ
ಶುರುವಾಯಿತು ಇವರಿಗೆ ಮರೆವು
ಯೋಚಿಸಬೇಡಿ ನಾವು
ಬಿಡದಂತೆ ಕಾಡುವೆವು!

ಮುಂಜಾನೆಗಿನ್ನೂ
ನಿದ್ದೆ ಮುಗಿದಿಲ್ಲ..
ಮಧ್ಯಾಹ್ನಕೆ
ಕರೆಗಳು ಶುರುವಾಯಿತಲ್ಲ
ಸಂಜೆಗೆ ಬಿಡುವೇ ಇಲ್ಲ..
ಇವರ ಬಳಿ  ನನಗೆ ‘ಸ್ಲಾಟ್‘‘ ಸಿಗುತ್ತಿಲ್ಲ!



ಹನಿಗವನ

**ಡಾ. ಇಂದಿರಾ**
ದೊಡ್ಡಬಳ್ಳಾಪುರ, ಬೆಂಗಳೂರು

## ಸಂಶಯ

ಕಳೆದ ಸೀರೆಯ ನೆನಪು,
ಹುಡುಕಿ ಹುಡುಕಿ ಬೇಸತ್ತು
ವ್ಯಗ್ರವಾಗಿದೆ ಮನಸ್ಸು.
ಸುಟ್ಟಿರುವಳೇ ಕೆಲಸದವಳು?
ನಾಳೆ ಬರಲಿ ಅವಳು.
ಹಲ್ಲು ಮಸೆಯಿತು.

‘ಇಸ್ತ್ರಿ ಹಾಕಿದೆ,
ಸೀರೆ ಎಲ್ಲಿಡಲಿ ಅಕ್ಕ?‘
ಸೀರೆ ಇಟ್ಟವಳ ಮನ ಶುಭ್ರ..
ಸಂಶಯಿಸಿ ಬೈದವಳ
ಮನವೆಂದು ಶುಭ್ರ ?



**“ಅವ್ವ” ರಾಜ್ಯ ಪ್ರಶಸ್ತಿ ಮತ್ತು ಡಾ. ಪಿ. ಎಸ್. ಶಂಕರ್ ಪ್ರಶಸ್ತಿಗೆ ಭಾಜನರಾದ ಡಾ. ಎಚ್. ಎಸ್. ಅನುಪಮಾ ಅವರಿಗೆ ಹಾರ್ದಿಕ ಅಭಿನಂದನೆಗಳು**

# ಚಿತ್ರ ಸಂಪದ



**ಡಾ. ಅರವಿಂದ ಪಟೇಲ್**
ವಿಭಾಗೀಯ ಸಂಪಾದಕರು



**ಡಾ ಪ್ರಿಯಾ ಭಾಲ್ಕಿ**
ವಿಭಾಗೀಯ ಸಂಪಾದಕರು



## ಬೆಳ್ಳಿಯ ರೇಖೆ

**ಡಾ ನಿತ್ಯಾ ಜಯಕುಮಾರ್**
**ಎಂ.ಡಿ., ಡಿ. ಎನ್.ಬಿ(ಪ್ಯಾಥೋಲಜಿ)**
**ರಾಯಚೂರು**

## ಶಾಂತಿಯಿಂದ ಸಾಗುತಿರಲಿ


**ಡಾ. ಪ್ರಿಯಾ ಭಾಲ್ಕಿ**
**ಚಿಕಿತ್ಸಕ ತಜ್ಞ ವೈದ್ಯರು**
**ರಾಯಚೂರು**






ಪ್ರಕೃತಿಯ ದೃಶ್ಯಕಾವ್ಯ

**ಡಾ॥ ರಾಮಲಿಂಗಾರೆಡ್ಡಿ ಗೋಡಿಹಾಳ್**
ವೈದ್ಯಶಾಸ್ತ್ರ ವಿಭಾಗ, ರಿಮ್ಸ್, ರಾಯಚೂರು



**ಡಾ ಪ್ರವೀಣ್ ಆಚಾರ್**
ರೇಡಿಯೊಲೊಜಿಸ್ಟ್ ಮಂಗಳೂರು



**ಡಾ. ಗೀತಾಂಜಲಿ**
ಮಕ್ಕಳ ತಜ್ಞ
ತುಮಕೂರು



**ಡಾ. ರವೀಶ್ .ಹೆಚ್**
ಸಹಾಯಕ ಪ್ರಾಧ್ಯಾಪಕರು
ನಿಮ್ಹಾನ್ಸ್ ನ್ಯೂರೋಕೆಮಿಸ್ಟ್ರಿ ವಿಭಾಗ, ಬೆಂಗಳೂರು

# ವಿಜಯ ಸೇವಾ ಟ್ರಸ್ಟ್ (ರಿ)

## ಯಕ್ಷಶ್ರೀ ಸಾಗರ






**ಯಕ್ಷಶ್ರೀಯ ಹಿಂದಿನ ಪ್ರದರ್ಶನಗಳು ಹಾಗೂ ಪ್ರಯೋಗಗಳು :**

21-02-2001 – ಶ್ರೀ ಡಿ.ಜಿ. ಹೆಗಡೆ, ಉಡುಪಿ ಅವರಿಂದ ಸಂಕಲನ, ಬಚ್ಚಗಾರು ಸಾಂಸ್ಕೃತಿಕ ವೇದಿಕೆಯಲ್ಲಿ **'ಯಕ್ಷಶ್ರೀ'** ಉದ್ಘಾಟನೆ. ಶ್ರೀ ಅನಂತ ಹೆಗಡೆ ಕೊಳಗಿ ಮತ್ತು ನೀ.ನಾ. ಮಧ್ಯಸ್ಥರುಗಳಿಗೆ ಸನ್ಮಾನ. ನಂತರ ಯಕ್ಷಗಾನ – **'ಚೂಡಾಮಣಿ ಮತ್ತು ರಾಜಾ ಭದ್ರಸೇನ'**

12-05-2001 – ಸಾಗರ – **'ಭಾವನಾ I'** – ಯಕ್ಷಗಾನದ ಆಯ್ದ ರಸ ಸನ್ನಿವೇಶಗಳು – ಪರಿಕಲ್ಪನೆ, ಸಂಯೋಜನೆ ಮತ್ತು ನಿರ್ದೇಶನ : ಡಾ| ಎಚ್.ಎಸ್. ಮೋಹನ್. ನಂತರ **'ಧರ್ಮಾಂಗದ ದಿಗ್ವಿಜಯ'** ಯಕ್ಷಗಾನ.

16-12-2001 – ಸಾಗರ – **'ಯಕ್ಷಗಾನ ಶಾಸ್ತ್ರೀಯವೇ? ಜಾನಪದವೇ?'** ಉಪನ್ಯಾಸ : ಶ್ರೀ ಎಂ.ಎಲ್. ಸಾಮಗ, ಉಡುಪಿ. ನಂತರ ಏಕವ್ಯಕ್ತಿ ಯಕ್ಷನೃತ್ಯ ನಾಟಕ – **'ಪಾಂಚಾಲಿ'**. ರಚನೆ, ಹಿನ್ನೆಲೆ ಮಾತು ಮತ್ತು ನಿರ್ದೇಶನ : ಶ್ರೀ ಉದ್ಯಾವರ ಮಾಧವ ಆಚಾರ್ಯ.

29-06-2002 – ಶಿರಿವಂತೆ – ರಸ್ತೆ ಅಪಘಾತದಲ್ಲಿ ನಿಧನರಾದ ಶ್ರೀ ಡಿ.ಜಿ. ಹೆಗಡೆಯವರಿಗೆ ಶ್ರದ್ಧಾಂಜಲಿ. ನಂತರ **'ಯಕ್ಷಗಾನ ರಸ ಸಂಗಮ'** – ಬಡಗುತಿಟ್ಟಿನ ನಾಲ್ವರು ಖ್ಯಾತ ಭಾಗವತರುಗಳಿಂದ ಸೂಕ್ತ ನಿರೂಪಣೆಯೊಂದಿಗೆ ಯಕ್ಷಗಾನ ಪದ್ಯಗಳು.

03-11-2002 – ಸಾಗರ – **'ವೈದೇಹಿ'** – ಸೀತೆಯ ವ್ಯಕ್ತಿತ್ವ ಬಿಂಬಿಸುವ ಯಕ್ಷಗಾನ ಹೊಸ ಪ್ರಸಂಗ – ಪ್ರಯೋಗ.

06-05-2003 – ಮುಟುಗುಪ್ಪೆ, ಸೊರಬ ತಾಲ್ಲೂಕು – ಯಕ್ಷಗಾನ – **'ಸುಧನ್ವಾರ್ಜುನ'** (ಧಾರ್ಮಿಕ ಕಾರ್ಯಕ್ರಮದಲ್ಲಿ)

29-02-2004 – ಸಾಗರ – **'ಯಕ್ಷ – ನೃತ್ಯ – ಭಾವ ವೈಭವ'**ದಲ್ಲಿ **'ವಿಜಯ ವಿಲಾಸ'** ಮತ್ತು **'ಕರ್ಕಿ ಮೇಳದ ಪ್ರಾತ್ಯಕ್ಷಿಕೆ'**.

19-03-2005 – ಸಾಗರ – **'ಯಕ್ಷಗಾನ ಹಿಮ್ಮೇಳ ವೈಭವ'** – ಮೂವರು ಭಾಗವತರುಗಳು.

10-04-2005 – ಸಾಗರ – **'ಯಕ್ಷಗಾನ ಪೂರ್ವರಂಗ'** ಮತ್ತು **'ಯಕ್ಷೋತ್ತಮರ ಕಾಳಗ'** – ಯಕ್ಷಗಾನ ಕೇಂದ್ರ, ಉಡುಪಿ ಇವರಿಂದ

23-10-2005 – ಶಿರಿವಂತೆ – **'ಯಕ್ಷಗಾನ ಹಿಮ್ಮೇಳ ವೈಭವ'** – ಬಡಗಿನ ಖ್ಯಾತ ಮೂವರು ಹಾಗೂ ತೆಂಕಿನ ಇಬ್ಬರು ಭಾಗವತರುಗಳಿಂದ.

25-06-2006 – ಸಾಗರ – **'ಮೀನಾಕ್ಷಿ ಕಲ್ಯಾಣ'** ಹಾರಾಡಿ ಶೈಲಿಯ ಯಕ್ಷಗಾನ.

30-03-2008 – ಸಾಗರ – **3 ½ ತಾಸಿನಲ್ಲಿ 3 ಕಾಳಗ ಪ್ರಸಂಗಗಳು – ಕಾರ್ತವೀರ್ಯಾರ್ಜುನ, ಸುಧನ್ವಾರ್ಜುನ, ಕೃಷ್ಣಾರ್ಜುನ.**

28-08-2008 – ಸಾಗರ – **'ಲಯ ಲಾಸ್ಯ'** ಯಕ್ಷಗಾನ ಮದ್ದಳೆ – ಹಿಂದೂಸ್ತಾನಿ ತಬಲಾ ಜುಗಲಬಂದಿಯ ಯಕ್ಷಗಾನ ಹಿಮ್ಮೇಳದ ಕಾರ್ಯಕ್ರಮ.

14-12-2008 – ಅಮಟೆಕೊಪ್ಪ, ಸಾಗರ ತಾಲ್ಲೂಕು – ಯಕ್ಷಗಾನ – **'ಸುಧನ್ವಾರ್ಜುನ'**.

01-03-2009 – ಸಾಗರ – **'ಧರ್ಮಾಂಗದ ದಿಗ್ವಿಜಯ'** ಮತ್ತು **'ಶಶಿಪ್ರಭಾ ಪರಿಣಯ'** ಯಕ್ಷಗಾನ ಪ್ರದರ್ಶನ.

14-06-2009 – ಸಾಗರ – **'ನಾದ ಲಾಲಿತ್ಯ'** ಯಕ್ಷಗಾನ ಮತ್ತು ಸುಗಮ ಸಂಗೀತ ಪ್ರಕಾರಗಳ ಗಾಯನ, ದ್ವಂದ್ವ ಮತ್ತು ಜುಗಲಬಂದಿ.

25-10-2009 ರಿಂದ 01-03-2015ರವರೆಗಿನ ಅವಧಿಯಲ್ಲಿ 17 ಕಾರ್ಯಕ್ರಮಗಳು ಪ್ರದರ್ಶನಗೊಂಡಿವೆ.

27-09-2015 – ಸಾಗರ – **'ಯಕ್ಷ – ನಾದ – ನಿನದ'** – ಯಕ್ಷಗಾನ ಪದ್ಯಗಳು ಮತ್ತು ಸುಗಮ ಸಂಗೀತ.

28-12-2015 – ಸಾಗರ – **'ಭೌಮಾಸುರ ಕಾಳಗ'** – ಯಕ್ಷಗಾನ – ನಾಟ್ಯ ತರಂಗ ಸಂಸ್ಥೆಯ ಸಂಸ್ಕೃತಿ ಸಪ್ತಾಹದಲ್ಲಿ.

06-11-2016 – ಸಾಗರ – **'ಯಕ್ಷ – ಗಾಯನ – ವೈವಿಧ್ಯ'** ಯಕ್ಷಗಾನ ಪದ್ಯಗಳು ಮತ್ತು ಸುಗಮ ಸಂಗೀತ.

28-09-2019 – ಸಾಗರ – **'ಯಕ್ಷ – ನಾದ – ಲಾಸ್ಯ'** ಯಕ್ಷಗಾನ ಪದ್ಯಗಳು ಮತ್ತು ಸುಗಮ ಸಂಗೀತ.

---

**ಕರೋನಾ ಲಾಕ್‌ಡೌನ್ ಸಂದರ್ಭದಲ್ಲಿನ ಚಟುವಟಿಕೆಗಳು :**

1. ಏಪ್ರಿಲ್–ಮೇ 2020 – ತೀರಾ ಅಗತ್ಯವಿರುವ ಯಕ್ಷಗಾನದ 55 ಅರ್ಹ ಕಲಾವಿದರುಗಳಿಗೆ ಸುಮಾರು 2 ಲಕ್ಷ ರೂ.ಗಳ ಅರ್ಥಿಕ ಸಹಾಯ.

**ಅನ್‌ಲೈನ್‌ನಲ್ಲಿ ನಾದಾಂಜಲಿ ಫೇಸ್ ಬುಕ್ ಪೇಜ್‌ನಲ್ಲಿ ಯಕ್ಷಗಾನ ಚಟುವಟಿಕೆಗಳು :**

2. ಡಿಸೆಂಬರ್ 2020 – **'ಕಾರ್ತವೀರ್ಯಾರ್ಜುನ'** ಯಕ್ಷಗಾನ – 2 ತಾಸುಗಳಿಗೆ ಸೀಮಿತಗೊಳಿಸಿದ ಪ್ರಯೋಗ.
3. ಫೆಬ್ರವರಿ 2021 – **'ಯಕ್ಷ – ಗಾಯನ'** – ಇಬ್ಬರು ಮಹಿಳಾ ಭಾಗವತರುಗಳಿಂದ ಯಕ್ಷಗಾನ ಪದ್ಯಗಳು.
4. ಜೂನ್ 2021 – ಎರಡನೇ ಲಾಕ್‌ಡೌನ್ ಸಂದರ್ಭದಲ್ಲಿ ಯಕ್ಷಗಾನ **'ಸಮರ ಸೌಗಂಧಿಕೆ'** – ಅಪರೂಪದ ಪ್ರಸಂಗ – ಬಡಗುತಿಟ್ಟಿನಲ್ಲಿ ಮೊಟ್ಟಮೊದಲು.
5. ಜೂನ್ 2021 – ಶ್ರೀಮತಿ ಅಮೃತಾ ಅಡಿಗ ಮತ್ತು ಅವರ ಕುಟುಂಬದವರಿಂದ **'ಸಾಂಪ್ರದಾಯಕ ತೆಂಕಿನ ಯಕ್ಷಗಾನ ಪದ್ಯಗಳು'**.
6. ಸೆಪ್ಟೆಂಬರ್ 2021 – **'ಅನಿಲಾನಲ ಸಂಯೋಗ'** – ಹೊಸ ಯಕ್ಷಗಾನ ಪ್ರಸಂಗ ರಚನೆ (ಸುಬ್ರಹ್ಮಣ್ಯ ಧಾರೇಶ್ವರ) ಮತ್ತು ಪ್ರಯೋಗ. 3 ಭಾಗಗಳಲ್ಲಿ ಪ್ರಸಾರಗೊಂಡಿದೆ.
7. 27 ನವೆಂಬರ್ 2021 – ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ (ಯಕ್ಷಗಾನ ಪ್ರಚಲಿತವಿಲ್ಲದ ಪ್ರದೇಶದಲ್ಲಿ) ಯಕ್ಷಗಾನ **'ಶರಸೇತು ಬಂಧ ಮತ್ತು ಅಭಯಾಂಜನೇಯ'** – ಹೊಸ ಯಕ್ಷಗಾನ ಪ್ರಸಂಗ ರಚನೆ (ಸುಬ್ರಹ್ಮಣ್ಯ ಧಾರೇಶ್ವರ) ಮತ್ತು ಪ್ರಯೋಗ.

---

15 ಮೇ 2022 – ಸಾಗರದಲ್ಲಿ ಮೊಟ್ಟ ಮೊದಲ ಬಾರಿಗೆ – **'ಮಹಿಳಾ ಯಕ್ಷ ಗಾಯನ ಸಂಭ್ರಮ'** – ಅಮೃತಾ ಅಡಿಗ, ಚಿಂತನಾ ಹೆಗಡೆ, ಶ್ರೀ ರಕ್ಷಾ ಹೆಗಡೆ – ಮೂವರು ಮಹಿಳಾ ಭಾಗವತರುಗಳಿಂದ ಯಕ್ಷಗಾನ ಹಿಮ್ಮೇಳ ಕಾರ್ಯಕ್ರಮ.





# ಹೊಸ ವರ್ಷದ ಹಾರ್ದಿಕ ಶುಭಾಶಯಗಳು